ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 13 ಭಾನುವಾರ 2025

₹4

ಸಂಪುಟ: 45 | ಸಂಚಿಕೆ: 353 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು, ನಾಳೆ ಗಾಂಧಿನಗರದಲ್ಲಿ ಭೀಮೋತ್ಸವ



ಮೈಸೂರು, ಏ.12(ಜಿಎ)– ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿ ನಗರ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ನಗರದ ಗಾಂಧಿನಗರ ಬಡಾವಣೆಯಲ್ಲಿ ಏ.13 ಮತ್ತು 14ರಂದು ಭೀಮೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಶರತ್ ಸತೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.13ರಂದು ಸಂಜೆ 6ಕ್ಕೆ ಇಡೀ ಗಾಂಧಿನಗರ ಬಡಾವಣೆಯಲ್ಲಿ ವಿಶೇಷ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದ್ದು, ಗೌತಮ ಬುದ್ಧ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಎರಡು ದೊಡ್ಡ ಕಟೌಟ್‌ಗಳನ್ನು ಅಳವಡಿಸಲಾಗುವುದು. ಬಡಾವಣೆಯ ಬಸ್ ತಂಗುದಾಣದ ಮೈದಾನದಲ್ಲಿ ಧ್ವನಿ ಮತ್ತು ಬೆಳಕು ಲೇಸರ್ ಶೋ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಮತ್ತು ಸಾಧನ ಕುರಿತಾಗಿ ಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಈ ದಿನದ ಕಾರ್ಯಕ್ರಮವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಶಾಸಕ ಟಿ.ಎಸ್.ಶ್ರೀವತ್ಸ ಪಾಲ್ಗೊಳ್ಳಲಿದ್ದಾರೆ ಎಂದರು. ಏ.14ರಂದು ಮಧ್ಯಾಹ್ನ 12.30ಕ್ಕೆ ಭೀಮೋತ್ಸವದ ಅದ್ಧೂರಿ ಮೆರವಣಿಗೆ ಆರಂಭಗೊಳ್ಳಲಿದ್ದು, ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಶಾಸಕರಾದ ದರ್ಶನ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ಡಿಸಿಪಿ ಕೆ.ಎಸ್.ಸುಂದರ್‌ರಾಜ್, ಪತ್ರಕರ್ತ ಚೀ.ಜ.ರಾಜೀವ, ಎಸ್‌ಸಿ, ಎಸ್‌ಟಿ ಉದ್ದಿಮೆದಾರರ ಸಂಘದ ಆರ್.ಮಂಜುನಾಥ್ ಭಾಗವಹಿಸಲಿದ್ದಾರೆ ಎಂದರು.

ಸಮಾರೋಪ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ತನ್ವೀರ್ ಸೇಠ್, ಪಾಲಿಕೆ ಮಾಜಿ ಸದಸ್ಯೆ ಡಾ.ಅಶ್ವಿನ್ ಶರತ್ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ದಲಿತ ಮಹಾಸಭಾದ ಅಧ್ಯಕ್ಷ ಪುಟ್ಟರಂಗಸ್ವಾಮಿ, ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ನಾಗರಿಕ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ದೇವರಾಜು, ಪರಮಾನಂದ, ಪ್ರೀತಮ್, ಚರಣ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.04.2025 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಚಿತ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಸಮಾಗಮ ವೆಲ್‌ಫೇರ್ ಫೌಂಡೇಷನ್ :** ವಿಶ್ವ ಆರೋಗ್ಯ ದಿನಾಚರಣೆ ಪ್ರಯುಕ್ತ ವಾಕಥಾನ್, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಕೋಟೆ ಅರಮನೆ ದ್ವಾರ, ಬೆಳಗ್ಗೆ 7ಕ್ಕೆ.

■ **ನಿರಮಯ ಫೌಂಡೇಶನ್, ಸ್ವಚಂದ ಗುಂಪು–ಸುರಕ್ಷಾ ಫೌಂಡೇಶನ್:** ಬ್ಲೈಂಡ್ ಗರ್ಲ್ಸ್ 2ನೇ ಆವೃತ್ತಿಯ 'ಹೆರಿಟೇಜ್ ಕಪ್' ಪಂದ್ಯಾವಳಿ, ಮುಖ್ಯ ಅತಿಥಿಗಳು: ಶಾಸಕ ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಆದಿತ್ಯ ಆಸ್ಪತ್ರೆಯ ಡಾ.ಎನ್.ಚಂದ್ರಶೇಖರ್, ಇಕ್ವೈಲೈಸರ್‌ನ ಮುಖ್ಯಸ್ಥರಾದ ಭಾಸ್ಕರ್ ಕಳಲೆ, ಪ್ರೊ.ಕಾವ್ಯಶ್ರೀ, ಭಾರತೀಯ ಅಂಧ ಕ್ರಿಕೆಟರ್ ಲೋಕೇಶ್, ಸ್ಥಳ: ಎಸ್‌ಜೆಸಿಇ ಕ್ಯಾಂಪಸ್, ಬೆಳಗ್ಗೆ 8ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ಸೈನ್ಸ್ ಫೌಂಡೇಷನ್ :** ಬೇಸಿಗೆ ವಿಜ್ಞಾನ ಶಿಬಿರ, ಉದ್ಘಾಟನೆ : ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿವೃತ್ತ ವಿಜ್ಞಾನಿ ಡಾ. ಟಿ. ತಿಪ್ಪೇಸ್ವಾಮಿ, ಸ್ಥಳ: ಜ್ಞಾನೋದಯ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಮಾಭ್ಯುದಯ ಮಹಾಸಭಾ ಚಾರಿಟೆಬಲ್ ಟ್ರಸ್ಟ್:** ಶ್ರೀ ರಾಮೋತ್ಸವ, ಬೆಳಗ್ಗೆ 10ಕ್ಕೆ ಸೀತಾ ಕಲ್ಯಾಣ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ.

■ **ಶ್ರೀ ಕಾವೇರಿ ಕೊಡಗು ಮಹಿಳಾ ಸಂಘ:** ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶ್ರೀಮತಿ ಚೌರಿರಾ ಸೀತಮ್ಮ ಕಾಳಯ್ಯ, ಅಧ್ಯಕ್ಷತೆ: ಸಂಘದ ಅಧ್ಯಕ್ಷೆ ಶ್ರೀಮತಿ ಕೊಳ್ಳೀರಾ ಬೊಳ್ಳಮ್ಮ ಕುಟ್ಟಪ್ಪ, ಉಪಾಧ್ಯಕ್ಷೆ ಕೆ. ಕಾವ್ಯ ಕುಟ್ಟಪ್ಪ, ಕಾರ್ಯದರ್ಶಿ ಕೆ. ಭವಾನಿ ಬೆಳ್ಳಿಯಪ್ಪ, ಖಜಾಂಚಿ ಎಂ.ಜಯಮುತ್ತಪ್ಪ, ಜಂಟಿ ಕಾರ್ಯದರ್ಶಿ ಎ. ತಾರಾ ಸೋಮಯ್ಯ, ಪಿ.ವಿಮಲ ಪೂಣಚ್ಚ, ಸಂಘಟನಾ ಕಾರ್ಯದರ್ಶಿ ಕೆ.ಪುಷ್ಪಾ ಮಾಚಯ್ಯ, ಕೆ.ಪುಷ್ಪಾ ನಾಣಯ್ಯ, ಸ್ಥಳ: ಕೊಡಗು ಸಹಕಾರ ಸಂಘ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ರಂಗಾಂತರಂಗ ಮೈಸೂರು:** ಕಲರವ ಮಕ್ಕಳ ಬೇಸಿಗೆ ಶಿಬಿರ, ಉಪಸ್ಥಿತರು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಬಿ.ಆರ್.ರಂಗಸ್ವಾಮಿ, ಜಯರಾಂ, ಎಂ.ಚಂದ್ರಶೇಖರ್, ಕೆ.ಎಂ. ಕೀರ್ತಿರಾಜ್, ಸ್ಥಳ: ರಂಗಾಂತರಂಗ ಮೈಸೂರು, ಬೆಳಗ್ಗೆ 10.30ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್:** ಚುಟುಕು ರತ್ನ ಡಾ.ಸಿ.ಪಿ.ಕೆ. ಅವರ 86ನೇ ಜನ್ಮ ದಿನೋತ್ಸವ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಕಸ್ತೂರಿಬಾ ಗಾಂಧಿ ಪ್ರಶಸ್ತಿ ಪ್ರದಾನ, ಬೊಗಸೆಯೊಳಗಿನ ಚುಟುಕು ಸಾಗರ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಡಾ.ರಾಜೇಂದ್ರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಅಧ್ಯಕ್ಷ ತೋಂಟದಾರ್ಯ, ಕೃತಿ ಬಿಡುಗಡೆ: ಚುಟುಕು ರತ್ನ ಡಾ.ಸಿಪಿಕೆ, ಉಪಸ್ಥಿತರು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ಕೆ.ಲೋಲಾಕ್ಷಿ, ಕಸ್ತೂರಿ ಬಾ ಗಾಂಧಿ ಪ್ರಶಸ್ತಿ ಪ್ರದಾನ: ಸಾಹಿತಿ ಡಾ.ತಾರಿಣಿ ಚಿದಾನಂದಗೌಡ, ಪುಸ್ತಕ ತಾಂಬೂಲ ವಿತರಣೆ : ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಸಂಸ್ಥಾಪಕ ಡಾ. ಎಂ.ಜಿ.ಆರ್. ಅರಸ್, ಸ್ಥಳ: ಮಂತ್ರ ಮಹರ್ಷಿ ಸಭಾ ಭವನ, ಶ್ರೀ ಶಿವರಾತ್ರೀಶ್ವರ ಮಹಿಳಾ ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.45ಕ್ಕೆ

■ **ಶ್ರೀ ಸತ್ಯಸಾಯಿ ಬಾಬಾ ಪದವಿಪೂರ್ವ ಕಾಲೇಜು:** ವಿಶೇಷ ಉಪನ್ಯಾಸ, ನೇತ್ರದಾನ ಶಿಬಿರ, ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ : ಜನಹಿತ ಸಭಾ ಅಧ್ಯಕ್ಷ ಡಾ.ಎಂ.ಮೋಹನಕುಮಾರ್, ಕೃತಿ ಬಿಡುಗಡೆ: ವಿಜ್ಞಾನಿ ಜಿ.ಉಷಾ, ಕೃತಿ ಪರಿಚಯ: ವೊರಬದ ಮಲ್ಲಿಕಾರ್ಜುನ, ಉಪಸ್ಥಿತರು: ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಪ್ರೊ. ಜಗನ್ನಾಥ ಕೆ.ಡಾಂಗೆ, ಜಗನ್ನಾಥ್ ನಾಡಿಗೇರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ತ್ರಿಮೂರ್ತಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ರಾಗ ಎಜುಕೇಷನಲ್ ಟ್ರಸ್ಟ್ :** ಲಿಟಲ್ ಸನ್ ಫ್ಲವರ್ ಶಿಶುವಿಹಾರದ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶಾಸಕ ಹರೀಶ್‌ಗೌಡ, ಸಿಂಡಿಕೇಟ್ ಸದಸ್ಯ ಮಹದೇಶ್, ಸ್ಥಳ: ಟ್ರಸ್ಟ್ ಆವರಣ, ಬೆಳಗ್ಗೆ 11ಕ್ಕೆ

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ–ಲಿಂಗಾಯತ ವಧುವರರ ಸಮಾವೇಶ, ಸಾನ್ನಿಧ್ಯ: ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಮಾಲಂಗಿ ಸುರೇಶ್, ಅಧ್ಯಕ್ಷತೆ: ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ, ಮುಖ್ಯ ಅತಿಥಿಗಳು: ವಕೀಲರಾದ ತನುಜ ಮಹೇಶ್, ಹೆಚ್.ಬಿ.ಪುಷ್ಪಾ, ಸ್ಥಳ: ಶ್ರೀ ವಿದ್ಯಾ ಭಾರತಿ ಕಲ್ಯಾಣ ಮಂಟಪ, ಉತ್ತರಾದಿ ಮಠದ ರಸ್ತೆ, ಮಧ್ಯಾಹ್ನ 3 ರಿಂದ.

■ **ಡಿ.ಮಾದೇಗೌಡ ಅಭಿನಂದನಾ ಸಮಿತಿ:** ಡಿ.ಮಾದೇಗೌಡರಿಗೆ ಅಭಿನಂದನೆ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಅಭಿನಂದನಾ ಗ್ರಂಥ ಬಿಡುಗಡೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ, ಅಭಿನಂದಿತರು: ಸಿಐಟಿಬಿ ಮಾಜಿ ಅಧ್ಯಕ್ಷ ಡಿ.ಮಾದೇಗೌಡ, ಅಭಿನಂದನಾ ನುಡಿ: ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯ ಪ್ರಕಾಶ್‌ಗೌಡ, ಉಪಸ್ಥಿತರು: ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಲಯನ್ ಎಂ.ವಿ.ದೇವಿಪ್ರಸಾದ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೃಷ್ಣ ಸುಬ್ಬರಾವ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ :ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಶೋಭಾ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, ವಿಷಯ: ಮಕ್ಕಳಿಗಾಗಿ ಯೋಗ, ಭಾಗವಹಿಸುತ್ತಾರೆ–ಪ್ರತಿಮಾ.ಡಿ., ನಿರ್ಮಾಣ–ನಂದನ್‌ಕುಮಾರ್. ಎಲ್.ಒ., 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಮಕ್ಕಳಲ್ಲಿ ಕಂಡು ಬರುವ ಮಾನಸಿಕ ಸಮಸ್ಯೆಗಳು ಕುರಿತು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಭಾಗ್ಯವತಿ. ಹೆಚ್.ಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟ–ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 KRISH-TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪದ ಆಕ್ಸ್‌ಫರ್ಡ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಅಂಬೇಡ್ಕರ್ ಮತ್ತು ಮಹಿಳಾ ಚಿಂತನೆ–ಸಂಯೋಜಿತ ಕಾರ್ಯಕ್ರಮ, ಭಾಗವಹಿಸುವವರು – ಲೇಖಕಿ, ನ್ಯಾಯವಾದಿ ಅಂಜಲಿ ರಾಮಣ್ಣ ರಾಮನಗರದ ಸರ್ಕಾರಿ ಕಾಲೇಜಿನ ಉಪನ್ಯಾಸಕ ಡಾ. ಟಿ. ಆರ್. ಕಿರಣ್‌ಕುಮಾರ್, 12.35 ದೇವರನಾಮ, 12.45 ಜನಪದ ಸಂಗೀತ–ಪಾಂಡವಪುರ ತಾಲೂಕು ಹೆಗ್ಗಡೆಹಳ್ಳಿಯ ಕೃಷ್ಣೇಗೌಡ ಮತ್ತು ಸಂಗಡಿಗರಿಂದ ದೇವರ ಪದ, 1.00 ಪ್ರಗತಿಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ನಾಗರಿಕ ಕೇಂದ್ರಿತ ಆಡಳಿತದ ಮೊದಲ ಹೆಜ್ಜೆ ಕುರಿತು ಮಾಹಿತಿ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ–ಅರುಣ ರಾಗ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಕುನ್ನಕುಡಿ ಎಂ. ಬಾಲ ಮುರಳೀಕೃಷ್ಣ–ಹಾಡುಗಾರಿಕೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವ ಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪುರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ–ಜಿ.ಕೆ. ರವೀಂದ್ರ ಕುಮಾರ್, 9.15 ರಂಗಗೀತೆಗಳು–ಮಹಾಕವಿ ಕಾಳಿದಾಸ ನಾಟಕದ ಹಾಡು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ ಕಲಾನಿಧಿ ಡಾ. ಶೇಖ್ ಚಿನ್ನ ಮೌಲಾನ–ನಾಗಸ್ವರ ವಾದನ

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಸಮಿತಿ :** ಯುಗಾದಿ ಸಂಭ್ರಮ, ಮುಖ್ಯ ಅತಿಥಿಗಳು: ವಕೀಲ ಸಿ.ವಿ.ಕೇಶವ ಮೂರ್ತಿ, ವಿದ್ವಾನ್ ಕೆ.ಆರ್.ಮಂಜುನಾಥ ಶ್ರೌತಿ, ಡಾ.ವಿ.ರಂಗನಾಥ್, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ, ಸ್ಥಳ: ವಿಜಯ ವಿಠ್ಠಲ ಪಿಯು ಕಾಲೇಜು, ಸರಸ್ವತಿಪುರಂ, ಸಂಜೆ 4.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಿತ್ರಕೂಟ, ತಿಪ್ಪೂರು:** ಕೃಷ್ಣ ತಿಪ್ಪೂರು ಅವರ ಮೂರು ಕೃತಿಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಹೆಚ್ಚುವರಿ ಅಡ್ವೋಕೇಟ್ ಜನರಲ್ ದೇವದಾಸ್, ಕೃತಿಗಳ ಬಿಡುಗಡೆ: ಶ್ರೀ ಗಣೇಶ್ವರಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಪ್ರೊ.ಮೈಸೂರು ಕೃಷ್ಣಮೂರ್ತಿ, ಪ್ರೊ.ಮ.ನಂಜುಂಡಯ್ಯ, ಡಾ.ವೈ.ಡಿ. ರಾಜಣ್ಣ, ಅಂಕನಳ್ಳಿ ಪಾರ್ಥ, ಕೃಷ್ಣ ತಿಪ್ಪೂರು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಅಕಾಡೆಮಿ ಟ್ರಸ್ಟ್ :** ಸಂಜೆ 5ಕ್ಕೆ 4ನೇ ವರ್ಷದ ವಾರ್ಷಿಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಸಾಧಕರಿಗೆ ಹಾಗೂ ಕಲಾವಿದರಿಗೆ ಸನ್ಮಾನ, ಸಂಜೆ 7ಕ್ಕೆ ವೇದಿಕೆ ಕಾರ್ಯಕ್ರಮ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ರಘುರಾಮ್ ವಾಜಪೇಯಿ, ನಾಗರಾಜಾಚಾರ್, ಸುರೇಶ್ ಗೋಲ್ಡ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಶ್ರೀರಾಮಕೃಷ್ಣರ ಭಗವದನುಭವ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಶ್ರೀದೇವಿ ಭಜನಾ ಮಂಡಳಿಯವರಿಂದ ಗಾಯನ, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6 ರಿಂದ.

■ **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ಶ್ರೀರಾಂಪುರ ಶ್ರೀ ಕೃಪಾ ಕಲಾ ಬಳಗದಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.

■ **ಶ್ರೀರಾಮಮಂದಿರ :** ಶ್ರೀ ರಾಮೋತ್ಸವ ಬೆಳಗ್ಗೆ 9ಕ್ಕೆ ಶ್ರೀ ರಾಮತಾರಕ ಹೋಮ ಮತ್ತು ಶ್ರೀ ಸೀತಾ ಸಹಸ್ರನಾಮಾರ್ಚನೆ, ಸಂಜೆ 6.30ಕ್ಕೆ ವಿದ್ವಾನ್ ಶ್ರೀಹರ್ಷ ಅವರಿಂದ ಗಾಯನ, ಸ್ಥಳ: ಶ್ರೀ ರಾಮಮಂದಿರ, ಜಯನಗರ.

■ **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ವಿದ್ವಾನ್ ವಿವೇಕ್ ಸದಾಶಿವಂ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳು ಮತ್ತು ಸಂಶೋಧನಾ ಕೇಂದ್ರ:** ಗುರು ವಿದುಷಿ ಡಾ.ಕೃಪಾ ಫಡ್ಕೆ ಮತ್ತು ವಿದುಷಿ ಎನ್.ಎಸ್. ಲಕ್ಷ್ಮಿ ಅವರಿಂದ ಗುರು ಶಿಷ್ಯ ನೃತ್ಯೋಲ್ಲಾಸ ಭರತನಾಟ್ಯ ಕಾರ್ಯಕ್ರಮ, ವಿಶೇಷ ಅತಿಥಿಗಳು : ಸಂಗೀತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಕುಲಸಚಿವರಾದ ಕೆ.ಎಸ್.ರೇಖಾ, ಪ್ರೊ.ಎಂ.ಜಿ. ಮಂಜುನಾಥ್, ವಿದುಷಿ ಪುಜಾ ಸುಗಮ್–ನಟುವಾಂಗ, ವಿದುಷಿ ದೀಪು ನಾಯರ್–ಗಾಯನ, ವಿದ್ವಾನ್ ಜಿ.ಎಸ್.ನಾಗರಾಜ್–ಮೃದಂಗ, ವಿದ್ವಾನ್ ಎ.ಪಿ.ಕೃಷ್ಣ ಪ್ರಸಾದ್–ಕೊಳಲು, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6.30ಕ್ಕೆ

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಆ ಊರು ಈ ಊರು ನಾಟಕ ಪ್ರದರ್ಶನ, ನಿರ್ದೇಶನ : ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ಕು. ಸಂಯುಕ್ತ ಎಸ್. ಅಯ್ಯಂಗಾರ್ ಅವರಿಂದ ಭರತನಾಟ್ಯ, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 13 ಭಾನುವಾರ 2025

₹4

45

ಸಂಪುಟ: 45 | ಸಂಚಿಕೆ: 353 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಗುಂಡಣ್ಣ ಕೆಲಸದ ಸಂದರ್ಶನಕ್ಕೆ ಹೋಗಿದ್ದ

ಮ್ಯಾನೇಜರ್: ನೀವು ಪಡೆದಿರುವ ಉನ್ನತ ಶಿಕ್ಷಣದ ಬಗ್ಗೆ ಹೇಳಿ?

ಗುಂಡಣ್ಣ : PHD

ಮ್ಯಾನೇಜರ್: ಗ್ರೇಟ್, ನೀವು ಡಾಕ್ಟರ್ ಡಿಗ್ರಿ ಪಡೆದಿದ್ದೀರಾ, ಬಹಳ ಸಂತೋಷ, ನಮ್ಮ ಕಂಪನಿಗೆ ನಿಮ್ಮಂತಹ ವಿದ್ಯಾವಂತರೇ ಬೇಕಾಗಿದ್ದು.

ಗುಂಡಣ್ಣ : ಅದು ಹಾಗಲ್ಲ ಸಾರ್. ಪಿಹೆಚ್‌ಡಿ ಎಂದರೆ Passed High school with Difficulties

ಮೈಸೂರು ಮಿತ್ರ

ಭಾನುವಾರ, 13 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ವಾಸ್ತವದೆದುರು ನಮ್ಮನ್ನು ನಾವು ನಿಲ್ಲಿಸಿ ನೋಡಿದಾಗ
ಹೊರಗಿನವರಿಗಿಂತ ನಮ್ಮವರೇ ನಮ್ಮನ್ನು ಹೀಯಾಳಿಸಿದ್ದೆ ಜಾಸ್ತಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓಡಿದವನಿಗೆ ಓಣಿ ಕಾಣಲಿಲ್ಲ,
ಹಾಡಿದವನಿಗೆ ಹಾದಿ ಕಾಣಲಿಲ್ಲ.

ನಿಮ್ಮ ಪತ್ರಗಳು

■ ಮನೆ ಮಾದೇಗೌಡರಿಗೆ ಅಭಿನಂದನೆಗಳು

ಮಾನ್ಯರೆ,



ಮನೆ ಮಾದೇಗೌಡ ಎಂದೇ ಖ್ಯಾತರಾಗಿರುವ ಹಿರಿಯ ರಾಜಕೀಯ ಮುತ್ಸದ್ದಿ, ಮಾಜಿ ವಿಧಾನಪರಿಷತ್ ಸದಸ್ಯ ಡಿ.ಮಾದೇಗೌಡರಿಗೆ ನಗರದಲ್ಲಿ ಭಾನುವಾರ (ಏ.13) ನಾಗರಿಕ ಸನ್ಮಾನ ಏರ್ಪಡಿಸಿರುವುದು ಸ್ವಾಗತಾರ್ಹವಾಗಿದೆ. ಈ ಹಿಂದಿನ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ (ಸಿಐಟಿಬಿ) ಅಧ್ಯಕ್ಷರಾಗಿದ್ದ ಮಾದೇಗೌಡರು, ತಮ್ಮ ಅಧಿಕಾರದ ಅವಧಿಯಲ್ಲಿ ಸಾಮಾನ್ಯ ಜನರಿಗೆ ಕೈಗೆ ಎಟಕುವ ಬೆಲೆಯಲ್ಲಿ ಆಶ್ರಯ ಯೋಜನೆಯ ಮೂಲಕ ಮನೆಗಳನ್ನು ವಿತರಿಸಿ ವಸತಿ ಕ್ಷೇತ್ರದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ಯಾವುದೇ ಲಂಚ ರುಷುವತ್ತುಗಳಿಲ್ಲದೇ ಅರ್ಹ ಫಲಾನುಭವಿಗಳಿಗೆ ಸಾವಿರಾರು ಮನೆಗಳನ್ನು ನೀಡುವ ಮೂಲಕ ಡಿ.ಮಾದೇಗೌಡರು ಮಾಡಿರುವ ಸತ್ಕಾರ್ಯವನ್ನು ಈಗಲೂ ಸಹ ಅನೇಕರು ಜ್ಞಾಪಿಸಿಕೊಳ್ಳುತ್ತಲೇ ಇರುತ್ತಾರೆ.

ಓರ್ವ ಪ್ರಾಮಾಣಿಕ ಹಾಗೂ ಶಿಸ್ತುಬದ್ಧ ರಾಜಕಾರಣಿಯಾಗಿ ಕೂಡ ಗುರುತಿಸಲ್ಪಡುವ ಡಿ.ಮಾದೇಗೌಡರಿಗೆ ರಾಜಕೀಯ ರಂಗದಲ್ಲಿ ಹೆಚ್ಚಿನ ರೀತಿಯ ಸ್ಥಾನಮಾನ ದೊರಕದೆ ಹೋದದ್ದು ವಿಷಾದನೀಯವಾದರೂ, ಅವರ ನಿಷ್ಕಳಂಕ ರಾಜಕೀಯ ಬದುಕು ತೆರೆದ ಪುಸ್ತಕವಾಗಿದೆ. ಇಂದಿನ ಕಲುಷಿತ ರಾಜಕೀಯದಲ್ಲಿ ಮಾದೇಗೌಡರಂತಹ ರಾಜಕಾರಣಿಗಳು ಅಪರೂಪವೇ ಸರಿ. ಈ ಸಂದರ್ಭದಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

■ ಕರಾಳಮುಖ ಬಯಲಾಗುತ್ತಾ?

ಮಾನ್ಯರೆ,

ಕೇಂದ್ರ ಸರ್ಕಾರದ ಅವಿರತ ಶ್ರಮ ಮತ್ತು ಜಾಣ ನಡೆಯ ಮೂಲಕ ರಾಜತಾಂತ್ರಿಕ ನೆರವಿನಿಂದ 26/11ರ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ಎಂದೆ ಕರೆಯುವ ಪಾಕಿಸ್ತಾನದ ಮೂಲದ 166 ಅಮಾಯಕ ಜನರ ಸಾವಿಗೆ ಕಾರಣನಾದ ತಹವುರ್ ರಾಣಾ ಇತ್ತೀಚೆಗೆ ಅಮೆರಿಕದಿಂದ ಭಾರತಕ್ಕೆ ಹಸ್ತಾಂತರವಾಗಿದ್ದು, ಪಾಕಿಸ್ತಾನಕ್ಕೆ ಮತ್ತು ಪಕ್ಷವೊಂದರ ಕೆಲವು ನಾಯಕರಿಗೆ ನಡುಕ ಶುರುವಾಗಿದೆ. ಏಕೆಂದರೆ ಕೋರ್ಟಿನ ಮುಂದೆ ಹಾಜರುಪಡಿಸಿ ತೀವ್ರ ವಿಚಾರಣೆಗೆ ಒಳಪಡಿಸಿದ ಸಂದರ್ಭದಲ್ಲಿ ಕುತಂತ್ರದ ಹಿಂದಿನ ರಹಸ್ಯವನ್ನು ಬಾಯಿ ಬಿಡಬಹುದು. ಎಲ್ಲರ ಮುಖವಾಡ ಬಯಲಾಗಬಹುದು ಎಂಬ ಆತಂಕ. ದಾಳಿಯ ದಿನದಂದು ಕಾರ್ಯಾಚರಣೆಯ ಸಂದರ್ಭದಲ್ಲಿ 9 ಜನ ಉಗ್ರರನ್ನು ಭದ್ರತಾ ಪಡೆಗಳು ಕೊಂದಿದ್ದು. ಒಬ್ಬ ಉಗ್ರನನ್ನು ಜೀವಂತವಾಗಿ ಸೆರೆ ಸಿಕ್ಕಿದ್ದ ಅಬ್ದುಲ್ ಕಸಬ್‌ನ ಹತ್ತಿರ ಭಾರತದ ಕೆಲವು ಕಾಲೇಜಿನ ಗುರುತಿನ ಪತ್ರಗಳು, ಹಿಂದೂ ಧರ್ಮದ ಆಚರಣೆಗೆ ಸೇರಿದ ಕೆಲವು ವಸ್ತುಗಳು ಸಿಕ್ಕಿದವು. ಅಂದರೆ ಮೊದಲೇ ಪೂರ್ವನಿಯೋಜಿತವಾಗಿ ಈ ದಾಳಿಯನ್ನು ಹಿಂದೂಗಳ ಯುವಕರ ಮೇಲೆ ಹಾಗೂ ಆರ್‌ಎಸ್‌ಎಸ್‌ನ ಸಂಘದ ಮೇಲೆ ಗೂಬೆ ಕೂರಿಸಲು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದರು. ದುರದೃಷ್ಟವಶಾತ್ ಜೀವಂತವಾಗಿ ಉಗ್ರ ಕಸಬ್ ಸೆರೆ ಸಿಕ್ಕಿದ. ಅವೆಲ್ಲವೂ 18 ವರ್ಷಗಳ ನಂತರ ಬಯಲಾಗುವ ಕಾಲ ಸನಿಹವಾಗಿದೆ. ಈ ನೆಲದ ಅನ್ನ ತಿಂದು ಆಶ್ರಯ ಪಡೆದು ಈ ದೇಶಕ್ಕೆ ದ್ರೋಹ ಬಗೆಯುವ ಕೆಲವು ನಾಯಕರ ಸಂಚು ಬಯಲಾಗುತ್ತದೆ ಎಂದು ದೇಶದ ಜನರು ಕಾತುರದಿಂದ ಕಾಯುತ್ತಿದ್ದಾರೆ.

–ಪರಶಿವಮೂರ್ತಿ ಎನ್ ಪಿ. ನಂಜೀಪುರ. ಸರಗೂರು ತಾಲೂಕು.

■ ನಿರಪರಾಧಿ ಆದಿವಾಸಿಗೆ ನ್ಯಾಯ ದೊರೆಯಲಿ

ಮಾನ್ಯರೆ,

ಇತ್ತೀಚೆಗೆ ಆದಿವಾಸಿ ಬುಡಕಟ್ಟು ಯುವಕ ಸುರೇಶ್ ಎಂಬ ಅಮಾಯಕ ಮಾಡದ ತಪ್ಪಿಗೆ ಎರಡು ವರ್ಷ ಬಂಧಿತರಾಗಿ ಶಿಕ್ಷೆ ಅನುಭವಿಸಿ ಬಂಧಿಖಾನೆಯಿಂದ ಹೊರಬಂದಿರುವುದು ವಿಷಾದಕರ ಸಂಗತಿ. ತಮ್ಮ ಪತ್ನಿಯು ಬದುಕಿದ್ದರೂ ಮೃತಪಟ್ಟಿದ್ದಾರೆಂದು ಶಂಕಿಸಿದ ಪೊಲೀಸರು ಸುರೇಶನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿ ನಿರಪರಾಧಿಗೆ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾದರು. ತದನಂತರ ಹಲವಾರು ಬದಲಾವಣೆಗಳಿಂದಾಗಿ ಸುರೇಶ್ ಪತ್ನಿ ಮೃತಪಟ್ಟಿಲ್ಲದಿರುವುದು ತಡವಾಗಿ ಬೆಳಕಿಗೆ ಬಂದಿದೆ. ಇಲ್ಲಿ ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಲು ಕಾರಣರಾದ ಪ್ರಮುಖರ ವಿರುದ್ಧ ಉನ್ನತ ತನಿಖೆ ನಡೆಸಿ ಕಠಿಣ ಕಾನೂನು ಕ್ರಮ ಕೈಗೊಂಡು ಸುರೇಶ್‌ಗೆ ನ್ಯಾಯ ಸಿಗುವುದರ ಜೊತೆಗೆ ಪರಿಹಾರವೂ ದೊರೆಯಲಿ.

– ಪ್ರದೀಪ್, ಯರಗನಹಳ್ಳಿ, ಮೈಸೂರು

■ ಶಾಲಾ ದಾಖಲು ವಯಸ್ಸು 5 ವರ್ಷ 5 ತಿಂಗಳಿಗೆ ನಿಗದಿಪಡಿಸಿ

ಮಾನ್ಯರೆ.

ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ನಿಗದಿಪಡಿಸಿರುವುದು ನಿಜಕ್ಕೂ ಪೋಷಕರು ಅಡಕತ್ತರಿಯಲ್ಲಿ ಸಿಕ್ಕಿಕೊಂಡಂತೆ ಆಗಿದೆ.

ಮಕ್ಕಳು ಒಂದನೇ ತರಗತಿ ಪ್ರವೇಶದ ವಯೋಮಿತಿಯನ್ನು ಈ ವರ್ಷದಿಂದ ಅನ್ವಯವಾಗುವಂತೆ 6 ವರ್ಷ ಪೂರೈಸಿರಬೇಕು ಎಂಬ ನಿಯಮ ಅನೇಕ ಮಕ್ಕಳ ಶೈಕ್ಷಣಿಕ ಪ್ರವೇಶಕ್ಕೆ ಅಡ್ಡಿಯಾಗಿದೆ. ಈಗಿನ ಮಕ್ಕಳು ಬಹಳ ಚಟುವಟಿಕೆಯಿಂದ ಕೂಡಿದ್ದು, ಅನೇಕ ಮಕ್ಕಳು 2–3ನೇ ವಯಸ್ಸಿನಲ್ಲೇ ಪ್ರತಿಭೆ ತೋರುತ್ತಿವೆ. ಈಗಿನ ಮಕ್ಕಳು ಕಲಿಕೆಯನ್ನು ಗ್ರಹಿಸುವಲ್ಲಿ ಮುಂಚೂಣಿಯಲ್ಲಿವೆ. ಈಗಿನ ಪೀಳಿಗೆಯ ಮಕ್ಕಳು ಹೆಚ್ಚು ಬುದ್ಧಿಮತ್ತೆ ಹೊಂದಿದವರಾಗಿದ್ದಾರೆ. ಆದ್ದರಿಂದ ಇಂತಹ ಮಕ್ಕಳಿಗೆ ಬೇಗ ಶಿಕ್ಷಣದ ಅವಶ್ಯಕತೆ ಇರುತ್ತದೆ. ಅನೇಕ ದೇಶಗಳಲ್ಲಿ 5 ವರ್ಷ, ನಾಲ್ಕು ವರ್ಷಕ್ಕೆ ಶಾಲೆಗೆ ಪ್ರವೇಶವಿರುವಾಗ ನಮ್ಮ ದೇಶದಲ್ಲಿ ಅದನ್ನು 5 ವರ್ಷ 5 ತಿಂಗಳಿಂದ 6 ವರ್ಷಕ್ಕೆ ಮುಂದೂಡಿರುವುದು ಏಕೆ?

2022ರಲ್ಲಿ ಬಿಜೆಪಿ ಸರ್ಕಾರವೇನೋ ಕೇಂದ್ರ ಸರ್ಕಾರದ ಎನ್‌ಇಪಿ ಬೆಂಬಲಿಸುವ ಸಲುವಾಗಿ 6 ವರ್ಷ ನಿಗದಿಪಡಿಸಿ 2025 ರಿಂದ ಜಾರಿ ಎಂದು ತಮ್ಮ ಕೈ ತೊಳೆದುಕೊಂಡು ಮನೆಗೆ ಹೋದರು. ಆದರೆ ಈಗಿನ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಆಗುತ್ತಿದೆ. ಆದರೆ ಇದನ್ನು ಬದಲಿಸಿ ಸುತ್ತೋಲೆ ಹೊರಡಿಸಲು 2 ವರ್ಷದಿಂದ ಮೀನಾಮೇಷ ಎಣಿಸುತ್ತಿರುವುದೇಕೆ? ಶಿಕ್ಷಣ ಸಚಿವರು ಈಗ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳುತ್ತಿದ್ದಾರೆ. ಈಗಲಾದರೂ ಬೇಗ ನಿರ್ಧಾರ ಪ್ರಕಟಿಸಲಿ. 5 ವರ್ಷದಿಂದ 6 ವರ್ಷದವರೆಗಿನ ಎಲ್ಲಾ ಮಕ್ಕಳು ಪ್ರವೇಶ ಪಡೆಯುವಂತೆ ನಿಯಮವನ್ನು ಸರಳಗೊಳಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಉಭಯಗಾನ ಪ್ರವೀಣ ಸ್ವರಮೂರ್ತಿ ವೆಂಕಟನಾರಾಯಣ ರಾವ್

ನಮ್ಮ ಪೂರ್ವಿಕರಿಗೆ ಸಂಗೀತವು ಕೇವಲ ಹೊಟ್ಟೆ ಹೊರೆಯುವ ಸಾಧನ ಆಗಿರಲಿಲ್ಲ. ನಾದೋಪಾಸನೆ, ನಾದಬ್ರಹ್ಮ, ನಾದಾನುಸಂಧಾನ ಇತ್ಯಾದಿ ಶಬ್ದಗಳೆಲ್ಲ ಸಂಗೀತದ ನಾದವನ್ನು ಅವರು ಯಾವ ಎತ್ತರದಲ್ಲಿ ಇಟ್ಟಿದ್ದರು ಎಂಬುದನ್ನು ಸೂಚಿಸುತ್ತವೆ. ಸ್ವರಗಳ ಸಾಧನೆ ಎಂದರೆ ಅದು ದೇವರ ಪೂಜೆಯೇ ಆಗಿತ್ತು. ಹಾಡುತ್ತಾ, ನುಡಿಸುತ್ತಾ ನಾದದಲ್ಲಿ ತಲ್ಲೀನರಾಗುವುದೇ ಉಪಾಸನೆ ಎಂದು ಅನ್ನಿಸಿಕೊಳ್ಳುತ್ತಿತ್ತು. ಅದೆಷ್ಟೋ ಗಾಯಕರು, ವೈಣಿಕರು ನಾದಾನುಸಂಧಾನದಲ್ಲಿ ಮೈಮರೆತು, ಇಹಲೋಕದ ಪರಿವೆಯೇ ಇಲ್ಲದವರಂತೆ ಆಗಿಬಿಡುತ್ತಿದ್ದುದು ಅವರಲ್ಲಿದ್ದ ಸಂಗೀತದ ಔನ್ನತ್ಯವನ್ನು ತಿಳಿಸುತ್ತದೆ.

ತಮ್ಮ ದೈವೀಕ ವಿದ್ಯೆಯನ್ನು ಮಾರಾಟ ಮಾಡದ ಅವರಿಗೆ ಸಂಗೀತ ರಸಿಕರು ನೀಡುವ ಸಂಭಾವನೆ, ಉದಾರ ದೊರೆಗಳ ಶ್ರೀರಕ್ಷೆ ಇತ್ಯಾದಿಗಳೇ ಉದರಂಭರಣಕ್ಕೆ ದಾರಿ. ಸಂಗೀತವನ್ನು ಕಲಿಯಲು, ನಾದದೇವತೆಯನ್ನು ಒಲಿಸಿಕೊಳ್ಳಲು ಶಿಷ್ಯ ಅಥವಾ ಕಲೋಪಾಸಕನು ಅದೆಷ್ಟೇ ಕಠಿಣ ಮಾರ್ಗದಲ್ಲಿ ಹೆಜ್ಜೆ ಇಡಲೂ ತಯಾರಾಗಿರುತ್ತಿದ್ದ. ಕಂಠಮಟ್ಟದ ನೀರಿನಲ್ಲಿ ಬೆಳಗಿನ ಜಾವ ನಿಂತು ಸ್ವರ ಸಾಧನೆಯನ್ನು ಮಾಡಿ ತಮ್ಮ ಕಂಠವನ್ನು ಹೇಗೆ ಬೇಕೆಂದರೆ ಹಾಗೆ ಮಣಿಸಬಲ್ಲಂತೆ ಸಿದ್ಧಿಸಿಕೊಂಡ ಕಲಾವಿದರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಸಿರಿಕಂಠವನ್ನು ಪಡೆಯಲು ಎಂಥದೇ ಕಷ್ಟಕರ ಪಥ್ಯವನ್ನು ಮಾಡಲು ಸಿದ್ಧರಿದ್ದವರು ಇದ್ದರು. ಅಷ್ಟೇ ಏಕೆ, ವಿದ್ಯೆ ಕಲಿಯಲು ಏನನ್ನು ಬೇಕಾದರೂ ಮಾಡಿದವರುಂಟು. ನಿಷ್ಠಾವಂತ ಬ್ರಾಹ್ಮಣರು, ಗುರುವಿಗಾಗಿ ಮಾಂಸದ ಅಡುಗೆ ಮಾಡಿಟ್ಟು, ತಾವು ನಂತರ ನದಿಗೆ ಹೋಗಿ ಆಹ್ನೀಕಾದಿಗಳನ್ನು ಮುಗಿಸಿ ಬಂದು ಕಲಿಯಲು ಪ್ರಾರಂಭಿಸುತ್ತಿದ್ದ ನಿದರ್ಶನಗಳು ಇವೆ. ಇನ್ನೂ ಕೆಲವು ಅದೃಷ್ಟವಂತರು ಹುಟ್ಟಿನಿಂದಲೇ ಪ್ರತಿಭಾವಂತರಾಗಿರುತ್ತಿದ್ದುದೂ ಉಂಟು. ಅಂತಹ ಬಾಲಪ್ರತಿಭೆ ಒಂದರ ಪರಿಚಯ ಇಂದು.

ಆ ಮಗು ತಂದೆ ತಾಯಿಗಳಿಗಿಂತಲೂ ತಾತನ ತೀವ್ರ ಹಂಬಲಕ್ಕೆ ಉತ್ತರವಾಗಿ ಹುಟ್ಟಿತು. ಅದರ ಆಗಮನಕ್ಕಾಗಿ ಕಾತುರದಿಂದ ಕಾಯುತ್ತಿದ್ದ ತಾತನವರು, ತಮ್ಮ ಸಂಗೀತ ವಿದ್ಯೆ ಎಲ್ಲವನ್ನೂ ಅದಕ್ಕೆ ಧಾರೆ ಎರೆಯಲು ತುದಿಗಾಲಲ್ಲಿ ನಿಂತಿದ್ದರು. ಒಂದೂವರೆ ವರುಷದ ಮಗು ಅಡುಗೆ ಮನೆಗೆ ಹೋಗಿ, ಅಗ್ಗಿಷ್ಟಿಕೆಗೆ ಬೀಸಲು ಇಡುತ್ತಿದ್ದ ಬೀಸಣಿಗೆಯ ಕೋಲನ್ನು ಕೈಲಿ ಹಿಡಿದು ಕಂಚಿನ ಪಾತ್ರೆಗಳ ಮೇಲೆ ಏಟು ಹಾಕುತ್ತಾ ಇದು ಸ, ಇದು ರಿ, ಇದು ಗ ಇತ್ಯಾದಿಯಾಗಿ ಹೇಳುತ್ತಿದ್ದರೆ ತಾತನವರ ಹಿಗ್ಗಿಗೆ ಎಣೆಯುಂಟೇ! ಮಗುವನ್ನು ತಮ್ಮ ಬಳಿಯೇ ಮಲಗಿಸಿಕೊಂಡು ಮೂರು ವರುಷದ ಮೊಮ್ಮಗನಿಗೆ ನಿದ್ದೆಯಲ್ಲೇ ಅವನ ಮನದಾಳಕ್ಕೆ ಇಳಿಯುವಂತೆ ಶಿಕ್ಷಣ ನೀಡಲು ಪ್ರಾರಂಭಿಸಿದರು. ತಮಗೆ ಯಾವಾಗ ಸಂಗೀತದ ಲಹರಿ ಬರುತ್ತದೋ ಆಗ, ಅದು ಬೆಳಗಿನ ಮೂರು ಗಂಟೆಯೂ ಆಗಬಹುದು, ಎರಡು ಗಂಟೆಯೂ ಆಗಬಹುದು, ಮಗೂ ಪುಟ್ಟಾಮಿ, ಏಳಪ್ಪ, ಸ್ವಲ್ಪ ಈ ಪಲ್ಲವಿಯನ್ನು ಅಂದುಬಿಡಪ್ಪ ಅನ್ನುವರು. ಅದು ಊಂ..ನಿದ್ದೆ ತಾತ ಅಂದರೆ, ಬೆಳಿಗ್ಗೆ ನಿನಗೆ ಕೊಬ್ಬರಿ ಮಿಠಾಯಿ ಕೊಡುತ್ತೇನೆ. ಈ ಸಂಗತಿ ಅಂದುಬಿಡಪ್ಪ ಎಂದು ಅದಕ್ಕೆ ಆಗಲೇ ಶಿಕ್ಷಣ ನೀಡುವರು. (ಪಲ್ಲವಿ ಎಂದರೆ, ಶಾಸ್ತ್ರೀಯ ಸಂಗೀತದಲ್ಲಿ ಅತ್ಯುನ್ನತ ಘಟ್ಟ) ಮಗುವಿನ ಸುಪ್ತ ಮನದ ಆಳದಲ್ಲಿ ಆ ಪಾಠಗಳು ಬೇರೂರಲು ಇಂತಹ ಶಿಕ್ಷಣವು ಕಾರಣ ಆಯಿತೆನ್ನುವುದರಲ್ಲಿ ಸಂಶಯವಿಲ್ಲ. ಜೊತೆಗೆ ದೇಶದ ಉದ್ದಗಲಗಳಿಂದ ಮನೆಗೆ ಬರುತ್ತಿದ್ದ ಕಲಾವಿದರು, ಅವರ ಸಂಗೀತ ಕೇಳುವ ಅವಕಾಶ.



> ಸದಾ ಸ್ವರಗಳನ್ನು ಹೇಳಿಕೊಳ್ಳುತ್ತಿದ್ದ ಸ್ವರಮೂರ್ತಿ ಅವರನ್ನು ಯಾವುದೋ ವಾಹನವು ಗುದ್ದಿ ಹೋದಾಗಲೂ ಪ್ರಜ್ಞಾಹೀನರಾಗಿದ್ದರೂ ಬಾಯಿಂದ ಸ್ವರಗಳು ಬರುತ್ತಿದ್ದುದು ಸಾವಿನಲ್ಲೂ ಸ್ವರಮೂರ್ತಿ ಎಂಬಂತೆ ಅನ್ವರ್ಥವಾಯಿತು.

ಪುಟ್ಟಾಮಿಗೆ ಐದು ವರುಷಗಳಾಗುವ ಹೊತ್ತಿಗೆ ತಾತನವರು ಅವನನ್ನು ತಮ್ಮೊಡನೆ ಕಛೇರಿಗಳಿಗೆ ಕರೆದುಕೊಂಡು ಹೋಗುವರು. ಅವನಿಗೂ ಹಾಡುವಂತೆ ಹೇಳುವರು. ಐದು ವರುಷದ ಬಾಲಕ ನಿರ್ಭಯವಾಗಿ ತಾತನ ಸಮಕ್ಕೂ ಹಾಡುವುದನ್ನು ಕಂಡು, ಕೇಳಿದವರಿಗೆ ಆಶ್ಚರ್ಯ. ಗದ್ವಾಲ್ ಮಹಾರಾಜರು ತಾತನ ವೀಣಾವಾದನಕ್ಕೆ ಮನಸೋತು ಆಗಾಗ್ಗೆ ಅವರನ್ನು ತಮ್ಮ ಆಸ್ಥಾನಕ್ಕೆ ಕರೆಸಿ, ಅವರ ಸಂಗೀತವನ್ನು ಏರ್ಪಡಿಸುತ್ತಿದ್ದರು. ಒಮ್ಮೆ ದಸರಾ ಸಂದರ್ಭದಲ್ಲಿ ಒಂಬತ್ತೂ ದಿನಗಳು ಅವರ ವೀಣಾ ವಾದನ. ಕೊನೆಯ ದಿನ ತಾತನವರು ಕಲ್ಯಾಣಿ ರಾಗದಲ್ಲಿ ತಾರಕ ಬ್ರಹ್ಮ ಸ್ವರೂಪಿಣಿ ಎಂಬ ಪಲ್ಲವಿಯನ್ನು ನುಡಿಸುತ್ತಿದ್ದಾರೆ. ಕಲ್ಪನಾಸ್ವರ ಹಾಕುವಾಗ ಮೊಮ್ಮಗನಿಗೆ ಹಾಡುವಂತೆ ಸನ್ನೆ ಮಾಡಿದರು. ಅದಕ್ಕಾಗಿಯೇ ಕಾಯುತ್ತಿದ್ದ ಪೋರ ಅದ್ಭುತವಾಗಿ ತಾತನ ವೀಣೆಗೆ ದನಿಗೂಡಿಸಿದ. ನಿರರ್ಗಳವಾಗಿ ಹೊಮ್ಮಿದ ಸ್ವರಪುಂಜವನ್ನು ಕೇಳಿದ ದೊರೆಗೆ ಆನಂದಾತಿಶಯ ಅನುಭವ. ಅವನನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತಾವು ಧರಿಸಿದ್ದ ಕಂಠೀಹಾರವನ್ನು ಅವನಿಗೆ ತೊಡಿಸಿದ್ದಲ್ಲದೆ ಮರುದಿನ ವಿಶೇಷ ದರ್ಬಾರಿನಲ್ಲಿ ಆತನಿಗೆ ಕಿಂಕಾಪಿನ ಕೋಟು ಇತ್ಯಾದಿ ವಸ್ತ್ರಗಳನ್ನು ನೀಡಿ, 'ಸ್ವರಮೂರ್ತಿ' ಎಂಬ ಬಿರುದನ್ನೂ ದಯಪಾಲಿಸಿದರು. ಇದರ ವಿವರವನ್ನು ದಿನಪತ್ರಿಕೆಯಲ್ಲಿ ಓದಿದ ಶ್ರೀಮನ್ನಾಲ್ವಡಿಯವರು ಏನು ಶೇಷಣ್ಣನವರೇ, ನಿಮ್ಮ ಮೊಮ್ಮಗನ ಬಗ್ಗೆ ನಮಗೆ ತಿಳಿಸಿಯೇ ಇಲ್ಲವಲ್ಲ ಎಂದು ಅವನನ್ನು ಅರಮನೆಗೆ ಕರೆಸಿ, ಹಾಡಿಸಿ, ಸಂತೋಷದಿಂದ ಆಶೀರ್ವದಿಸಿದರು. ವೆಂಕಟನಾರಾಯಣ ರಾವ್, ಅಂದಿನಿಂದ ಸ್ವರಮೂರ್ತಿ ಎಂದೇ ಗುರುತಿಸಲ್ಪಡುತ್ತಿದ್ದರು.

ತಾತನವರ ಕಣ್ಣಾಗಿ ಬೆಳೆಯುತ್ತಿದ್ದ ಬಾಲಕನಿಗೆ ಅವರ ಸಾವು ತುಂಬಲಾರದ ನಷ್ಟವಾಯಿತು. ಕೂಡಲೇ ನಾಲ್ವಡಿಯವರು ಆತನ ವೀಣಾಭ್ಯಾಸವನ್ನು ವೀಣೆ ಸುಬ್ಬಣ್ಣನವರಲ್ಲೂ, ಮುತ್ತಯ್ಯ ಭಾಗವತರಲ್ಲಿ ಹಾಡುಗಾರಿಕೆಯ ಶಿಕ್ಷಣವನ್ನು ಏರ್ಪಾಡು ಮಾಡಿದರು. ಜೊತೆಗೆ ಆತನನ್ನು ಆಸ್ಥಾನ ವಿದ್ವಾಂಸನನ್ನಾಗಿ ಮಾಡುವುದರ ಮೂಲಕ ಮನೆಯ ಆರ್ಥಿಕ ಸ್ಥಿತಿಗೂ ಅನುಕೂಲವಾಗುವಂತೆ ನೋಡಿಕೊಂಡರು. ಅವರ ನಿರೀಕ್ಷೆ ಹುಸಿ ಮಾಡದೆ, ವಿದ್ಯೆ ಗಳಿಸಿದ ಸ್ವರಮೂರ್ತಿಯ ವೀಣಾ ವಾದನ ಮತ್ತು ಗಾಯನ ಕಛೇರಿಗಳು ಎಲ್ಲೆಡೆ ನಡೆಯಲಾರಂಭಿಸಿದುವು. ದೊರೆಗಳ ಪ್ರೋತ್ಸಾಹದಿಂದ ಪಾಶ್ಚಿಮಾತ್ಯ ಸಂಗೀತದಲ್ಲೂ ಆತ ನಿಷ್ಣಾತನಾದ. ತಾವು ಸರ್ಕೀಟಿಗೆ ಹೋದಾಗ ಜೊತೆಯಲ್ಲಿ ಆತನನ್ನೂ ಕರೆದೊಯ್ಯುವರು. ಆಗ ಆತನ ಪಾಂಡಿತ್ಯವನ್ನು ಒರೆಗೆ ಹಚ್ಚುವಂತೆ ದೊರೆಗಳು ಪ್ರಶ್ನೆಗಳನ್ನು ಕೇಳುತ್ತಿದ್ದರು. ತಾವು ಬೆಳೆಸಿದ ಸಸಿಯು ಸೊಂಪಾಗಿ ಬೆಳೆದಿರುವುದನ್ನು ಕಂಡು ಅವರಿಗೆ ಆನಂದವೋ ಆನಂದ.

ಒಮ್ಮೆ ಕಲಾವಿದರ ಒಂದು ವಿಶೇಷ ದರ್ಬಾರನ್ನು ಕರೆದ ನಾಲ್ವಡಿಯವರು ತಾವು ಈಜಿಪ್ಟಿನಿಂದ ತರಿಸಿದ ಒಂದು ದೊಡ್ಡ ಹಾರ್ಪ್ ಎಂಬ ವಾದ್ಯವನ್ನು ತೋರಿಸಿ, ಇದನ್ನು ಯಾರು ಕಲಿಯುತ್ತೀರಿ ಎಂದು ಪ್ರಶ್ನಿಸಿದಾಗ ಸಭೆ ಮೌನವಾಗಿತ್ತು. ಕೂಡಲೇ ಹದಿನೆಂಟು ಇಪ್ಪತ್ತರ ಪ್ರಾಯದ ಸ್ವರಮೂರ್ತಿ ಎದ್ದುನಿಂತು 'ಮಹಾಪ್ರಭು, ನಾನು ಪ್ರಯತ್ನಿಸುತ್ತೇನೆ ಎಂದಾಗ ಸಂತೋಷಿಸಿದ ಪ್ರಭುಗಳು ಆ ವಾದ್ಯವನ್ನೂ, ಜೊತೆಗೆ ಕಲಿಸಲು ಹಂಟ್, ಸ್ಮಿತ್ ಎಂಬ ಇಬ್ಬರು ಶಿಕ್ಷಕರನ್ನು ಆತನ ಮನೆಗೆ ಕಳುಹಿಸಿಕೊಟ್ಟು, ಕಲಿಯಲು ಎರಡು ತಿಂಗಳ ಅವಧಿಯನ್ನೂ ನೀಡಿದರು. ಮೊದಲ ದಿನ ಆ ವಾದ್ಯದ ತಂತ್ರಗಾರಿಕೆಯ ಪಾಠವನ್ನು ಆರಂಭಿಸಿದರು ಶಿಕ್ಷಕರು. ಎರಡು ದಿನಗಳ ನಂತರ ಅಪ್ಪಣೆಯಾದರೆ, ತಮ್ಮ ಸಮ್ಮುಖದಲ್ಲಿ ನಾನು ನುಡಿಸುತ್ತೇನೆ ಎಂದು ಸ್ವರಮೂರ್ತಿ ಹೇಳಿದಾಗ ದೊರೆಗಳಿಗೆ ಪರಮಾಶ್ಚರ್ಯ. ದೇವಿ ಚಾಮುಂಡೇಶ್ವರಿಯ ಮೇಲಿನ ಒಂದು ಕೀರ್ತನೆಯನ್ನು ಆತ ನುಡಿಸಿದಾಗ ದೊರೆಗಳು ಸಂತೋಷಪಟ್ಟು, ಆಗ್ಗೆ ಬಹು ದೊಡ್ಡ ಮೊತ್ತವಾದ ಐನೂರು ರೂಪಾಯಿಗಳ ಸಂಭಾವನೆಯನ್ನು ಇತ್ತಿದ್ದರು.

ನಾಲ್ವಡಿಯವರ ನಿಧನವು ಸ್ವರಮೂರ್ತಿಗಳ ಬದುಕಿನಲ್ಲಿ ಬಲು ದೊಡ್ಡ ಆಘಾತ. ಮುಂದೆ ಅವರು ತಮ್ಮ ವಾಸವನ್ನು ಬೆಂಗಳೂರಿಗೆ ಬದಲಿಸಿ, ಅಲ್ಲಿನ ಸಾಂಸ್ಕೃತಿಕ ಲೋಕದ ಅವಿಭಾಜ್ಯ ಅಂಗವಾದರು. ಸದಾ ಸ್ವರಗಳನ್ನು ಹೇಳಿಕೊಳ್ಳುತ್ತಿದ್ದ ಅವರನ್ನು ಯಾವುದೋ ವಾಹನವು ಗುದ್ದಿ ಹೋದಾಗಲೂ ಪ್ರಜ್ಞಾಹೀನರಾಗಿದ್ದರೂ ಬಾಯಿಂದ ಸ್ವರಗಳು ಬರುತ್ತಿದ್ದುದು ಸಾವಿನಲ್ಲೂ ಸ್ವರಮೂರ್ತಿ ಎಂಬಂತೆ ಅನ್ವರ್ಥವಾಯಿತು.

ಮಕ್ಕಳ ಸೃಜನಾತ್ಮಕ ಕಲೆಗೆ ನೆಲೆ ಮೈಸೂರಿನ ಜೆಎಸ್‌ಎಸ್ ಚಿತ್ರಕಲಾ ಶಿಬಿರ







ಮೈಸೂರು, ಏ.12(ಬಿಎಲ್‌ಯು)– ಬೇಸಿಗೆ ರಜೆಯಲ್ಲಿ ಕಾಲಹರಣ ಆಗದಂತೆ ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಲು ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠದ ಆವರಣದಲ್ಲಿ ಬೇಸಿಗೆ ಚಿತ್ರಕಲಾ ಶಿಬಿರ ಆಯೋಜಿಸಲಾಗಿದೆ. ಮರದ ನೆರಳಿನ ಪ್ರಕೃತಿಯ ಸ್ವಚ್ಛಂದ ವಾತಾವರಣದಲ್ಲಿ ಮಕ್ಕಳ ಸೃಜನಾತ್ಮಕ ಕಲೆ ವಿವಿಧ ರೂಪ ಪಡೆಯುತ್ತಿದೆ.

ನಗರದ ರಾಮಾನುಜ ರಸ್ತೆಯ ಜೆಎಸ್‌ಎಸ್ ವಿದ್ಯಾಪೀಠದ ಆವರಣದಲ್ಲಿರುವ ಬಾಲ ಜಗತ್‌ನಲ್ಲಿ ನಡೆಯುತ್ತಿರುವ ಜೆಎಸ್‌ಎಸ್ ಬೇಸಿಗೆ ಚಿತ್ರಕಲಾ ಶಿಬಿರ ಮಕ್ಕಳ ಪಠ್ಯೇತರ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿದೆ. 2006ರಿಂದ ಆರಂಭವಾದ ಚಿತ್ರಕಲಾ ಶಿಬಿರ ಇಲ್ಲಿವರೆಗೆ ಯಶಸ್ವಿಯಾಗಿ ನಡೆಯುತ್ತಾ ಬಂದಿದ್ದು, ಕೊರೊನಾ ಸಂದರ್ಭದ ಎರಡು ವರ್ಷ ಬಿಟ್ಟರೆ ಕಳೆದ 16 ವರ್ಷಗಳಿಂದ ಮಕ್ಕಳ ಸೃಜನಾತ್ಮಕ ಕಲೆಯ ಬೆಳವಣಿಗೆಗೆ ನೆಲೆಯಾಗಿದೆ.


ಈ ಮೊದಲು ಬೇಸಿಗೆ ರಜೆ ಬಂತೆಂದರೆ ಮಕ್ಕಳು ತಾತ, ಅಜ್ಜಿಯ ಊರಿಗೆ ಹೋಗುತ್ತಿದ್ದರು. ನಗರದಲ್ಲಿ ಬೆಳೆಯುವ ಮಕ್ಕಳಿಗೆ ಹಳ್ಳಿಗಳ ಗ್ರಾಮೀಣ ಸೊಗಡಿನ ಆಟಗಳ ಪರಿಚಯವಾಗುತ್ತಿತ್ತು. ಲಗೋರಿ, ಗಿಲ್ಲಿ ದಾಂಡು, ಕಬಡ್ಡಿ, ಖೋ ಖೋ ಸೇರಿದಂತೆ ಹಲವು ಆಟಗಳಲ್ಲಿ ತೊಡಗುವ ಮಕ್ಕಳಿಗೆ ವಿಶಿಷ್ಟ ಅನುಭವಾಗುತ್ತಿತ್ತು.

ಶಾಲೆಗೆ ಹೋಗಲು ಬೆನ್ನು ಬಾಗುವಂತೆ ಪುಸ್ತಕಗಳ ಹೊರೆ, ಶಾಲೆ ಬಿಟ್ಟರೆ ಟ್ಯೂಷನ್, ಮನೆಯಲ್ಲಿ ಕೈ ತುಂಬಾ ಹೋಂ ವರ್ಕ್ಸ್ ಇರುತ್ತಿತ್ತು. ಆದರೆ ಹಳ್ಳಿಗೆ ಹೋದಾಗ ಇದ್ಯಾವುದೇ ಸಂಕೋಲೆ ಇಲ್ಲದೆ ಮಕ್ಕಳು ವಿವಿಧ ರೀತಿಯ ಗ್ರಾಮೀಣ ಶೈಲಿಯ ಆಟಗಳಲ್ಲಿ ತೊಡಗಿ ಸಂತಸಪಡುತ್ತಿದ್ದರು.

ಆದರೆ, ಇತ್ತೀಚಿಗೆ ಹಳ್ಳಿಗಳು ನಗರಗಳಾಗಿ ಮಾರ್ಪಟ್ಟಿವೆ. ಮೊಬೈಲ್, ಟಿವಿ ಬಂದ ಮೇಲೆ ಗ್ರಾಮೀಣ ಶೈಲಿಯ ಆಟಗಳು ಮರೆಯಾಗಿವೆ. ಮನೆಯಲ್ಲಿರುವರೆಲ್ಲಾ ಸ್ಮಾರ್ಟ್ ಫೋನ್ ಹಿಡಿದು ಇಡೀ ದಿನ ಕಾಲ ಕಳೆಯುತ್ತಾರೆ. ಕೆಲವರು ಟಿವಿ ಮುಂದೆ ಕುಳಿತು ಸೋಮಾರಿಗಳಾಗಿದ್ದಾರೆ. ಇದರಿಂದ ಮಕ್ಕಳಿಗೆ ನಗರ ಹಾಗೂ ಹಳ್ಳಿ ಒಂದೇ ಆಗಿದ್ದು, ಯಾವುದೇ ವ್ಯತ್ಯಾಸ ಇಲ್ಲದಂತಾಗಿದೆ. ಆದ ಕಾರಣ ಕೆಲವು ಮಕ್ಕಳು ಹಳ್ಳಿಗೆ ಹೋಗದೆ ನಗರದಲ್ಲಿ ಇದ್ದು, ಇಂತಹ ಚಿತ್ರಕಲಾ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಾರೆ.

ಈ ಹಿನ್ನೆಲೆ ನಗರಗಳಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಲಾಗುತ್ತಿದೆ. ಬೇಸಿಗೆ ರಜೆಯಲ್ಲಿ ಕಾಲಹರಣ ಮಾಡುವ ಬದಲು ಶಿಬಿರಗಳಲ್ಲಿ ಮಕ್ಕಳು ತಮ್ಮ ಭವಿಷ್ಯಕ್ಕೆ ಪೂರಕವಾದ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ.

ಶಿಬಿರದಿಂದ ಮಕ್ಕಳ ಜ್ಞಾಪಕ ಶಕ್ತಿ ವೃದ್ಧಿ



“ಚಿತ್ರಕಲೆಯಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ. ಮಕ್ಕಳು ತಮ್ಮ ಪರಿಕಲ್ಪನೆಯ ಚಿತ್ರಗಳನ್ನು ಕ್ಯಾನ್ವಾಸ್‌ನಲ್ಲಿ ರೂಪ ನೀಡುತ್ತಾರೆ. ಫ್ರೀ ಹ್ಯಾಂಡ್ ಡ್ರಾಯಿಂಗ್‌ನಿಂದ ಮಕ್ಕಳ ಹ್ಯಾಂಡ್ ರೈಟಿಂಗ್ ಚೆನ್ನಾಗಿ ಮೂಡಿ ಬರಲಿದೆ. ಪಠ್ಯದ ಜೊತೆಗೆ ಮಕ್ಕಳು ಇಂತಹ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ಸೃಜನಾತ್ಮಕ ಕಲೆ ವಿಶಿಷ್ಟ ರೂಪ ಪಡೆಯಲಿದೆ. ಇಂದಿನ ಮಾರುಕಟ್ಟೆ ವ್ಯವಸ್ಥೆಯಲ್ಲಿ ಜಾಹೀರಾತು ಪ್ರಮುಖ ಪಾತ್ರ ವಹಿಸುತ್ತದೆ. ಮಕ್ಕಳು ಉನ್ನತ ಶಿಕ್ಷಣದಲ್ಲಿ ಇದಕ್ಕೆ ಸಂಬಂಧಿಸಿದಂತೆ ವ್ಯಾಸಂಗ ಮಾಡಿದಾಗ ಈಗ ಕಲಿಯುವ ಚಿತ್ರಕಲೆ ಪೂರಕವಾಗಿರುತ್ತದೆ.

–ಎಸ್.ಎಂ.ಜಂಬುಕೇಶ್ವರ್, ಶಿಬಿರದ ಸಂಚಾಲಕರು

ಜೆಎಸ್‌ಎಸ್ ವಿದ್ಯಾಪೀಠದ ಆವರಣದಲ್ಲಿ ನಡೆಯುತ್ತಿರುವ ಬೇಸಿಗೆ ಕಲಾ ಶಿಬಿರದಲ್ಲಿ ಮಕ್ಕಳಿಗೆ ಸ್ಮರಣ ಚಿತ್ರಕಲೆ, ನಿಸರ್ಗ ಚಿತ್ರಕಲೆ, ವಸ್ತು ಚಿತ್ರಕಲೆ, ಡಿಸೈನ್ ಕಲೆ, ಕ್ಯಾನ್ವಸ್ ಪೈಂಟಿಂಗ್, ಫ್ರೀ ಹ್ಯಾಂಡ್ ಡ್ರಾಯಿಂಗ್, ಗ್ಲಾಸ್ ಪೈಂಟಿಂಗ್, ಪೇಪರ್ ಕ್ರಾಫ್ಟ್ ಸೇರಿದಂತೆ ಹಲವು ಚಿತ್ರಕಲೆಗಳನ್ನು ಕಲಿಸಲಾಗುತ್ತಿದೆ. ಜೆಎಸ್‌ಎಸ್ ಸಂಸ್ಥೆಯ ವಿವಿಧ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿತ್ತಿರುವ ಏಳು ಚಿತ್ರಕಲಾ ಶಿಕ್ಷಕರು ಮಕ್ಕಳಿಗೆ ಚಿತ್ರಕಲೆ ಪಾಠ ಹೇಳಿಕೊಡುತ್ತಿದ್ದಾರೆ. ಶಾಲೆಯಲ್ಲಿ 4 ಗೋಡೆಯ ಮಧ್ಯೆ ಒಂದೇ ಸ್ಥಳದಲ್ಲಿ ಕುಳಿತು ಪಠ್ಯ ಮಾತ್ರ ಕಲಿಯಬೇಕಿತ್ತು. ಆದರೆ ಇಲ್ಲಿ ಶಾಲೆಯ ವಾತಾವರಣ ಮರೆಯುವ ವಿದ್ಯಾರ್ಥಿಗಳು ವಿವಿಧ ರೀತಿಯ ಚಿತ್ರಕಲೆಗೆ ವಿಶಿಷ್ಟ ರೂಪ ನೀಡುತ್ತಿದ್ದಾರೆ. ವಯಸ್ಸಿನ ಆಧಾರದ ಮೇಲೆ ಮೂರು ಗ್ರೂಪ್‌ಗಳನ್ನು ಮಾಡಿ ಚಿತ್ರಕಲೆ ಹೇಳಿಕೊಡಲಾಗುತ್ತಿದೆ. ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಶಿಬಿರ ನಡೆಯಲಿದೆ. ಏ.22ರಂದು ಶಿಬಿರದ ಸಮಾರೋಪ ಸಮಾರಂಭ ನಡೆಯಲಿದೆ. ಈ ವೇಳೆ ಉತ್ತಮ ಚಿತ್ರಕಲೆ ಬರೆದ ಮಕ್ಕಳಿಗೆ ನಗದು ಬಹುಮಾನ ನೀಡಿ ಉತ್ತೇಜಿಸಲಾಗುತ್ತಿದೆ.

ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಾಗುತ್ತದೆ

“ಮಕ್ಕಳು ವರ್ಷಪೂರ್ತಿ ಶಾಲೆಗಳಲ್ಲಿ ಪಠ್ಯ ಕಲಿಯುತ್ತಾರೆ. ಆದರೆ ಚಿತ್ರಕಲಾ ಶಿಬಿರದಲ್ಲಿ ಮರದ ಕೆಳಗೆ ಕುಳಿತು ಸ್ವಚ್ಛಂದವಾಗಿ ತಮ್ಮ ಪರಿಕಲ್ಪನೆಯ ಚಿತ್ರಗಳಿಗೆ ವಿಶಿಷ್ಟ ರೂಪ ನೀಡುತ್ತಿದ್ದಾರೆ. ಶಾಲೆಗಳಂತೆ ಇಲ್ಲಿ ಮಕ್ಕಳಿಗೆ ಯಾವುದೇ ನಿರ್ಬಂಧವಿಲ್ಲ. ಇಲ್ಲಿ ಕಲಿಯುವ ಚಿತ್ರಕಲೆ ಮಕ್ಕಳ ಸೃಜನಾತ್ಮಕತೆಯ ವೃದ್ಧಿಗೆ ಪೂರಕವಾಗಲಿದೆ. ಮಕ್ಕಳಲ್ಲಿ ಏಕಾಗ್ರತೆ ಮತ್ತು ಮಾನಸಿಕ ಬೆಳವಣಿಗೆ ಕೂಡ ವೃದ್ಧಿಯಾಗುತ್ತದೆ.

–ಡಾ.ಸಿಂಧು, ಪೋಷಕರು

ಟಯರ್ ಬರ್ಸ್ಟ್; ಸೇತುವೆಗೆ ಕಾರು ಡಿಕ್ಕಿ: ಇಬ್ಬರಿಗೆ ಗಾಯ

ಆರ್‌ಬಿಐ ಎದುರು ರಿಂಗ್ ರೋಡ್ ಸರ್ವಿಸ್ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ದುರ್ಘಟನೆ




ಕಿರು ಸೇತುವೆಗೆ ಅಪ್ಪಳಿಸಿದ ಹುಂಡೈ ಐ–10 ಕಾರು.

ಮೈಸೂರು,ಏ.12(ಆರ್‌ಕೆ)– ಮುಂದಿನ ಎಡ ಚಕ್ರದ ಟಯರ್ ಬರ್ಸ್ಟ್ ಆದ ಹಿನ್ನೆಲೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ಕಿರು ಸೇತುವೆಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಗಾಯಗೊಂಡಿರುವ ಘಟನೆ ಮೈಸೂರಿನ ಆರ್‌ಬಿಐ ಎದುರು ರಿಂಗ್ ರಸ್ತೆಯ ಸರ್ವಿಸ್ ರೋಡ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಗಾಯಗೊಂಡ ಬೆಂಗಳೂರಿನ ಇಬ್ಬರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮಣಿಪಾಲ್ ಆಸ್ಪತ್ರೆ ಕಡೆಯಿಂದ ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್ ಕಡೆಗೆ ಬರುತ್ತಿದ್ದ ಹುಂಡೈ ಐ–10 (ಕೆಎ 02–ಎಂಡಿ 9767) ಕಾರು, ಆರ್‌ಬಿಐ ಎದುರು ರಿಂಗ್ ರಸ್ತೆಯ ಸರ್ವಿಸ್ ರೋಡ್‌ನಲ್ಲಿ ಮಧ್ಯಾಹ್ನ 3.10 ಗಂಟೆ ವೇಳೆಯಲ್ಲಿ ಟಯರ್ ಬರ್ಸ್ಟ್ ಆದ ಕಾರಣ ಎಡಕ್ಕೆ ತಿರುಗಿ ಹಿಂದೆ ಬರುತ್ತಿದ್ದ ಟೊಯೋಟಾ ಇನ್ನೋವಾ (ಕೆಎ 41–ಎಂಎ 1692) ಕಾರ್‌ಗೆ ಡಿಕ್ಕಿ ಹೊಡೆದು ಪಕ್ಕದಲ್ಲಿದ್ದ ಸಣ್ಣ ಸೇತುವೆಗೆ ಅಪ್ಪಳಿಸಿದೆ.

ಪರಿಣಾಮ ಐ–10 ಕಾರ್‌ನ ಮುಂಭಾಗ ಜಖಂಗೊಂಡು ಅದರಲ್ಲಿದ್ದ ಇಬ್ಬರು ಗಾಯಗೊಂಡರು. ತಕ್ಷಣ ರಿಂಗ್ ರಸ್ತೆಯ ಗಸ್ತಿನಲ್ಲಿದ್ದ ಮೇಟಗಳ್ಳಿ ಠಾಣೆ 112 ವಾಹನದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಗಾಯಗೊಂಡವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದರು. ಇನ್ನೋವಾ ಕಾರ್‌ನಲ್ಲಿದ್ದವರು ಸುರಕ್ಷಿತವಾಗಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಜಖಂಗೊಂಡಿದ್ದ ಕಾರನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 13 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 353 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಈ ಸರ್ಕಾರದ್ದು ಬರೀ ಲೂಟಿ... ಲೂಟಿ...

●ಅಧಿಕಾರದಲ್ಲಿ ಇನ್ನೂ ಇರಲು ಬಿಟ್ಟರೆ ರಾಜ್ಯದ ಸಾಲ 10 ಲಕ್ಷ ಕೋಟಿಗೇರುತ್ತೆ! ●ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

■ ಸರ್ಕಾರದ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ; ವಿಧಾನಸೌಧಕ್ಕೆ ಮುತ್ತಿಗೆ ಯತ್ನ ■ ಈ ಸರ್ಕಾರದ ಮೂವರು ಕಂಡ ಕಂಡಲ್ಲಿ ಲೂಟಿ ಮಾಡ್ತಿದ್ದಾರೆ ■ ಇವರದ್ದನ್ನು ಪ್ರಶ್ನಿಸಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರದ ವಿರುದ್ಧ ಬೊಟ್ಟು ಮಾಡ್ತಾರೆ

ಬೆಂಗಳೂರು,ಏ.12(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ಅಗತ್ಯ ಸಾಮಗ್ರಿಗಳ ಬೆಲೆ ಏರಿಕೆ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತದಲ್ಲಿ ತೊಡಗಿದೆ ಎಂದು ಜೆಡಿಎಸ್ ರಾಜ್ಯ ಘಟಕ ಇಂದಿಲ್ಲಿ ತೀವ್ರ ಪ್ರತಿಭಟನೆ ನಡೆಸಿ ವಿಧಾನಸೌಧ ಮುತ್ತಿಗೆ ಪ್ರಯತ್ನ ಮಾಡಿತು.

ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಮುತ್ತಿಗೆ ಹಾಕಲು ಯತ್ನಿಸಿದ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರು, ಮುಖಂಡರನ್ನು ಪೊಲೀಸರು ಬಂಧಿಸಿದರು. ಇದಕ್ಕೂ ಮುನ್ನ ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತಿತರ ನಾಯಕರು ಮಾತನಾಡಿ, ಸರ್ಕಾರದ ಭ್ರಷ್ಟಾಚಾರ ಮತ್ತು ಹಗರಣಗಳ ಬಗ್ಗೆ ಎಳೆ ಎಳೆಯಾಗಿ ಬಿಡಿಸಿಟ್ಟರು.

ಅಧಿಕಾರ ದುರುಪಯೋಗ ಮಾಡಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪಟಾಲಂ ಜನರ ಹಣ ಲೂಟಿ ಮಾಡುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರದ ಭ್ರಷ್ಟ ವ್ಯವಸ್ಥೆಯಿಂದ ಜನರು ರೋಸಿ ಹೋಗಿದ್ದಾರೆ. ಈಗಲೇ ವಿಧಾನಸಭಾ ಚುನಾವಣೆ ನಡೆದರೆ ಇವರನ್ನು ಮನೆಗೆ ಕಳುಹಿಸಿ ಹೊಸ ಸರ್ಕಾರವನ್ನು ಅಧಿಕಾರಕ್ಕೆ ತರುವ ಸ್ಥಿತಿ ಇದೆ. ಅಧಿಕಾರಿಗಳ ವರ್ಗಾವಣೆಗೂ ಲಂಚ, ಯಾವುದೇ ಇಲಾಖೆಯಲ್ಲಿ ಜನ ತಮ್ಮ ಕೆಲಸ ಮಾಡಿಸಿಕೊಳ್ಳಲು ಹೋದರೂ ಲಂಚ, ಇಂತಹ ಪರಿಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣವಾಗಿದೆ. ನಮ್ಮಲ್ಲಿರುವ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಕೆ ಮಾಡದೆ, ಕೇವಲ ಲೂಟಿಯಲ್ಲೇ ಮುಳುಗಿ ಕೇಂದ್ರದ ವಿರುದ್ಧ ಬೊಟ್ಟು ಮಾಡುತ್ತಾ ಸಿದ್ದರಾಮಯ್ಯ ಕಾಲ ಕಳೆಯುತ್ತಿದ್ದಾರೆ. ಒಮ್ಮೆ ನಮಗೊಂದು ಪೂರ್ಣಾವಕಾಶ ಕೊಡಿ, 5 ವರ್ಷದ ಆಡಳಿತದಲ್ಲಿ ಇವರು ಮಾಡಿರುವ ಭ್ರಷ್ಟಾಚಾರವನ್ನೆಲ್ಲಾ ತೊಡೆದು ಹಾಕಿ, ನಮ್ಮ ಸಂಪನ್ಮೂಲದಲ್ಲಿ ಯಾವ ರೀತಿ ಅಭಿವೃದ್ಧಿ ಮಾಡಬಹುದೆಂಬುದನ್ನು ತೋರಿಸುತ್ತೇನೆ. ಜೆಡಿಎಸ್ ಅನ್ನು ಯಾರಿಂದಲೂ ಮುಳುಗಿಸಲು ಸಾಧ್ಯವಿಲ್ಲ. ■6ನೇ ಪುಟಕ್ಕೆ



ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮತ್ತಿತರ ಜೆಡಿಎಸ್ ನಾಯಕರು 'ಸಾಕಪ್ಪ ಸಾಕು ಕಾಂಗ್ರೆಸ್ ಸರ್ಕಾರ' ಪೋಸ್ಟರ್ ಹಿಡಿದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯರಿಂದ ಜಾತಿ ಗಣತಿ ನಾಟಕ

ಬೆಂಗಳೂರು,ಏ.12–ಜಾತಿಗಣತಿ ವರದಿಗೆ ಅರ್ಥವೇ ಇಲ್ಲ. ಕಾಂತರಾಜು ಆಯೋಗದ ವರದಿ ಸಿದ್ಧ ಮಾಡಿ ಹತ್ತು ವರ್ಷಗಳೇ ಕಳೆದಿವೆ. ಜನರಲ್ಲಿ ಗ್ಯಾರಂಟಿ ವೈಫಲ್ಯ, ಭ್ರಷ್ಟಾಚಾರ, ದರ ಏರಿಕೆ ವಿರುದ್ಧ ಆಕ್ರೋಶ ಸ್ಫೋಟವಾಗುವ ಹಂತದಲ್ಲಿದೆ. ಹೀಗಾಗಿ ಜನರ ಗಮನ ಬೇರೆಡೆಗೆ ಹೊರಳಿಸಲು ಸಿಎಂ ಸಿದ್ದರಾಮಯ್ಯ ಜಾತಿ ಗಣತಿ ಡ್ರಾಮಾ ನಡೆಸಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಫ್ರೀಡಂ ಪಾರ್ಕ್ ಬಳಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಇವರು ಜಾತಿ ಗಣತಿ ಮಾಡಬೇಕಾದರೆ ಹೊಸದಾಗಿ ಸಮೀಕ್ಷೆ ಮಾಡಬೇಕು. ಹೊಸದಾಗಿ ನೀವು ವರದಿ ಕೊಡಬೇಕಾಗುತ್ತದೆ. ಹತ್ತು ವರ್ಷದಲ್ಲಿ ಬಹಳ ಬದಲಾವಣೆ ಆಗಿದೆ. ಈಗ ನೋಡಿದರೆ ಇವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಜಾತಿ ಜಾತಿ ಮಧ್ಯ ಸಂಘರ್ಷ ತರುವ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ರಾಜ್ಯವನ್ನು ಸರ್ವನಾಶ ಮಾಡಲು ಹೊರಟಿದ್ದಾರೆ. ಜಾತ್ಯತೀತ ಎಂದು ಹೇಳಿಕೊಳ್ಳುವ, ಸಂವಿಧಾನ ಪ್ರತಿಯನ್ನು ಸದಾ ಕೈಯ್ಯಲ್ಲಿ ಹಿಡಿದು ಶೋ ಮಾಡುವ ಕಾಂಗ್ರೆಸ್, ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿದೆ. ಜಾತಿ ಸಂಘರ್ಷಕ್ಕೆ ಏನೇನು ಮಾಡಬೇಕೋ ಅದಕ್ಕೆ ವೇದಿಕೆ ಸಿದ್ಧ ಮಾಡಲು ಸಿದ್ದರಾಮಯ್ಯ ಹೊರಟಿದ್ದಾರೆ. ಇವರು ಬಂದು 2 ವರ್ಷವಾಯಿತು. ಆವಾಗಿನಿಂದ ಯಾಕೆ ವರದಿ ಜಾರಿ ಮಾಡಲಿಲ್ಲ. ಕುರ್ಚಿ ಉಳಿಸಿಕೊಳ್ಳಬೇಕೆಂದು ಈ ಡ್ರಾಮಾ ಆರಂಭ ಮಾಡಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಅಧಿಕಾರದಲ್ಲಿ ಇರುವವರೆಗೂ ನಿರಂತರ ಹೋರಾಟ: ನಿಖಿಲ್

ಸಚಿವರ ಕುಟುಂಬಸ್ಥರು ಕಮಿಷನ್ ಏಜೆಂಟ್‌ಗಳಾಗಿ ಕೆಲಸ ಮಾಡ್ತಿದ್ದಾರೆ


ಬೆಂಗಳೂರು,ಏ.12–'ಸಾಕಪ್ಪ ಸಾಕು ಕಾಂಗ್ರೆಸ್ ಸರ್ಕಾರ' ಇದು ಜೆಡಿಎಸ್ ಪಕ್ಷದ ಸ್ಲೋಗನ್ ಅಲ್ಲ. ರಾಜ್ಯದ ಏಳೂವರೆ ಕೋಟಿ ಜನರ ಮನದಾಳದ ಮಾತನ್ನು ನಾವು ಹೇಳಿದ್ದೇವೆ. ನಮ್ಮ ಈ ಹೋರಾಟ ಒಂದು ದಿನದ ಅಭಿಯಾನ ಅಲ್ಲ. ಈ ಹೋರಾಟ ಕಾಂಗ್ರೆಸ್ ಅಧಿಕಾರ ಇರುವವರೆಗೂ ನಿರಂತರವಾಗಿ ಹೋರಾಟ ಮಾಡುತ್ತೇವೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಾಕಪ್ಪ ಸಾಕು ಎಂಬ ಘೋಷವಾಕ್ಯದೊಂದಿಗೆ ತಮ್ಮ ನೇತೃತ್ವದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣ ಸ್ಥಗಿತಗೊಂಡು ಶೂನ್ಯವಾಗಿದೆ. ಕಾಂಗ್ರೆಸ್ 2 ವರ್ಷಗಳ ಅಧಿಕಾರದಲ್ಲಿ ರಾಜ್ಯದ ಜನತೆಗೆ ಸಂಕಷ್ಟದ ದಿನಗಳನ್ನು ತಂದೊಡ್ಡಿದೆ. ಬರ್ತ್ ಸರ್ಟಿಫಿಕೇಟ್‌ನಿಂದ ಡೆತ್ ಸರ್ಟಿಫಿಕೇಟ್ ವರೆಗೂ ದರ ಹೆಚ್ಚಳ ಮಾಡಿದ್ದಾರೆ. ಬಸ್, ಮೆಟ್ರೋ, ಆಸ್ಪತ್ರೆ ಶುಲ್ಕ ಎಲ್ಲದರ ಬೆಲೆ ಏರಿಕೆ ಮಾಡಿದ್ದಾರೆ ಎಂದು ಕಿಡಿಕಾರಿದರು.

"ನೀವೇ ನಮಗೆ ಶಕ್ತಿ, ಎದೆಗುಂದಬೇಡಿ, ಪಕ್ಷವನ್ನು ಸಂಘಟಿಸಿ ಜನರ ಬಳಿಗೆ ತೆರಳಿ, ಪಕ್ಷವನ್ನು ಒಂದು ಬಾರಿಗೆ ಅಧಿಕಾರಕ್ಕೆ ತನ್ನಿ. ನಾವು ಹೇಗೆ ಆಡಳಿತ ನಡೆಸುತ್ತೇವೆ ಎಂಬುದನ್ನು ತೋರಿಸುವೆ. ಹಿಂದೆ ನನಗೆ ಎರಡು ಬಾರಿ ಅಧಿಕಾರ ದೊರೆತಾಗಲೂ ಸಾಲ ಮಾಡಲು ಮುಂದಾಗಲಿಲ್ಲ. ಇರುವ ಸಂಪನ್ಮೂಲದಲ್ಲೇ ಅಭಿವೃದ್ಧಿ ಮಾಡಿ ತೋರಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರದ ಕಪ್ಪು ಚುಕ್ಕೆ ಇಲ್ಲ.

–ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು

ದ್ವಿತೀಯ ಪಿಯುಸಿ 2, 3ನೇ ಪರೀಕ್ಷೆ ತೆಗೆದುಕೊಳ್ಳುವವರು ಸಿಇಟಿ ಬರೆಯಬಹುದು



ಬೆಂಗಳೂರು, ಏ.12(ಕೆಎಂಶಿ)–ದ್ವಿತೀಯ ಪಿಯುಸಿ ಮೊದಲನೇ ಪರೀಕ್ಷೆಯಲ್ಲಿ ನಿಗದಿತ ಅರ್ಹತೆ ಗಳಿಸದ ಹಾಗೂ ಅನುತ್ತೀರ್ಣರಾಗಿ 2 ಮತ್ತು 3ನೇ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಅಭ್ಯರ್ಥಿಗಳೂ ಸಹ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಬಹುದಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ಹೊರನಾಡು ಕನ್ನಡಿಗರಿಗೆ ಏ.15ರಂದು ಕನ್ನಡ ಹಾಗೂ 16 ಮತ್ತು 17ರಂದು ವಿಜ್ಞಾನ ವಿಷಯಗಳ ಸಿಇಟಿ ನಡೆಯಲಿದ್ದು, ಪ್ರಾಧಿಕಾರ ಸಕಲ ತಯಾರಿ ನಡೆಸಿದೆ ಎಂದು ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಮೊದಲನೇ ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂದಾಗ್ಯೂ ಎರಡು ಮತ್ತು ಮೂರನೇ ಪರೀಕ್ಷೆ ಬರೆಯುವ ಅವಕಾಶವಿದ್ದು, ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ.

ಪಿಯುಸಿ 3ನೇ ಪರೀಕ್ಷೆಯಲ್ಲಿ ಅರ್ಹರಾದವರೂ ಸಿಇಟಿ ರ್‍ಯಾಂಕ್ ಪಡೆದು, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಪಡೆಯಬಹುದಾಗಿದೆ, ಸಿಇಟಿ ಪರೀಕ್ಷೆ ಬರೆಯದಿರುವವರನ್ನು ರ್‍ಯಾಂಕ್‌ಗೆ ಪರಿಗಣಿಸಲಾಗದು. ಕಳೆದ ವರ್ಷವೂ 3ನೇ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅನೇಕರಿಗೆ ರ್‍ಯಾಂಕ್ ನೀಡಿ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ವ್ಯವಸ್ಥೆ ಮಾಡಲಾಗಿತ್ತು, ಆದ್ದರಿಂದ ಸಿಇಟಿ ಪರೀಕ್ಷೆ ತಪ್ಪಿಸಿಕೊಳ್ಳದಂತೆ ಸಲಹೆ ನೀಡಿದ್ದಾರೆ.

ಮಂಡ್ಯದಲ್ಲಿ ಇದೇ ಮೊದಲು ಅದ್ಧೂರಿ ಶೋಭಾಯಾತ್ರೆ

● ಸುಮಾರು 6 ಕಿ.ಮೀ. ಕ್ರಮಿಸಿದ ಯಾತ್ರೆ ● ಸಾವಿರಾರು ಹಿಂದೂಪರ ಕಾರ್ಯಕರ್ತರು ಭಾಗಿ ● ಮೆರವಣಿಗೆಯಲ್ಲಿ ರಾರಾಜಿಸಿದ ರಾಮ, ಹನುಮ ಮೂರ್ತಿಗಳು ● ಕೆರಗೋಡಿನಲ್ಲಿ ಹನುಮ ಧ್ವಜ ಹಾರಿಸಲು ಒಕ್ಕೊರಲ ಆಗ್ರಹ

ಮಂಡ್ಯ,ಏ.12–ಕರಾವಳಿ, ಮಲೆನಾಡು ಭಾಗದಲ್ಲಿ ನಡೆಯುತ್ತಿದ್ದ ಶೋಭಾಯಾತ್ರೆ ಇದೇ ಮೊದಲ ಬಾರಿಗೆ ಮಂಡ್ಯ ನಗರದಲ್ಲಿ ನಡೆಯಿತು. ಸಾವಿರಾರು ಮಂದಿ ಹಿಂದೂಪರ ಕಾರ್ಯಕರ್ತರು ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಾ, ರಾಮ, ಹನುಮನ ನಾಮಸ್ಮರಣೆ ಮೊಳಗಿಸಿದರು.

ಶನಿವಾರ ಮಧ್ಯಾಹ್ನ 12.30ಕ್ಕೆ ನಗರದ ಶಕ್ತಿ ದೇವತೆ ಕಾಳಿಕಾಂಭ ದೇಗುಲದ ಬಳಿ ವಿಶೇಷ ಪೂಜೆ ಸಲ್ಲಿಸಿ, ಆರಂಭವಾದ ಯಾತ್ರೆಯು ಸುಮಾರು 6 ಕಿಲೋಮೀಟರ್ ಕ್ರಮಿಸಿತು. ಯಾತ್ರೆಯು ಸಂಜೆಯ ವೇಳೆಗೆ ಮಂಡ್ಯ ಬಾಯ್ಸ್ ಕಾಲೇಜು ಆವರಣದಲ್ಲಿ ಮುಕ್ತಾಯವಾಯಿತು.

ಮೆರವಣಿಗೆಯಲ್ಲಿ ಮಂಡ್ಯ ಮಾತ್ರವಲ್ಲದೇ ಹೊರಗಿನಿಂದ ಬಂದಿದ್ದ ಸಾವಿರಾರು ಮಂದಿ ಕಾರ್ಯಕರ್ತರಲ್ಲಿ ಮಹಿಳೆಯರು ಸಹ ಹೆಚ್ಚಿನ ಸಂಖ್ಯೆಯಲ್ಲಿದ್ದದ್ದು ವಿಶೇಷವಾಗಿತ್ತು. ಹನುಮ ಧ್ವಜ ಹಿಡಿದು, ರಾಮ ಮತ್ತು ಹನುಮನ ಬೃಹತ್ ಮೂರ್ತಿಯ ಮೆರವಣಿಗೆಯಲ್ಲಿ ಘೋಷಣೆಗಳು ಮೊಳಗಿದವು. ಈ ಸಂದರ್ಭದಲ್ಲಿ ರಾಮ ಮತ್ತು ಹನುಮನ ಗೀತೆಗಳಿಗೆ ಡಿಜೆ ಎಫೆಕ್ಟ್‌ನಲ್ಲಿ ಕಾರ್ಯಕರ್ತರು ನೃತ್ಯ ಮಾಡುತ್ತಾ ಮೆರವಣಿಗೆಯಲ್ಲಿ ಸಾಗಿದರು. ಅದರಲ್ಲೂ ಬೆಳ್ಳಿ ರಥದಲ್ಲಿ ಆಂಜನೇಯ ಮೂರ್ತಿ ಮೆರವಣಿಗೆ ಗಮನ ಸೆಳೆಯಿತು.

ಮೆರವಣಿಗೆಯು ಮಾರ್ಕೆಟ್ ರಸ್ತೆ ಮೂಲಕ ಕಾಮನ ವೃತ್ತ, ಮಹಾವೀರ ವೃತ್ತ ವಿ.ವಿ.ರಸ್ತೆ ನೂರಡಿ ರಸ್ತೆ ಆರ್.ಪಿ.ರಸ್ತೆ ಬೆಂಗಳೂರು–ಮೈಸೂರು ಹಳೇ ರಸ್ತೆ ಮೂಲಕ ಮಂಡ್ಯ ವಿವಿ ಆವರಣ (ಬಾಯ್ಸ್ ಕಾಲೇಜು) ತಲುಪಿತು. ವಿವಿ ಆವರಣದಲ್ಲಿ ಬೃಹತ್ ಶೋಭಾಯಾತ್ರೆ ಸಮಾವೇಶ ಜರುಗಿತು. ಮಂಡ್ಯ ಜಿಲ್ಲೆಯ ಮೊದಲ ಬಾರಿಗೆ ನಡೆದ ಶೋಭಾಯಾತ್ರೆ ಸಂಪೂರ್ಣ ಯಶಸ್ವಿಯಾಯಿತು.



ಕೆರಗೋಡಿನಲ್ಲಿ ಹನುಮ ಧ್ವಜ ಹಾರಾಟಕ್ಕೆ ಆಗ್ರಹ: ಕೆರಗೋಡಿನ ಅರ್ಜುನ ಸ್ತಂಭದಲ್ಲಿ ಮತ್ತೆ ಹನುಮ ಧ್ವಜ ಹಾರಾಡಬೇಕೆಂಬುದು ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದ ಬಹುತೇಕ ಮಂದಿಯ ಒಕ್ಕೊರಲ ಬೇಡಿಕೆಯಾಗಿತ್ತು. ಹಿಂದುತ್ವ ಉಳಿವಿಗೆ ಹಾಗೂ ಕೆರಗೋಡಿನಲ್ಲಿ ಮತ್ತೆ ಹನುಮ ಧ್ವಜ ಹಾರಾಟಕ್ಕೆ ಈ ಯಾತ್ರೆ ನಡೆಸುತ್ತಿದ್ದು, ಪ್ರತಿ ವರ್ಷವೂ ಇನ್ಮುಂದೆ ಶೋಭಾಯಾತ್ರೆ ಮಾಡಲಿದ್ದೇವೆ ಎಂದು ಹಿಂದೂಪರ ಕಾರ್ಯಕರ್ತರು ಹೇಳಿದರು.

ಕಳೆದ ವರ್ಷ ಮಂಡ್ಯ ತಾಲೂಕಿನ ಕೆರಗೋಡಿನ ಅರ್ಜುನ ಸ್ತಂಭದಲ್ಲಿ ಹನುಮ ಧ್ವಜ ಹಾರಾಟಕ್ಕೆ ಸಂಬಂಧಿಸಿದಂತೆ ದೊಡ್ಡ ವಿವಾದ ಸೃಷ್ಟಿಯಾಗಿತ್ತು. ಅರ್ಜುನ ಸ್ತಂಭದಲ್ಲಿ ಹನುಮ ಧ್ವಜ ಹಾರಿಸಿ ಮತ್ತೊಂದು ಗುಂಪು ವಿರೋಧ ವ್ಯಕ್ತಪಡಿಸಿದ್ದರಿಂದ ಕಡೆಗೆ ಪೊಲೀಸರು ಹನುಮ ಧ್ವಜ ಇಳಿಸಿ ರಾಷ್ಟ್ರಧ್ವಜ ಹಾರಿಸಿದ್ದರು. ಪೊಲೀಸರು ಮತ್ತು ಜಿಲ್ಲಾಡಳಿತದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದ ಹಿಂದೂಪರ ಕಾರ್ಯಕರ್ತರು ಮತ್ತು ಬಿಜೆಪಿ, ಜೆಡಿಎಸ್ ಮುಖಂಡರು ಹನುಮ ಧ್ವಜ ಇಳಿಸುವ ಸಲುವಾಗಿ ಇಷ್ಟಬಂದ ಸಮಯದಲ್ಲಿ ರಾಷ್ಟ್ರಧ್ವಜ ಹಾರಿಸಿ, ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ್ದಾರೆ ಎಂದು ಕಿಡಿಕಾರಿದ್ದರು. ಜೊತೆಗೆ ಕೆರಗೋಡಿನಿಂದ ಮಂಡ್ಯವರೆಗೂ ಪಾದಯಾತ್ರೆ ಸಹ ನಡೆಸಲಾಗಿತ್ತು. ಹೆಚ್.ಡಿ.ಕುಮಾರಸ್ವಾಮಿ, ಆರ್.ಅಶೋಕ್, ಸಿ.ಟಿ.ರವಿ, ಅಶ್ವತ್ಥ್ ನಾರಾಯಣ ಸೇರಿದಂತೆ ಹಲವು ಮುಖಂಡರು ■6ನೇ ಪುಟಕ್ಕೆ

ಒಬಿಸಿ ಮೀಸಲಾತಿ ಪ್ರಮಾಣ ಶೇ.32ರಿಂದ 51ಕ್ಕೆ ಏರಿಸಲು ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಶಿಫಾರಸು

●ಹಿಂದುಳಿದ ಜಾತಿಗಳ ಪಟ್ಟಿಯಲ್ಲಿರುವ ವಿವಿಧ ಜಾತಿ ಮೀಸಲಾತಿ ಮರು ವರ್ಗೀಕರಿಸಿ ಆಯಾ ಜಾತಿ ಜನಸಂಖ್ಯೆಗನುಗುಣವಾಗಿ ಮೀಸಲಾತಿಗೆ ಸಲಹೆ ●ರಾಜ್ಯದ 2ನೇ ಅತಿ ದೊಡ್ಡ ಸಮುದಾಯ ಮುಸ್ಲಿಂರಿಗೆ ಹಾಲಿ ಶೇ.4ರಿಂದ 8ಕ್ಕೆ ಏರಿಕೆ ಮಾಡಲು ಶಿಫಾರಸು

ಬೆಂಗಳೂರು, ಏ.12– ಹಿಂದುಳಿದ ಜಾತಿಗಳ (ಒಬಿಸಿ) ಮೀಸಲಾತಿ ಪ್ರಮಾಣವನ್ನು ಶೇ.32ರಿಂದ 51ಕ್ಕೆ ಏರಿಕೆ ಮಾಡುವಂತೆ ಕೆ.ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು, ಹಿಂದುಳಿದ ತಳ ಸಮುದಾಯಗಳೂ ಸೇರಿದಂತೆ ಇತರೇ ಹಿಂದುಳಿದ ಜಾತಿಗಳ (ಒಬಿಸಿ) ಪಟ್ಟಿಯಲ್ಲಿರುವ ವಿವಿಧ ಜಾತಿಗಳ ಮೀಸಲಾತಿಯನ್ನು ಮರು ವರ್ಗೀಕರಿಸಿ ಆಯಾ ಜಾತಿಯವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕೆಂದು ಶಿಫಾರಸಿನಲ್ಲಿ ಉಲ್ಲೇಖಿಸಿದೆ.

ಶುಕ್ರವಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೆಚ್.ಕಾಂತರಾಜ್ ನೇತೃತ್ವದ ಆಯೋಗ ನಡೆಸಿದ್ದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿ ಜನಗಣತಿ) ಆಧರಿಸಿ ಹೆಗ್ಡೆ ನೇತೃತ್ವದ ಆಯೋಗವು 2024ರ ಫೆಬ್ರವರಿಯಲ್ಲಿ ಸಲ್ಲಿಸಿದ್ದ '2015ರ ದತ್ತಾಂಶಗಳ ಅಧ್ಯಯನ ವರದಿ 2024'ರ ಶಿಫಾರಸು, ಮುಖ್ಯಾಂಶಗಳನ್ನು ಮಂಡಿಸಲಾಯಿತು.



ಕೆ.ಜಯಪ್ರಕಾಶ್ ಹೆಗ್ಡೆ

ಶಿಫಾರಸ್ಸಿನಲ್ಲಿ ಏನಿದೆ: ರಾಜ್ಯದಲ್ಲಿ ಒಟ್ಟು 6.35 ಕೋಟಿ ಜನಸಂಖ್ಯೆಯಿದ್ದು ಇದರಲ್ಲಿ 5.98 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಸದ್ಯ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಶೇ.32, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಶೇ.24.1 ಮೀಸಲಾತಿ ಇದೆ. ಈಗ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಶೇ.51ಕ್ಕೆ ಏರಿಕೆ ಮಾಡಬೇಕು.

ಮುಸ್ಲಿಂ ಸಮುದಾಯದವರ ಮೀಸಲಾತಿ ಪ್ರಮಾಣ ಈಗಿರುವ ಶೇ.4ರಿಂದ ಶೇ.8ಕ್ಕೆ ಏರಿಕೆ ಮಾಡಬೇಕು. ಮುಸ್ಲಿಂ ಸಮುದಾಯದ ಜನಸಂಖ್ಯೆ 75.27 ಲಕ್ಷದಷ್ಟಿದೆ. ಪರಿಶಿಷ್ಟ ಜಾತಿ ಬಳಿಕ ಮುಸ್ಲಿಂ ಸಮುದಾಯದವರ ಸಂಖ್ಯೆ ಹೆಚ್ಚಿರುವ ಕಾರಣ ಈ ಮೀಸಲಾತಿ ಕಲ್ಪಿಸಬೇಕು.

'3 ಬಿ' ಪಟ್ಟಿಯಲ್ಲಿರುವ ಲಿಂಗಾಯತ ಹಾಗೂ ಅದರ ಉಪ ಜಾತಿಗಳ ಒಟ್ಟು ಜನಸಂಖ್ಯೆ 81 ಲಕ್ಷ ಇದೆ. ಅದರಲ್ಲಿ ಲಿಂಗಾಯತರ ಸಂಖ್ಯೆ 66 ಲಕ್ಷದಷ್ಟಿದೆ. ಸದ್ಯ ಮೀಸಲಾತಿ ಪ್ರಮಾಣ ಶೇ.5ರಷ್ಟಿದೆ. ಜನಸಂಖ್ಯೆಗೆ ಅನುಗುಣವಾಗಿ ಶೇ.8ಕ್ಕೆ ಏರಿಸಬೇಕು. '3 ಎ' ಪಟ್ಟಿಯಲ್ಲಿರುವ ಒಕ್ಕಲಿಗ ಮತ್ತು ಅದರ ಉಪ ಜಾತಿಗಳ ಒಟ್ಟು ಜನಸಂಖ್ಯೆ 72 ಲಕ್ಷದಷ್ಟಿದೆ. ಒಕ್ಕಲಿಗರು 61.50 ಲಕ್ಷದಷ್ಟಿದ್ದು, ಒಟ್ಟು ಮೀಸಲಾತಿ ಶೇ.4ರಷ್ಟಿದೆ. ಅದನ್ನು ಶೇ.7ಕ್ಕೆ ಹೆಚ್ಚಿಸಬೇಕು. ಎಸ್‌ಸಿ, ಎಸ್‌ಟಿ ಒಟ್ಟಾರೆ ಜನಸಂಖ್ಯೆ 1.60 ಕೋಟಿಗೂ ಅಧಿಕ ಇದ್ದು ಸದ್ಯ ಪರಿಶಿಷ್ಟ ಜಾತಿಗೆ ಶೇ.17.15, ಪರಿಶಿಷ್ಟ ಪಂಗಡಕ್ಕೆ ■6ನೇ ಪುಟಕ್ಕೆ

ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅರಿಯಲು 158.47 ಕೋಟಿ ರೂ. ವೆಚ್ಚದಲ್ಲಿ ಹೆಚ್.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ಸಮೀಕ್ಷೆ ನಡೆಸಿತ್ತು. ಈ ಆಯೋಗದ ಅವಧಿ ಮುಕ್ತಾಯದ ಸಂದರ್ಭದಲ್ಲಿ ವರದಿಯನ್ನು ಅಧಿಕೃತವಾಗಿ ಸರ್ಕಾರಕ್ಕೆ ಸಲ್ಲಿಸಿರಲಿಲ್ಲ. ಕಳೆದ ವರ್ಷ ಕೆ.ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಈಗಿನ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ವಿವಿಧ ವಿಷಯಕ್ಕೆ ಸಂಬಂಧಿಸಿದ ಟಿಪ್ಪಣಿಗಳೊಂದಿಗೆ 2015ರ ಸಮೀಕ್ಷಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲಿಸಿತ್ತು.

ಶಿಫಾರಸಿನಲ್ಲಿರುವ ಮೀಸಲಾತಿ ಪ್ರಮಾಣ

ಪ್ರವರ್ಗ 1ಎ– 35 ಲಕ್ಷ ಜನಸಂಖ್ಯೆ ಶೇ.6% ಮೀಸಲಾತಿ (ಹಾಲಿ ಶೇ.4)
ಪ್ರವರ್ಗ 1ಬಿ – 73.94 ಲಕ್ಷ ಜನಸಂಖ್ಯೆ ಶೇ.12 ಮೀಸಲಾತಿ
2ಎ – 77.78 ಲಕ್ಷ ಜನಸಂಖ್ಯೆ ಶೇ.10 ಮೀಸಲಾತಿ (ಶೇ.15)
2ಬಿ – 75.27 ಲಕ್ಷ ಜನಸಂಖ್ಯೆ ಶೇ.8 ಮೀಸಲಾತಿ (ಶೇ.4)
3ಎ – 72 ಲಕ್ಷ ಜನಸಂಖ್ಯೆ ಶೇ.7 ಮೀಸಲಾತಿ (ಶೇ.4)
3ಬಿ – 81 ಲಕ್ಷ ಜನಸಂಖ್ಯೆ ಶೇ.8 ಮೀಸಲಾತಿ (ಶೇ.5)


ಜಾತಿ ಗಣತಿ ವರದಿಗೆ ಒಕ್ಕಲಿಗ, ಲಿಂಗಾಯತ ಸಮುದಾಯ ವಿರೋಧ

ಬೆಂಗಳೂರು: ಏಪ್ರಿಲ್ 17ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಕುರಿತು ಚರ್ಚೆ ನಡೆಯುತ್ತಿದೆ. ಹಲವು ಸಮುದಾಯಗಳು ತಮ್ಮ ಸಹಮತ ವ್ಯಕ್ತಪಡಿಸಿದರೆ, ಇನ್ನೂ ಹಲವು ಸಮುದಾಯಗಳು ಅದನ್ನು ವಿರೋಧಿಸಿದ್ದು, ಹೊಸದಾಗಿ ಸಮೀಕ್ಷೆ ನಡೆಸುವಂತೆ ಕೋರಿವೆ. ಜಾತಿಗಣತಿ ವರದಿ ದೋಷಪೂರಿತವಾಗಿದೆ ಎಂದು ಕರ್ನಾಟಕ ರಾಜ್ಯ ಒಕ್ಕಲಿಗ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ ತಿಳಿಸಿದ್ದಾರೆ. ಈ ಸಮೀಕ್ಷಾ ವರದಿಗೆ ಯಾವುದೇ ಆಧಾರವಿಲ್ಲ. ಇದು ಸಂಪೂರ್ಣ ದೋಷಪೂರಿತವಾಗಿದೆ. ■6ನೇ ಪುಟಕ್ಕೆ



ಮೈಸೂರು ಮಿತ್ರ ಭಾನುವಾರ 13 ಏಪ್ರಿಲ್ 2025

ದೆಹಲಿಯಲ್ಲಿ ಧೂಳಿನ ಬಿರುಗಾಳಿ: ನೂರಾರು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ



ನವದೆಹಲಿ: ಶುಕ್ರವಾರ ಸಂಜೆ ರಾಷ್ಟ್ರೀಯ ರಾಜಧಾನಿ ದೆಹಲಿಯ ಕೆಲವು ಭಾಗಗಳಲ್ಲಿ ಬೀಸಿದ ತೀವ್ರ ಧೂಳಿನ ಬಿರುಗಾಳಿಯಿಂದಾಗಿ ಇಂದಿರಾ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಕಾರ್ಯಾಚರಣೆ ಬಹುತೇಕ ಸ್ಥಗಿತಗೊಂಡ ಘಟನೆ ನಡೆಯಿತು.

ತೀವ್ರ ಧೂಳಿನ ಬಿರುಗಾಳಿಯಿಂದಾಗಿ ನೂರಾರು ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ಗಂಟೆಗಟ್ಟಲೆ ಸಿಲುಕಿಕೊಂಡಿದ್ದು, ನೂರಾರು ಜನರು ಸಮಸ್ಯೆ ಎದುರಿಸಿದರು.

ವಿಮಾನ ನಿಲ್ದಾಣದ ಮೂಲಗಳ ಪ್ರಕಾರ, ಶುಕ್ರವಾರ ಸಂಜೆಯಿಂದ ಶನಿವಾರ ಬೆಳಿಗ್ಗೆವರೆಗೆ, ಇಂದಿರಾ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಾರ್ಯನಿರ್ವಹಿಸುತ್ತಿದ್ದ 50ಕ್ಕೂ ಹೆಚ್ಚು ದೇಶೀಯ ವಿಮಾನಗಳು ವಿಳಂಬವಾಗಿವೆ, ಸುಮಾರು 25 ವಿಮಾನಗಳನ್ನು ಬೇರೆಡೆಗೆ ತಿರುಗಿಸಲಾಗಿದೆ ಮತ್ತು ಧೂಳಿನ ಬಿರುಗಾಳಿಯಿಂದಾಗಿ ಏಳು ವಿಮಾನಗಳನ್ನು ರದ್ದುಗೊಳಿಸಲಾಗಿದೆ.

ಈ ಬಗ್ಗೆ ಮಾತನಾಡಿರುವ ಅಧಿಕಾರಿಯೊಬ್ಬರು, ಧೂಳಿನ ಬಿರುಗಾಳಿಯ ನಂತರ, ಅನೇಕ ವಿಮಾನಗಳನ್ನು ಬೇರೆಡೆಗೆ ತಿರುಗಿಸಲಾಯಿತು ಮತ್ತು ರದ್ದುಗೊಳಿಸಲಾಯಿತು, ಇದರಿಂದಾಗಿ ದೆಹಲಿ ವಿಮಾನ ನಿಲ್ದಾಣದಲ್ಲಿ ತಮ್ಮ ವಿಮಾನಗಳಿಗಾಗಿ ಕಾಯುತ್ತಿದ್ದ ಪ್ರಯಾಣಿಕರಿಗೆ ಅನಾನುಕೂಲತೆಯನ್ನು ಉಂಟು ಮಾಡಿತು. ಬೇರೆಡೆಗೆ ತಿರುಗಿಸಲಾದ ವಿಮಾನವು ದೆಹಲಿ ತಲುಪಲು ಸಮಯ ತೆಗೆದುಕೊಂಡಿತು ಮತ್ತು ವಿಮಾನ ನಿಲ್ದಾಣದಲ್ಲಿ ಜನದಟ್ಟಣೆಗೆ ಕಾರಣವಾಯಿತು ಎಂದು ತಿಳಿಸಿದ್ದಾರೆ

ಇಂದು ಶ್ರೀ ಸೀತಾರಾಮ ಕಲ್ಯಾಣೋತ್ಸವ

ಮೈಸೂರು, ಏ.12(ಎಸ್‌ಬಿಡಿ)– ಮೈಸೂರು ಕುಂಚಿಟಿಗರ ಸಂಘದ ವತಿಯಿಂದ ಪ್ರಥಮ ಬಾರಿಗೆ ಶ್ರೀ ಸೀತಾರಾಮ ಕಲ್ಯಾಣೋತ್ಸವವನ್ನು ಆಯೋಜಿಸಲಾಗಿದೆ.

ನಗರದ ಹಳೇ ಸಂತೆಪೇಟೆಯಲ್ಲಿರುವ ಸಂಘದ ಶ್ರೀ ಸೀತಾರಾಮ ಮಂದಿರದಲ್ಲಿ ಇಂದು ಸ್ವಾಮಿಗೆ ಮಂಗಳ ಸ್ನಾನ, ಅವಬೃಥ ಸ್ನಾನ, ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿದ್ದು, ಭಾನುವಾರ ಬೆಳಗ್ಗೆ 8.30ಕ್ಕೆ ಕಾಶಿಯಾತ್ರೆ, ಬೆಳಗ್ಗೆ 11ಕ್ಕೆ ಧಾರೆ, ಮಧ್ಯಾಹ್ನ 12ಕ್ಕೆ ಮಾಂಗಲ್ಯಧಾರಣೆ, ನಂತರ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ತೀರ್ಥಪ್ರಸಾದ ವಿನಿಯೋಗ, ಸಂಜೆ 5ಕ್ಕೆ ರಾಜಬೀದಿಯಲ್ಲಿ ಉತ್ಸವ ನಡೆಯಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಮಹಿಳೆಯರ ಮೇಲಿನ ದೌರ್ಜನ್ಯ ಸಂಬಂಧ ದೂರು ಕೊಟ್ಟರೆ ಹೆಸರು ಗೌಪ್ಯವಾಗಿಡಲಾಗುವುದು

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಭರವಸೆ

ಮೈಸೂರು, ಏ.12(ಬಿಎಲ್‌ಯು)– ಎಲ್ಲೇ ಮಹಿಳಾ ದೌರ್ಜನ್ಯ ನಡೆದರೂ ತಕ್ಷಣವೇ ಮಹಿಳಾ ಸಹಾಯವಾಣಿಗೆ ದೂರು ನೀಡಬೇಕು. ದೂರವಾಣಿ ಕರೆ ಮಾಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಭರವಸೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ಇಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ದೌರ್ಜನ್ಯದ ಬಗ್ಗೆ ಮಾಹಿತಿ ಕೊಟ್ಟಾಗ ತಮ್ಮ ಹೆಸರು ಮುನ್ನೆಲೆಗೆ ಬಂದು ತೊಂದರೆ ಆಗುತ್ತದೆ ಎಂಬ ಭಯ ಬೇಡ ಎಂದು ಧೈರ್ಯ ಹೇಳಿದರು.

ಮಹಿಳೆಯರು ಕೌಟುಂಬಿಕ ದೌರ್ಜನ್ಯ ಸೇರಿದಂತೆ ಪ್ರತಿ ಹೆಜ್ಜೆಯಲ್ಲಿ ಹುಷಾರಾಗಿರಬೇಕು. ಇನ್ಸ್ಟಾಗ್ರಾಂ, ಫೇಸ್ ಬುಕ್ ಸೇರಿದಂತೆ ಸೋಷಿಯಲ್ ಮೀಡಿಯಾ ಬಗ್ಗೆ ಎಚ್ಚರಿಕೆ ವಹಿಸಬೇಕು. ಡಾರ್ಕ್ ವೆಬ್ ಸೈಟ್ ಡೌನ್‌ಲೋಡ್ ಮಾಡಿಕೊಂಡು ಆ ಜಾಲಕ್ಕೆ ಸಿಲುಕಬಾರದು ಎಂದು ಡಾ.ನಾಗಲಕ್ಷ್ಮಿ ಸಲಹೆ ನೀಡಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪನಾಗ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ತಂದೆ ತಾಯಿ ಅನುಮತಿ ಪಡೆದು ಪ್ರೀತಿಸಿದ ಯುವಕನನ್ನು ಮದುವೆಯಾಗಿ. ಆದರೆ ತಂದೆ ತಾಯಿ ಕಣ್ತಪ್ಪಿಸಿ ಪ್ರೀತಿಸಿದ ಹುಡುಗನ ಜೊತೆ ಓಡಿ ಹೋಗಬೇಡಿ ಎಂದು ಕಿವಿಮಾತು ಹೇಳಿದರು.

ಯುವತಿಯರನ್ನು ಕಾಮದ ಕೂಪಕ್ಕೆ ತಳ್ಳುವ ಜಾಲದ ವಿರುದ್ಧ ಎಚ್ಚರಿಕೆ ವಹಿಸುವುದು ಅತ್ಯವಶ್ಯ. ಇಂತಹ ಜಾಲದ ವಿರುದ್ಧ ಸಾಮಾಜಿಕವಾಗಿ ಹೋರಾಟ ಮಾಡಬೇಕಿದೆ. ಇದರಿಂದ ಅಮಾಯಕ ಮಹಿಳೆಯರು ಜಾಲದ ಸುಳಿಗೆ ಸಿಲುಕುವುದನ್ನು ತಪ್ಪಿಸಬೇಕು. ಇಂತಹ ಜಾಲದ ವಿರುದ್ಧ ಹೋರಾಟ ಮಾಡುವ ಬಹಳಷ್ಟು ಸಂಘ ಸಂಸ್ಥೆಗಳಿದ್ದು, ಇವರ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಿದರೆ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಇತಿಶ್ರೀ ಹಾಡಬಹುದು ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮಕ್ಕಳು ತಮ್ಮ ಮೇಲೆ ದೌರ್ಜನ್ಯ ನಡೆದ ಸಂದರ್ಭದಲ್ಲಿ ಧೈರ್ಯದಿಂದ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಬೇಕು. ಪೊಲೀಸರು ನಮ್ಮ ರಕ್ಷಣೆಗೆ ಇದ್ದಾರೆ ಎಂಬ ವಿಶ್ವಾಸ ಇಟ್ಟುಕೊಂಡು ಕಾಮುಕರ ವಿರುದ್ಧ ಹೋರಾಟ ಮಾಡಬೇಕು ಎಂದು ಡಾ.ನಾಗಲಕ್ಷ್ಮಿ ಕಿವಿಮಾತು ಹೇಳಿದರು.

ಇದೇ ವೇಳೆ ಮಾತನಾಡಿದ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು, ಐಎಎಸ್ ಮಾತ್ರವಲ್ಲದೆ ಕಲೆ, ರಾಜಕೀಯ, ಕ್ರೀಡೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸೇವೆ ಮಾಡಲು ಅವಕಾಶವಿದ್ದು, ಮಹಿಳೆಯರು ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶಿಲ್ಪನಾಗ್, ಬಳ್ಳಾರಿ ಕಾರಾಗೃಹ ಅಧೀಕ್ಷಕಿ ಆರ್.ಲತಾ, ಕೆಎಎಸ್ ಅಧಿಕಾರಿ ಕೆ.ಎನ್.ಚೈತ್ರಾ, ಶಿಕ್ಷಣ ವಿಭಾಗದ ಎಸ್.ಸ್ಮಿತಾ, ಖೋ ಖೋ ವಿಶ್ವಕಪ್ ವಿಜೇತ ತಂಡದ ಆಟಗಾರ್ತಿ ಬಿ.ಚೈತ್ರ ಅವರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೊತೆಗೆ ಮಹಾರಾಣಿ ಕಲಾ ಕಾಲೇಜಿನ ಕ್ರೀಡಾ ಸಾಧಕಿಯರಾದ ಹರ್ಷಿತಾ ಎಚ್.ಎನ್., ಪುಷ್ಪಲತಾ, ಬಿಂದುಶ್ರೀ, ಪುಷ್ಪ ಅವರನ್ನು ಕೂಡ ಅಭಿನಂದಿಸಲಾಯಿತು.

ಕೊಳ್ಳೆಗಾಲ ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ಎಸ್.ದತ್ತೇಶ್ ಕುಮಾರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್.ಮಹದೇವ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಡಿ.ರವಿ, ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಬೆಂಗಳೂರಿನ ಆಯುರ್ವೇದ ವೈದ್ಯ ಡಾ.ಅಬ್ದುಲ್ ಖಾದರ್, ಮಹಾರಾಣಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಎಸ್.ರಾಜಶೇಖರಮೂರ್ತಿ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ

ರಘುನಾಥ್ ತಂಡದ ಜಿಲ್ಲಾ ಸ್ಥಾನದ ಅಧಿಕೃತ ಅಭ್ಯರ್ಥಿ ಆರ್.ಎಸ್.ಸತ್ಯನಾರಾಯಣ

ವಿಪ್ರ ಮುಖಂಡ ನವೀನ್ ಕುಮಾರ್ ಸ್ಪಷ್ಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಪ್ರ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿದರು.

ಮೈಸೂರು, ಏ.12(ಜಿಎ)–ಏ.13ರಂದು ನಡೆಯುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ರಘುನಾಥ್ ಹಾಗೂ ಅವರ ತಂಡದಿಂದ ಜಿಲ್ಲಾ ಪ್ರತಿನಿಧಿ ಸ್ಥಾನದ ಅಧಿಕೃತ ಅಭ್ಯರ್ಥಿ ಆರ್.ಎಸ್.ಸತ್ಯನಾರಾಯಣ ಸ್ಪರ್ಧಿಸುತ್ತಿದ್ದಾರೆ ಎಂದು ವಿಪ್ರ ಮುಖಂಡ ಎನ್.ಎಂ.ನವೀನ್ ಕುಮಾರ್ ಸ್ಪಷ್ಟೀಕರಣ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮದಲ್ಲಿ ಕೆಲವರನ್ನು ರಘುನಾಥ್ ಬೆಂಬಲಿತ ಅಭ್ಯರ್ಥಿಯೆಂದು ಅಪಪ್ರಚಾರ ಮಾಡುತ್ತಿದ್ದಾರೆ. ಅದಕ್ಕೆ ವಿಪ್ರಸಮುದಾಯದವರು ಕಿವಿಗೊಡದೆ ಮೈಸೂರಿನ ರಘುನಾಥ್ ಬೆಂಬಲಿತ ಅಧಿಕೃತ ಅಭ್ಯರ್ಥಿ ಆರ್.ಎಸ್.ಸತ್ಯನಾರಾಯಣ ಹಾಗೂ ಪ್ರತಿನಿಧಿ ಸ್ಥಾನದ ಅಭ್ಯರ್ಥಿ ಭಾಗ್ಯಶ್ರೀ ಭಟ್ ಬೆಂಬಲಿಸಿ ಎಂದರು.

ಮತದಾರರನ್ನು ದಿಕ್ಕು ತಪ್ಪಿಸಿ, ಮತ ಇಬ್ಭಾಗವಾಗುವಂತೆ ವಿರೋಧಿ ತಂಡ ಈ ರೀತಿ ವಿಷಯವನ್ನು ಅಪಪ್ರಚಾರ ಮಾಡುತ್ತಿದೆ. ಅದಕ್ಕೆ ಯಾರೂ ತಲೆಕೆಡಿಸಿಕೊಳ್ಳಬೇಡಿ ಎಂದ ಅವರು, ಮೈಸೂರಲ್ಲಿ 2 ಲಕ್ಷ ಮಂದಿ ಬ್ರಾಹ್ಮಣರಿದ್ದಾರೆ. ಆದರೆ, ಕೇವಲ 4100 ಮಂದಿ ಮತದಾರರಿದ್ದಾರೆ. ಈ ಹಿಂದಿನ ಆಡಳಿತ ಮಂಡಳಿ ಸಮಸ್ಯೆಯಿಂದ ಈ ರೀತಿಯಾಗಿದೆ. ಮುಂದೆ ಆಯ್ಕೆಗೊಳ್ಳುವ ತಂಡ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ಏಪ್ರಿಲ್ 13ರ ಭಾನುವಾರ ರಾಜ್ಯಾದ್ಯಂತ ಏಕಕಾಲಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ ನಡೆಯಲಿದ್ದು ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಭಗಿನಿ ಸೇವಾ ಸಮಾಜದಲ್ಲಿ ಮತದಾನ ಬೆಳಗ್ಗೆ 8ರಿಂದ ಸಂಜೆ 4ರವರೆಗೂ ನಡೆಯಲಿದೆ, ಬ್ರಾಹ್ಮಣ ಬಂಧುಗಳು ತಪ್ಪದೇ ಆಗಮಿಸಿ ಮತದಾನ ಮಾಡುವುದರ ಮೂಲಕ ಬ್ರಾಹ್ಮಣ ಮಹಾಸಭಾ ಸಂಘಟನೆಗೆ ಶಕ್ತಿ ತುಂಬಬೇಕಾಗಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರತಿನಿಧಿ ಸ್ಥಾನದ ಅಭ್ಯರ್ಥಿ ಆರ್.ಎಸ್.ಸತ್ಯನಾರಾಯಣ್, ಭಾಗ್ಯಶ್ರೀ ಭಟ್, ಹಿರಿಯ ವಿಪ್ರ ಮುಖಂಡರಾದ ಸಿ.ವಿ.ಪಾರ್ಥಸಾರಥಿ, ಎಸ್.ಬಿ.ವಾಸುದೇವ್ ಮೂರ್ತಿ, ನಾಗಚಂದ್ರ, ರಾಜಕುಮಾರ್, ಜಗದೀಶ್ ಉಪಸ್ಥಿತರಿದ್ದರು.

ಮೈಸೂರಿನ ಕೈಗಾರಿಕೆಗಳು ದ್ವಿ ತೆರಿಗೆ ನೀತಿಯಿಂದ ಮುಕ್ತ

- ವಿಶೇಷ ಹೂಡಿಕೆ ವಲಯದ ಘೋಷಣೆಯಿಂದ ಕೈಗಾರಿಕೋದ್ಯಮಿಗಳಿಗೆ ಅನುಕೂಲ
- ಆದರೀಗ ಮೂರು ತೆರಿಗೆಯಿಂದ ಪಾರು
- ಕೈಗಾರಿಕೋದ್ಯಮಿಗಳಿಗೆ 50 ರಷ್ಟು ತೆರಿಗೆ ಉಳಿತಾಯ



ಸೆಲ್ವ ಕುಮಾರ್



ಸುರೇಶ್ ಕುಮಾರ್

ಮೈಸೂರು, ಏ.12(ಬಿಎಲ್‌ಯು)– ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ ಸೇರಿದಂತೆ ಮೈಸೂರಿನ ಹಲವು ಕೈಗಾರಿಕಾ ಪ್ರದೇಶಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವಿಶೇಷ ಹೂಡಿಕೆ ವಲಯವೆಂದು ಘೋಷಣೆ ಮಾಡಿದೆ. ಇದರಿಂದ ಕೈಗಾರಿಕೋದ್ಯಮಿ ಗಳು ದ್ವಿ ತೆರಿಗೆ ನೀತಿಯಿಂದ ಮುಕ್ತರಾಗಿದ್ದು, ತೆರಿಗೆ ಪಾವತಿಯಲ್ಲಿ ಭಾರೀ ಉಳಿತಾಯವಾಗಲಿದೆ.

ಮೈಸೂರಿನ ಕೈಗಾರಿಕೋದ್ಯಮಿಗಳು ಈ ಮೊದಲು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ), ಮೈಸೂರು ನಗರ ಪಾಲಿಕೆ ಹಾಗೂ ನಗರಸಭೆಗೆ ತೆರಿಗೆ ಪಾವತಿ ಮಾಡಬೇಕಿತ್ತು. ಕಳೆದ ಎರಡು ವರ್ಷದ ಅವಧಿಯಲ್ಲಿ ಮೈಸೂರಿನ ಕೈಗಾರಿಕಾ ವಲಯದಿಂದ 60 ಕೋಟಿ ತೆರಿಗೆ ಸಂಗ್ರಹ ಮಾಡಲಾಗಿತ್ತು. ಆದರೆ ತೆರಿಗೆ ಪಡೆದವರು ಕೈಗಾರಿಕಾ ಪ್ರದೇಶದಲ್ಲಿ ರಸ್ತೆ, ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಯಾವುದೇ ಮೂಲಭೂತ ಸೌಕರ್ಯ ಕಲ್ಪಿಸಿಲ್ಲ.

ಈ ಹಿನ್ನೆಲೆ ಏಕ ತೆರಿಗೆ ಸಂಗ್ರಹ ನೀತಿ ಜಾರಿಗೊಳಿಸಲು ವಿಶೇಷ ಹೂಡಿಕೆ ವಲಯವೆಂದು ಘೋಷಣೆ ಮಾಡಬೇಕೆಂದು ಕೈಗಾರಿಕೋದ್ಯಮಿಗಳು ಹಲವು ವರ್ಷಗಳಿಂದ ಸರ್ಕಾರಕ್ಕೆ ಅನೇಕ ಬಾರಿ ಮನವಿ ಪತ್ರ ಸಲ್ಲಿಸಿದ್ದರು. ಆದರೆ ಸರ್ಕಾರ ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸುತ್ತಿರಲಿಲ್ಲ.

ಆದರೆ ಈಗ ಮೈಸೂರಿನ ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕಡಕೊಳ, ಹಿಮ್ಮಾವು, ತಾಂಡ್ಯ ಸೇರಿದಂತೆ ಇತರೆ ಕೈಗಾರಿಕಾ ಪ್ರದೇಶಗಳನ್ನು ವಿಶೇಷ ಹೂಡಿಕೆ ವಲಯವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಘೋಷಣೆ ಮಾಡಿದೆ.

ಬೃಹತ್, ಮೆಗಾ, ಸೂಪರ್ ಮೆಗಾ ಗಾತ್ರದ ಹೂಡಿಕೆ ಪ್ರದೇಶಗಳು ಹಾಗೂ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು, ನಿಯಂತ್ರಿಸಲು ಹಾಗೂ ನಿರ್ವಹಿಸಲು ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ ಜಾರಿ ಮಾಡಲಾಗಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು ನಿರ್ವಹಿಸಲು ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ ಎಂದು ಆದೇಶಿಸಿದೆ ಎಂದು ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹೇಶ್ ತಿಳಿಸಿದ್ದಾರೆ.

ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ ಸ್ಥಳೀಯ ಆಡಳಿತವಾಗಿ ಕಾರ್ಯನಿರ್ವಹಿಸಲಿದೆ. ಇದು ತೆರಿಗೆಗಳ ಮೌಲ್ಯಮಾಪನ, ತೆರಿಗೆ ನಿಗದಿ ಮತ್ತು ವಸೂಲಿ ನಿರ್ಧಾರ ಸೇರಿದಂತೆ ಇತರೆ ಕ್ರಮಗಳನ್ನು ಕೈಗೊಳ್ಳುತ್ತದೆ. ಈ ಮೂಲಕ ವಿಶೇಷ ಹೂಡಿಕೆ ಪ್ರದೇಶ ಗಳಲ್ಲಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮಾತ್ರ ಅಧಿಕಾರ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಈ ಬಗ್ಗೆ ನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ಮಹೇಶ್ ತಿಳಿಸಿದ್ದಾರೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಈ ಆದೇಶದಿಂದ ಮೈಸೂರು ಜಿಲ್ಲೆ ಸೇರಿದಂತೆ ಕರ್ನಾಟಕ 42,704 ಎಕರೆ ಪ್ರದೇಶದಲ್ಲಿರುವ ಕೈಗಾರಿಕೆಗಳಿಗೆ ಪ್ರಯೋಜನವಾಗಲಿದೆ.

30 ವರ್ಷದ ಹೋರಾಟದ ಫಲ

ವಿಶೇಷ ಹೂಡಿಕೆ ವಲಯವೆಂದು ಘೋಷಣೆ ಮಾಡಿ ದ್ವಿ ತೆರಿಗೆ ರದ್ದು ಮಾಡುವಂತೆ ಕಳೆದ 30 ವರ್ಷಗಳಿಂದ ಕೈಗಾರಿಕೋದ್ಯಮಿಗಳು ನಡೆಸಿದ ಹೋರಾಟಕ್ಕೆ ಇಂದು ಫಲ ಸಿಕ್ಕಿದೆ. ಈ ಮೊದಲು ಕೆಐಎಡಿಬಿ, ನಗರ ಪಾಲಿಕೆ ಹಾಗೂ ನಗರಸಭೆಗೆ ತೆರಿಗೆ ಪಾವತಿ ಮಾಡಲಾಗುತ್ತಿತ್ತು. ಆದರೆ ಈಗ ವಿಶೇಷ ಹೂಡಿಕೆ ವಲಯ ಘೋಷಣೆಯಿಂದ ಕೈಗಾರಿಕೋದ್ಯಮಿಗಳಿಗೆ ಶೇಕಡ 50 ರಷ್ಟು ತೆರಿಗೆ ಉಳಿತಾಯವಾಗಲಿದ್ದು, ಕೈಗಾರಿಕಾ ಬೆಳವಣಿಗೆಗೆ ಪುಷ್ಠಿ ನೀಡುತ್ತದೆ.

ಇದಲ್ಲದೆ ಕೈಗಾರಿಕಾ ಪ್ರದೇಶಗಳಲ್ಲಿ ರಸ್ತೆ, ಬೀದಿ ದೀಪ, ಕುಡಿಯುವ ನೀರು ಸೇರಿದಂತೆ ಹಲವು ಸೌಲಭ್ಯ ದೊರೆಯಲಿದೆ. ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದಲ್ಲಿ ಇಬ್ಬರು ಕೈಗಾರಿಕೋದ್ಯಮಿಗಳನ್ನು ಸರ್ಕಾರ ನಾಮ ನಿರ್ದೇಶನ ಮಾಡಲಿದೆ. ಪ್ರಾಧಿಕಾರ ತೀರ್ಮಾನ ಮಾಡುವ ಸಂದರ್ಭದಲ್ಲಿ ಇಬ್ಬರು ಕೈಗಾರಿಕೋದ್ಯಮಿಗಳು ನಮ್ಮ ಪರವಾಗಿ ಧ್ವನಿ ಎತ್ತುತ್ತಾರೆ. ಈ ಮೂಲಕ ಕೈಗಾರಿಕಾ ನೀತಿಗಳಲ್ಲಿ ಏಕಮುಖ ನಿರ್ಧಾರ ಆಗುವುದು ತಪ್ಪುತ್ತದೆ.

- ಸುರೇಶ್‌ಕುಮಾರ್ ಜೈನ್,
ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕೆಗಳ ಸಂಘ

ಪಶ್ಚಿಮ ಬಂಗಾಳದಲ್ಲಿ ವಕ್ಫ್ ಪ್ರತಿಭಟನೆ ವೇಳೆ ಹಿಂಸಾಚಾರ; ಮೂವರು ಸಾವು, 118 ಮಂದಿ ಬಂಧನ



ಕೊಲ್ಕೊತಾ, ಏ.12– ಪಶ್ಚಿಮ ಬಂಗಾಳದ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ ಪರಿಣಾಮ ಮೂವರು ಸಾವನ್ನಪ್ಪಿದ್ದಾರೆ ಎಂದು ಐಪಿಎಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಹಿಂಸಾಚಾರ ಪೀಡಿತ ಸಂಸರ್‌ಗಂಜ್ ಪ್ರದೇಶದ ಜಾಫ್ರಾಬಾದ್‌ನಲ್ಲಿರುವ ತಮ್ಮ ಮನೆಯೊಳಗೆ ಇದ್ದಾಗ ತಂದೆ ಹಾಗೂ ಮಗನಿಗೆ ಅನೇಕ ಬಾರಿ ಚಾಕುವಿನಿಂದ ಇರಿದಿರುವುದು ಪತ್ತೆಯಾಗಿದೆ. ಮನೆಯೊಳಗೆ ಬಿದ್ದಿದ್ದ ಅವರಿಬ್ಬರನ್ನೂ ಸಮೀಪದ ಆಸ್ಪತ್ರೆಗೆ ಕರೆತಂದಾಗ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ದುಷ್ಕರ್ಮಿಗಳು ತಮ್ಮ ಮನೆಯನ್ನು ಲೂಟಿ ಮಾಡಿದ್ದಾರೆ. ಹೊರಡುವ ಮೊದಲು ಚಾಕುವಿನಿಂದ ಇಬ್ಬರಿಗೆ ಇರಿದಿದ್ದಾರೆ ಎಂದು ಅವರ ಕುಟುಂಬ ಆರೋಪಿಸಿದೆ.

ಮೂರನೇ ವ್ಯಕ್ತಿಯನ್ನು 21 ವರ್ಷದ ಇಜಾಜ್ ಮೊಮಿನ್ ಎಂದು ಗುರುತಿಸಲಾಗಿದೆ. ಶುಕ್ರವಾರ ಸುಟಿಯ ಸಜೂರ್ ಮೋರ್‌ನಲ್ಲಿ ನಡೆದ ಘರ್ಷಣೆಯಲ್ಲಿ ಗುಂಡೇಟಿನಿಂದ ಗಾಯಗೊಂಡಿದ್ದ ಆತನನ್ನು ಮುರ್ಷಿದಾಬಾದ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಆತ ಶನಿವಾರ ಸಂಜೆ ಮೃತಪಟ್ಟಿರುವುದಾಗಿ ಅಧಿಕಾರಿ ತಿಳಿಸಿದ್ದಾರೆ.

ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿಸಿ ಜಿಲ್ಲೆಯ ಸುಟಿ ಮತ್ತು ಸಂಸರ್‌ಗಂಜ್ ಪ್ರದೇಶದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾಗ ದೊಡ್ಡ ಪ್ರಮಾಣದ ಹಿಂಸಾಚಾರ ವರದಿಯಾಗಿದೆ. ಪ್ರತಿಭಟನೆಗೆ ಸಂಬಂಧಿಸಿದಂತೆ ಇದುವರೆಗೆ 118 ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂದು ಮೈಸೂರಲ್ಲಿ ಮನೆ ಮಾದೇಗೌಡರಿಗೆ 'ಉಘೇ ಮಾದೇಗೌಡ್ರು' ಅಭಿನಂದನಾ ಸಮಾರಂಭ


ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಸಿಎಂ ಸಿದ್ದರಾಮಯ್ಯ, ವಿವಿಧ ಮಠದ ಶ್ರೀಗಳು, ಗಣ್ಯರು ಭಾಗಿ

- ಮಾದೇಗೌಡ ದಂಪತಿಗೆ ಸಾರೋಟು ಮೆರವಣಿಗೆ
- ಅಭಿನಂದನಾ ಗ್ರಂಥ ಬಿಡುಗಡೆ

ಮೈಸೂರು,ಏ.12(ಜಿಎ)–ವಿಧಾನಪರಿಷತ್ ಮಾಜಿ ಸದಸ್ಯ ಮನೆ ಡಿ.ಮಾದೇಗೌಡರ ಅಭಿನಂದನಾ ಗ್ರಂಥ ಲೋಕಾರ್ಪಣೆ ಮತ್ತು ಉಘೇ ಮಾದೇಗೌಡ್ರು ಅಭಿನಂದನಾ ಸಮಾರಂಭವನ್ನು ಏ.13ರಂದು ಸಂಜೆ 4 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಿ.ಮಾದೇಗೌಡ ಅಭಿನಂದನಾ ಸಮಿತಿ ಅಧ್ಯಕ್ಷ ಲಯನ್ ಎಂ.ವಿ.ದೇವಿಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಯೋಗನರ ಸಿಂಹ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಡಾ.ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಸಮಾರಂಭ ಉದ್ಘಾಟಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಸಂಸದ ಯದುವೀರ್ ಒಡೆಯರ್, ಶಾಸಕ ಡಾ.ಅಶ್ವತ್ಥ್ ನಾರಾಯಣ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಭಿನಂದನಾ ಗ್ರಂಥದ ಪ್ರಧಾನ ಸಂಪಾದಕ ಪ್ರೊ.ಜಯಪ್ರಕಾಶಗೌಡ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶಗೌಡ, ಟಿ.ಎಸ್.ಶ್ರೀವತ್ಸ ಮುಂತಾದವರು ಭಾಗವಹಿಸಲಿದ್ದಾರೆ. ಸಿಐಟಿಬಿ ಅಧ್ಯಕ್ಷರಾಗಿ ಡಿ.ಮಾದೇಗೌಡರು ತಮ್ಮ ಅವಧಿಯಲ್ಲಿ 28 ಸಾವಿರ ನಿವೇಶನ ಹಂಚಿಕೆ ಮಾಡಿದ್ದಾರೆ. ಮನೆ ಮನೆಗೇ ನಿವೇಶನ ಹಕ್ಕುಪತ್ರ ವಿತರಿಸಿದ್ದಾರೆ. ಯೂತ್ ಹಾಸ್ಟೆಲ್, ಲಕ್ಷ್ಮೀಕಾಂತ ದೇವಸ್ಥಾನ ಜೀರ್ಣೋದ್ಧಾರ, ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆ, ನಿರ್ಮಲ ನಗರ ಯೋಜನೆಯಲ್ಲಿ ಡಿ.ಮಾದೇಗೌಡರ ಪರಿಶ್ರಮ ಇದೆ ಎಂದರು.



ಡಿ.ಮಾದೇಗೌಡರ ಕಿರು ಸಂದರ್ಶನ

ಪುಟ–9

ಸಾರೋಟು ಮೆರವಣಿಗೆ: ಡಿ.ಮಾದೇಗೌಡ ದಂಪತಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಮೂಲಕ ಕಲಾಮಂದಿರದವರೆಗೆ ಪೂರ್ಣಕುಂಭ, ಕಲಾತಂಡಗಳ ಅದ್ದೂರಿ ಮೆರವಣಿಗೆ ಆಯೋಜಿಸಲಾಗಿದೆ. ಬೆಳ್ಳಿರಥ, ಎತ್ತಿನಬಂಡಿಗಳು ಭಾಗವಹಿಸಲಿವೆ. ಸಮಾರಂಭದಲ್ಲಿ 2 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಪ್ರೀತಂಗೌಡ, ಮೈಸೂರು, ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿಕುಮಾರ್, ನಮ್ಮೂರು ನಮ್ಮೋರು ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ, ಮುಖಂಡರಾದ ಸಣ್ಣಸ್ವಾಮಿಗೌಡ, ಬೆಳಗೊಳ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಐದನೇ ಪುಟದಿಂದ

ಮಂಡ್ಯದಲ್ಲಿ ಇದೇ ಮೊದಲು ಅದ್ದೂರಿ ಶೋಭಾ ಯಾತ್ರೆ



ಹಿಂದೂಪರ ಕಾರ್ಯಕರ್ತರನ್ನು ಬೆಂಬಲಿಸಿದ್ದರು. ಇದೀಗ ಕೆರಗೋಡಿನಲ್ಲಿ ಮತ್ತೆ ಹನುಮ ಧ್ವಜ ಹಾರಿಸಬೇಕೆಂಬುದು ಮುಖಂಡರ ಒಕ್ಕೊರಲಿನ ಒತ್ತಾಯವಾಗಿದೆ.

ಬಿಗಿ ಪೊಲೀಸ್ ಬಂದೋಬಸ್ತ್: ಮಂಡ್ಯ ನಗರದಲ್ಲಿ ಶೋಭಾ ಯಾತ್ರೆ ನಡೆದ ಹಿನ್ನೆಲೆಯಲ್ಲಿ ನಗರದಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ಆಯಾಕಟ್ಟಿನ ಪ್ರದೇಶದಲ್ಲಿ ನೂರಾರು ಪೊಲೀಸರನ್ನು ನಿಯೋಜನೆ ಮಾಡಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಿದ್ದರು. ಅದರಲ್ಲೂ ಯಾತ್ರೆ ಸಾಗುವ ರಸ್ತೆಯಲ್ಲಿ ಸಿಗುವ ಪ್ರಾರ್ಥನಾ ಮಂದಿರ, ಅಂಗಡಿ, ಮುಗ್ಗಟ್ಟುಗಳಿಗೆ ಬಿಗಿ ಭದ್ರತೆ ಒದಗಿಸಲಾಗಿತ್ತು.

ಕಳೆದ ವರ್ಷ ನಾಗಮಂಗಲದಲ್ಲಿ ಗಣಪತಿ ವಿಸರ್ಜನೆ ವೇಳೆ ನಡೆದಿದ್ದ ಹಿಂಸಾಚಾರದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸೂಕ್ತ ಕ್ರಮಗಳನ್ನು ವಹಿಸಿ, ಎಲ್ಲೂ ಅಹಿತಕರ ಘಟನೆ ಸಂಭವಿಸದಂತೆ ಕ್ರಮ ಕೈಗೊಳ್ಳಲಾಗಿತ್ತು.

ಮಂಡ್ಯ ವಿವಿ ಆವರಣದಲ್ಲಿ ಸಮಾವೇಶ: ಯಾತ್ರೆ ಮುಗಿದ ಬಳಿಕ ಮಂಡ್ಯ ನಗರ ವಿವಿ ಆವರಣದಲ್ಲಿ ಭಜರಂಗದಳ, ದುರ್ಗಾವಾಹಿನಿ, ಶ್ರೀರಾಮಂಜನೇಯ ಮಹೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಬೃಹತ್ ವೇದಿಕೆ ಕಾರ್ಯಕ್ರಮ ನಡೆಯಿತು. ವಿಶ್ವ ಒಕ್ಕಲಿಗರ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದ ಸ್ವಾಮೀಜಿ, ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ, ವಿಹೆಚ್‌ಪಿ ಮುಖಂಡ ಚಿಕ್ಕಬಳ್ಳಿ ಬಾಲು ಭಾಗವಹಿಸಿದ್ದರೆ, ವಾಗ್ಮಿ ಚಕ್ರವರ್ತಿ ಸೂಲಿಬೆಲೆ ದಿಕ್ಸೂಚಿ ಭಾಷಣ ಮಾಡಿದರು.

ಜಯಪ್ರಕಾಶ್ ಹೆಗ್ಡೆ ನೇತೃತ್ವ ಆಯೋಗ ಶಿಫಾರಸು

ಶೇ.6.95 ಮೀಸಲಾತಿ ಇದೆ. ಈ ಮೀಸಲಾತಿ ಯಥಾಸ್ಥಿತಿಯಲ್ಲಿ ಮುಂದುವರಿಯಬೇಕು. ಪ್ರವರ್ಗ 1ಕ್ಕೆ ಇದ್ದ ಮೀಸಲಾತಿಯನ್ನು ಶೇ.4ರಿಂದ 6ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ. 2 ಎಗೆ ಶೇ.15ರಷ್ಟಿದ್ದ ಮೀಸಲಾತಿಯನ್ನು '1 ಬಿ' ಹಾಗೂ '2 ಎ'ಗೆ ಮರು ಹಂಚಿಕೆ ಮಾಡಲಾಗಿದೆ. ಇದರಿಂದಾಗಿ '1 ಬಿ'ಗೆ ಶೇ.12 ಹಾಗೂ '2 ಎ'ಗೆ ಶೇ.10ರಷ್ಟು ಹಂಚಿಕೆ ಮಾಡಲಾಗಿದೆ. ಇದರಿಂದಾಗಿ ಹಿಂದುಳಿದ ಜಾತಿಯವರಿಗೆ (2ಎ)ಇದ್ದ ಶೇ.15 ಮೀಸಲಾತಿ ಶೇ.22ರಷ್ಟು ಏರಿಕೆಯಾಗಿದೆ.

ರಾಜ್ಯದಲ್ಲಿ ಸದ್ಯ ಹಿಂದುಳಿದ ವರ್ಗಗಳಿಗೆ ಈವರೆಗೆ ಶೇ.32 ಹಾಗೂ ಪರಿಶಿಷ್ಟ ಜಾತಿ–ಪಂಗಡದವರಿಗೆ ಶೇ.24.1ರಷ್ಟು ಮೀಸಲಾತಿ ಇದೆ. ಹಿಂದುಳಿದವರ ಮೀಸಲಾತಿಯನ್ನು ಶೇ.51ಕ್ಕೆ ಏರಿಸುವಂತೆ ಆಯೋಗ ತನ್ನ ಶಿಫಾರಸಿನಲ್ಲಿ ಹೇಳಿದೆ. ಈಗಿರುವ ಕಾನೂನಿನಂತೆ ಒಟ್ಟು ಮೀಸಲಾತಿ ಪ್ರಮಾಣ ಶೇ.50 ಮೀರುವಂತಿಲ್ಲ. ಈ ಶಿಫಾರಸಿನ ಅನ್ವಯ ಮೀಸಲಾತಿ ಏರಿಕೆ ಮಾಡಿದರೆ ಶೇ.75.1 ಹೋಗುತ್ತದೆ. ಇದರ ಜೊತೆಗೆ ಸದ್ಯ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಶೇ.10 ಮೀಸಲಾತಿಯೂ ಇದೆ. ಎಲ್ಲವನ್ನು ಸೇರಿಸಿದಾಗ ಒಟ್ಟು ಮೀಸಲಾತಿ ಪ್ರಮಾಣ ಶೇ.85.1 ಏರಿಕೆಯಾಗುತ್ತದೆ. ಸಾಮಾನ್ಯ ವರ್ಗಕ್ಕೆ ಶೇ.14.9 ಮೀಸಲಾತಿ ಲಭ್ಯವಾಗುತ್ತದೆ. ಹಿಂದುಳಿದವರ ಮೀಸಲು ಪ್ರಮಾಣವನ್ನು ಹೆಚ್ಚಿಸಬೇಕಾದರೆ ಕೇಂದ್ರ ಸರ್ಕಾರವು ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತಂದ ಬಳಿಕ ಮೀಸಲಾತಿ ಹೆಚ್ಚಿಸಬೇಕಾಗುತ್ತದೆ.

ಸಮುದಾಯ ವಿರೋಧ

2011ರ ಜನಗಣತಿ ಆಧರಿಸಿ ಇದನ್ನು ಮಾಡಲಾಗಿದೆ. ಇದು ಇಂದಿನ ಸಂದರ್ಭದಲ್ಲಿ ಅರ್ಥಹೀನವಾಗಿದೆ. ನಮ್ಮ ಸಮುದಾಯದ ಯಾರೂ ಗಣತಿದಾರರನ್ನು ನೋಡಿಲ್ಲ. ಜಾತಿ ಗಣತಿ ನಡೆಸಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದರು. ನಿವೃತ್ತ ಐಎಎಸ್ ಅಧಿಕಾರಿ, ಜಾಗತಿಕ ಲಿಂಗಾಯತ ಮಹಾ ಸಭಾ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ್ ಮಾತನಾಡಿ, ಜಾತಿ ಗಣತಿ ಅಕ್ರಮ ಮತ್ತು ದೋಷಪೂರಿತವಾಗಿದೆ. ಭಾರತೀಯ ಜನಗಣತಿ ಕಾಯ್ದೆಯಡಿ ರಾಜ್ಯ ಸರ್ಕಾರಕ್ಕೆ ಜನಗಣತಿ ನಡೆಸುವ ಅಧಿಕಾರವಿಲ್ಲ ಎಂಬುದು ನನ್ನ ನಿಲುವು. ಭಾರತ ಸರ್ಕಾರ ಮಾತ್ರ ಇದನ್ನು ಮಾಡಬಹುದು. 1931ರ ನಂತರ ಇದನ್ನು ಇಲ್ಲಿಯವರೆಗೆ ಮಾಡಿಲ್ಲ. ಕೇಂದ್ರ ಸರ್ಕಾರ ಹೊರತುಪಡಿಸಿ ಯಾವುದೇ ಪ್ರಾಧಿಕಾರ ಮಾಡುವ ಜಾತಿ ಗಣತಿ ಕಾನೂನುಬಾಹಿರವಾಗುತ್ತದೆ ಎಂದರು.

ಲೂಟಿ... ಲೂಟಿ...

ನೀವೇ ನಮಗೆ ಶಕ್ತಿ ಎದೆಗುಂದಬೇಡಿ, ಪಕ್ಷವನ್ನು ಸಂಘಟಿಸಿ ಜನರ ಬಳಿಗೆ ತೆರಳಿ, ಪಕ್ಷವನ್ನು ಒಂದು ಬಾರಿಗೆ ಅಧಿಕಾರಕ್ಕೆ ತನ್ನಿ, ನಾವು ಹೇಗೆ ಆಡಳಿತ ನಡೆಸುತ್ತೇವೆ ಎಂಬುದನ್ನು ತೋರಿಸುವೆ. ಹಿಂದೆ ನನಗೆ ಎರಡು ಬಾರಿ ಅಧಿಕಾರ ದೊರೆತಾಗಲೂ ಸಾಲ ಮಾಡಲು ಮುಂದಾಗಲಿಲ್ಲ. ಇರುವ ಸಂಪನ್ಮೂಲದಲ್ಲೇ ಅಭಿವೃದ್ಧಿ ಮಾಡಿ ತೋರಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರದ ಕಪ್ಪು ಚುಕ್ಕೆ ಇಲ್ಲ. ಆದರೆ, ಈ ಸರ್ಕಾರದಲ್ಲಿ ಮೂರು ಮಂದಿ ಇಡೀ ಆಡಳಿತ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ್ದಾರೆ. ಕೆಲವರಂತೂ ತಮ್ಮ ಅಧಿಕಾರ ದುರ್ಬಳಕೆ ಮಾಡಿ, ಸಿಕ್ಕ ಸಿಕ್ಕ ಕಡೆ ಖಾಲಿ ಜಾಗ ಮತ್ತು ಜಮೀನುಗಳಿಗೆ ಬೇಲಿ ಹಾಕಿ ಲೂಟಿ ಮಾಡುತ್ತಿದ್ದು, ಇವರನ್ನು ಪ್ರಶ್ನಿಸುವವರೇ ಇಲ್ಲವಾಗಿದೆ ಎಂದು ತಿಳಿಸಿದರು.

ಜನರು ನಿತ್ಯ ಬಳಸುವ ವಸ್ತುಗಳ ಬೆಲೆ ಏರಿಸಿ ಅವರ ಬದುಕನ್ನು ಹಾಳುಗೆಡವಲು ಸರ್ಕಾರ ಹೊರಟಿದೆ. ಇವರೇ ಅಧಿಕಾರದಲ್ಲಿ ಮುಂದುವರೆದರೆ 10 ಲಕ್ಷ ಕೋಟಿ ರೂ. ಸಾಲವನ್ನು ರಾಜ್ಯದ ಜನರ ತಲೆಗೆ ಕಟ್ಟುತ್ತಾರೆ. 2 ಸಾವಿರ ರೂ.ನಿಂದ ಜನರ ಬದುಕು ಬದಲಾವಣೆ ಮಾಡುತ್ತೇವೆ ಎಂದಿದ್ದೀರಿ. ಎಲ್ಲಿ ಬದಲಾವಣೆ ಆಗಿದೆ, ಬದಲಿಗೆ ಸಂಕಷ್ಟಕ್ಕೆ ದೂಡಿದ್ದೀರಿ ಎಂದು ಕಿಡಿಕಾರಿದರು.

ಮೈಸೂರು ಮಿತ್ರ
45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರದ್ಧಾಭಕ್ತಿಯಿಂದ ನಡೆದ ಹನುಮ ಜಯಂತಿ



ವಿರಾಜಪೇಟೆ, ಏ.12–ನಗರದ ಚತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ 'ಹನುಮ ಜಯಂತಿ ಆಚರಣೆ'ಯನ್ನು ಶ್ರದ್ಧಾಭಕ್ತಿಯಿಂದ ಅಚರಿಸಲಾಯಿತು.

ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆದು, ಮಧ್ಯಾಹ್ನ ಮಹಾಪೂಜೆ ಪ್ರಸಾದ ವಿತರಣೆ ಬಳಿಕ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ದೇವಾಲಯ ಸಮಿತಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು, ನೆರೆಯ ಉರುಗಳಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿದ್ದರು.

ವಿಜೃಂಭಣೆಯ ಆದಿ ಶ್ರೀ ಪೊನ್ನಂಗಾಲತಮ್ಮೆ ಉತ್ಸವ

ನಾಪೋಕು,ಏ.12– ಕೊಡೆಗಳ ಹಬ್ಬವೆಂದೇ ಪ್ರಖ್ಯಾತಿ ಪಡೆದಿರುವ ಸಮೀಪದ ಕಕ್ಕಬ್ಬೆ-ಯವಕಪಾಡಿ ಗ್ರಾಮದ ಐತಿಹಾಸಿಕ ಹಿನ್ನೆಲೆಯ ಆದಿ ಶ್ರೀ ಪನ್ನಂಗಾಲತ್ತಮ್ಮೆ ದೇವಿಯ ಎರಡು ವರ್ಷಕೊಮ್ಮೆ ನಡೆಯುವ ಉತ್ಸವವು ಸಾಂಪ್ರದಾಯಿಕವಾಗಿ ಹಾಗೂ ಶ್ರದ್ಧಾ ಭಕ್ತಿಯಿಂದ ಜರುಗಿತು.

ಅಂಜಪರವಂಡ ಕುಟುಂಬಸ್ಥರ ಮನೆಯಿಂದ ಬೆಳಿಗ್ಗೆ ದೇವರ ಭಂಡಾರ ತರುವ ಮೂಲಕ ಚಾಲನೆ ನೀಡಲಾಯಿತು. ದೇವರ ವಿಗ್ರಹವನ್ನು ಸ್ವಚ್ಛಗೊಳಿಸಿ, ತೆಂಗಿನ ಕಾಯಿ ನೀರಿನಿಂದ ಅಭಿಷೇಕ ಮಾಡಿ ಪೂಜಿಸಲಾಯಿತು. ಆನಂತರ ದೇವರಿಗೆ ಭಕ್ತಾದಿಗಳು ಹೂವಿನ ಹಾರಗಳನ್ನು ಅರ್ಪಿಸಿದರು. ಬಳಿಕ ದೇವಾಲಯದ ಸುತ್ತ ದೇವರಕೊಡೆ ಹಾಗೂ ದೇವರ ಅಲಂಕೃತ ಮೂರ್ತಿಯೊಂದಿಗೆ ಪ್ರದಕ್ಷಣೆ ಬರಲಾಯಿತು.

ನೂತನ ಕೊಡೆ : ಇಗ್ಗುತ್ತಪ್ಪ ದೇವಾಲಯದ ಬಳಿಯ ಅಮ್ಮಂಗೇರಿಯಿಂದ ಕಣಿಯ ಜನಾಂಗದವರು ವಿಶೇಷ ಮರದ ಎಲೆಯಿಂದ ನೂತನವಾಗಿ ತಯಾರಿಸಿ ಪೂಜಿಸಲ್ಪಟ್ಟ ದೇವರ ಕೊಡೆಯೊಂದಿಗೆ ದೇವಾಲಯದ ಸಮೀಪದ ಕರ್ತಂಡ ಕುಟುಂಬಸ್ಥರ ವಿಶಾಲವಾದ ದೇವರ ಗದ್ದೆಗೆ ಬಂದು ಸಾಂಪ್ರದಾಯಿಕ ಆಚರಣೆ ನೆರವೇರಿಸಿದರು.



ಆದಿ ಶ್ರೀ ಪೊನ್ನಂಗಾಲ ತಮ್ಮೆ ದೇವಿಯ ಉತ್ಸವದಲ್ಲಿ ಅಲಂಕೃತ ದೇವರ ಪ್ರತಿಮೆಯನ್ನು ಹೊತ್ತು ಪ್ರದಕ್ಷಣೆ ಬಂದರು.

ಇಂದು ಭಾನುವಾರ ದೇವರ ಕುರುಂದ ಹಬ್ಬ ನಡೆಯಲಿದೆ. ದೇವರು ಬಂದವರು ತೆಂಗಿನ ಕಾಯಿಯನ್ನು ತಲೆಗೆ ಹೊಡೆದು ಕೊಳ್ಳುವ ದೃಶ್ಯ ನೊಡುಗರನ್ನು ಭಯ ಹುಟ್ಟಿಸುತ್ತದೆ. ನಂತರ ಭಾರಣೆಯೊಂದಿಗೆ ಹಬ್ಬವು ಸಂಪನ್ನ ಗೊಳ್ಳಲಿದೆ.

ನಾಳೆ ವಿರಾಜಪೇಟೆಯಲ್ಲಿ ಅಂಬೇಡ್ಕರ್ ಪುತ್ಥಳಿ ಉದ್ಘಾಟನೆ



ಪತ್ರಿಕಾಗೋಷ್ಠಿಯಲ್ಲಿ ಅಂಬೇಡ್ಕರ್ ಭವನ ನಿರ್ವಹಣ ಸಮಿತಿಯ ಸದಸ್ಯರಾದ ವೀರಭದ್ರಯ್ಯ, ಹೆಚ್ ಎಂ ಮಹಾದೇವ ಉಪಸ್ಥಿತರಿದ್ದರು.

ವಿರಾಜಪೇಟೆ, ಏ.12– ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಅಂಬೇಡ್ಕರ್ ಭವನದಲ್ಲಿ 134ನೇ ಜನ್ಮ ದಿನಾಚರಣೆ ಹಾಗೂ ಪುತ್ಥಳಿಯ ಉದ್ಘಾಟನೆ ಏ.14ರಂದು ನಡೆಯಲಿದೆಯೆಂದು ಭವನದ ನಿರ್ವಹಣೆ ಸಮಿತಿ ಸದಸ್ಯ ವಿ.ಕೆ.ಸತೀಶ್ ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್ ಎಸ್ ಭೋಸರಾಜು ಉಪಸ್ಥಿತಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶಾಸಕ ಎ ಎಸ್ ಪೊನ್ನಣ್ಣ ಪುತ್ಥಳಿಯ ಉದ್ಘಾಟನೆ ನೆರವೇರಿಸಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ರಾಜ್ಯಸಭಾ ಸದಸ್ಯ ಅಜಯ ಮಾಕನ್ ವಿಧಾನ ಪರಿಷತ್ ಸದಸ್ಯರಾದ ಎಂ ಪಿ ಸುಜಾ ಕುಶಾಲಪ್ಪ ಎಸ್‌ಎಲ್ ಭೋಜೆಗೌಡ ಡಾ ಧನಂಜಯ ಸರ್ಜ ಪುರಸಭಾಧ್ಯಕ್ಷೆ ಮನೆಯಪಂಡ ದೇಚಮ್ಮ, ಉಪಾಧ್ಯಕ್ಷೆ ಪಸಿಹಾ ತಬುಸಂ, ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ಅಧ್ಯಕ್ಷ ಅಣ್ಣೀರ ಹರೀಶ್, ಉಪಾಧ್ಯಕ್ಷ ಅಲೀರ ರಶೀದ್, ಜಿಲ್ಲಾಧಿಕಾರಿ ವೆಂಕಟರಾಜ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಆನಂದ ಪ್ರಕಾಶ್ ಮೀನಾ ಮತ್ತಿತರ ಪ್ರಮುಖರು ಅಧಿಕಾರಿಗಳು ಉಪಸ್ಥಿತರಿರುವರು ಪ್ರಮುಖ ಭಾಷಣಕಾರರಾಗಿ ಮೈಸೂರಿನ ಅರವಿಂದ ಮಾಲಗತ್ತಿ ಭಾಗವಹಿಸಲಿದ್ದಾರೆ ಎಂದರು.

ಶೃತಿಗೆ ಡಾಕ್ಟರೇಟ್ ಪದವಿ



ಕುಶಾಲನಗರ, ಏ.12– ಶೃತಿ ಎಸ್.ಮಂಜುನಾಥ್ ಮಂಡಿಸಿದ ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ 43ನೇ ಘಟಿಕೋತ್ಸವದಲ್ಲಿ ಪಿ.ಎಚ್.ಡಿ.ಪದವಿಯನ್ನು ಉನ್ನತ ಶಿಕ್ಷಣ ಸಚಿವ ಸುಧಾಕರ್ ಅವರಿಂದ ಪಡೆದುಕೊಂಡರು.

ರಸಾಯನ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕಿ ಪ್ರೊಫೆಸರ್ ಬಿ. ವಿಶಾಲಾಕ್ಷಿ ಅವರ ಮಾರ್ಗದರ್ಶನದಲ್ಲಿ ಹೈಬ್ರೀಡ್ ಪಾಲಿಮರ್ ನ್ಯಾನೋಕೋಪೋಸೈಟ್ಸ್ : ಸಿಂಥೆಸೀಸ್ ಕ್ಯಾರಕ್ಟರೈಷೇಶನ್ಸ್ ಅಂಡ್ ಅಪ್ಲಿಕೇಶನ್ಸ್ ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧ ಬರೆದು, ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ಸೋಮವಾರ ಪೇಟೆಯ ಪುಷ್ಪಾ .ಎಸ್ ಸಾಲಿಯಾನ್‌ರ ಪುತ್ರಿ ಶೃತಿ ಚಿಕ್ಕ ಅಳುವಾರ ಗ್ರಾಮದ ಸಿ.ಕೆ. ಉದಯ್ ಕುಮಾರ್ ಮತ್ತು ಮಾದೇವಿ ದಂಪತಿ ಸೊಸೆ.

ವಕ್ಫ್ ತಿದ್ದುಪಡಿ ಮಸೂದೆ: ಪ್ರಜಾಪ್ರಭುತ್ವದ ಆಶಯಕ್ಕೆ ಮಾರಕ

ಪೊನ್ನಂಪೇಟೆ, ಏ.12– ಮುಸ್ಲಿಮರಲ್ಲಿ ಅಸುರಕ್ಷತೆಯನ್ನು ಮೂಡಿಸುವ ಮತ್ತು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿರುವ ನೂತನ ವಕ್ಫ್ ತಿದ್ದುಪಡಿ ಮಸೂದೆಯನ್ನು ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ತೀವ್ರವಾಗಿ ವಿರೋಧಿಸುತ್ತದೆಯೆಂದು ಅಧ್ಯಕ್ಷ ದುದ್ದಿಯಂಡ ಹೆಚ್.ಸೂಫಿ ಹಾಜಿ ಹೇಳಿದ್ದಾರೆ. ಮುಸ್ಲಿಂ ಸಂಘಟನೆಗಳು ಮತ್ತು ವಿರೋಧ ಪಕ್ಷಗಳು ಸೂಚಿಸಿದ ತಿದ್ದುಪಡಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿ, ಅಪಾಯಕಾರಿ ಅಂಶಗಳನ್ನು ಮಸೂದೆಯಲ್ಲಿ ಸೇರಿಸಿ ಸಂಸತ್ತಿನ ಉಭಯ ಸದನಗಳಲ್ಲಿ ಮಸೂದೆಗೆ ಅಂಗೀಕಾರ ಪಡೆದಿರುವುದು ಪ್ರಜಾಪ್ರಭುತ್ವದ ಆಶಯಕ್ಕೆ ಮಾರಕವಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.



ಪತ್ರಿಕಾಗೋಷ್ಠಿಯಲ್ಲಿ ದುದ್ದಿಯಂಡ ಹೆಚ್. ಸೂಫಿ ಹಾಜಿ ಮಾತನಾಡಿದರು.

ವಕ್ಫ್ ಆಸ್ತಿಗಳನ್ನು ಕಬಳಿಸುವ ಮತ್ತು ಅಳಿದುಳಿದ ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲೂ ಸಮುದಾಯದ ನಿಯಂತ್ರಣವನ್ನು ತಪ್ಪಿಸುವ ಉದ್ದೇಶವನ್ನೇ ಹೊಂದಿದೆ. ಕೇಂದ್ರ ಸರ್ಕಾರ ಈ ಕಾರಣಕ್ಕಾಗಿ ಜನರ ಭಾವನೆಗಳಿಗೆ ಬೆಲೆ ನೀಡದೆ ಏಕಪಕ್ಷಿಯವಾಗಿ ಈ ಕಾನೂನನ್ನು ಜಾರಿಗೊಳಿಸಿದೆ. ಇದು ಕೇಂದ್ರ ಸರ್ಕಾರದ ಮತ್ತೊಂದು ಹಠಮಾರಿ ಧೋರಣೆಗೆ ಸ್ಪಷ್ಟ ನಿದರ್ಶನ ಎಂದರು.

ವಕ್ಫ್ ಎಂಬುದು ದೇವರ ಹೆಸರಿನಲ್ಲಿ ದಾನದ ರೂಪದಲ್ಲಿ ಸಮರ್ಪಿಸಲಾದ ಸ್ವತಾಗಿರುತ್ತದೆ. ಇದು ಯಾರಿಗೂ ಯಾವತ್ತೂ ಪರಭಾರೆ ಮಾಡಲಾಗದ, ಸಮುದಾಯದ ಧಾರ್ಮಿಕ ಮತ್ತು ಸಾಮಾಜಿಕ ಕೆಲಸಗಳಿಗೆ ಮಾತ್ರ ಬಳಸಬಹುದಾದ ಸ್ಥಿರಾಸ್ತಿಯಾಗಿರುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ಉದ್ದೇಶಗಳಿಗೆ ಸಂಸ್ಥೆಗಳನ್ನು ರಚಿಸುವ, ಸ್ಥಿರ ಹಾಗೂ ಚರಾಸ್ತಿಗಳನ್ನು ಹೊಂದುವ ಮತ್ತು ಅವುಗಳನ್ನು ಕಾನೂನು ರೀತಿ ನಿರ್ವಹಣೆ ಮಾಡುವ ಹಕ್ಕನ್ನು ಕೊಡುತ್ತದೆ. ಆದರೆ ಇದೀಗ ಜಾರಿಯಾಗಿರುವ ನೂತನ ಕಾನೂನು ಸಂವಿಧಾನದಲ್ಲಿ ನೀಡಲಾದ ಮೂಲಭೂತ ಹಕ್ಕನ್ನೇ ಉಲ್ಲಂಘಿಸುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗೋಷ್ಠಿಯಲ್ಲಿದ್ದ ಕೊಡವ ಮುಸ್ಲಿಂ ಅಸೋಸಿಯೇಷನ್ ಹಿರಿಯ ಉಪಾಧ್ಯಕ್ಷರಾದ ಡಾ. ಜೋಯಿಪೆರ ಎ.ಕುಂಞಬ್ದುಲ್ಲಾ ಮಾತನಾಡಿದರು.

ಸೀತಾರಾಮದೇವರ ಕಲ್ಯಾಣೋತ್ಸವ



ಲೋಕಕಲ್ಯಾಣಾರ್ಥ, ಸಕಲ ಸಮೃದ್ಧಿಗಾಗಿ ಕಿಕ್ಕೇರಿಯ ಸುಬ್ಬರಾಯ ಛತ್ರದಲ್ಲಿ ಸೀತಾರಾಮ ಕಲ್ಯಾಣೋತ್ಸವ ವಿಜೃಂಭಣೆಯಿಂದ ಜರುಗಿತು. ವಿಪ್ರ ಬಾಂಧವ ಸೇವಾ ಸಮಿತಿ ಆಯೋಜಿಸಿದ್ದ ಸೀತಾ ಕಲ್ಯಾಣಕ್ಕೆ ತಾಲ್ಲೂಕು, ಹೋಬಳಿಯ ವಿವಿಧೆಡೆಯಿಂದ ವಿಪ್ರ ವೃಂದದವರು ಅಧಿಕವಾಗಿ ಭಾಗವಹಿಸಿ ಸಂಭ್ರಮಪಟ್ಟರು. ಅನಂತಸ್ವಾಮಿ, ಕೆ.ಬಿ. ವೆಂಕಟೇಶ್, ಕೆ.ಎಸ್. ಪರಮೇಶ್ವರಯ್ಯ, ಮಹಬಲಶರ್ಮ, ಕೆ.ಎಸ್. ಪ್ರಭಾಕರ್, ಗಣೇಶರಾವ್, ಸೀತಾರಾಮು, ನಾಗೇಂದ್ರ, ಶ್ರೀಹರಿ, ನರಸಿಂಹ, ಆದಿತ್ಯ, ಕೆ.ಎಸ್. ಚಂದ್ರಶೇಖರ್, ಸಿ.ದೀಪಕ್, ಶ್ರೀನಿಧಿ, ಕೃಷ್ಣ, ವಿಜಯಲಕ್ಷ್ಮೀ, ಸುರಭಿ, ಸ್ವರ್ಣ, ಸುಮಾ, ರಜಿನಿ, ಕಲಾವತಿ, ವೇದಾವತಿ, ವಿವಿಧ ಗ್ರಾಮಗಳ ವಿಪ್ರ ಮುಖಂಡರು ಇದ್ದರು.

ಗ್ರಾಮ ಸಭೆ ಬಗ್ಗೆ ತರಬೇತಿ ಕಾರ್ಯಕ್ರಮ

ಭಾರತೀನಗರ, ಏ.12– ಭಾರತೀನಗರ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆ ನಡೆಸುವುದರ ಬಗ್ಗೆ ತರಬೇತಿ ಕಾರ್ಯಕ್ರಮ ಜರುಗಿತು.


ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್.ಸುಧಾ ಮಾತನಾಡಿ, ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಗ್ರಾಮ ಸ್ವರಾಜ್ ಇಲಾಖೆ ವತಿಯಿಂದ ಗ್ರಾಮ ಸಭೆ ನಡೆಸುವುದು ಹೇಗೆ, ನಿಯಾಮನುಸಾರ ಹೇಗೆ ಕರೆಯಬೇಕು ಎಂಬುದರ ಬಗ್ಗೆ ತರಬೇತಿಯನ್ನು ಪ್ರೊಜೆಕ್ಟರ್ ಮೂಲಕ ತಿಳಿಸಿಕೊಡಲಾಯಿತು. ಈ ತರಬೇತಿಯ ಉದ್ದೇಶ ಈ ವರ್ಷದಿಂದ ಎಷ್ಟು ಗ್ರಾಮ ಸಭೆ ವಾರ್ಡ್ ಸಭೆ ಮತ್ತು ವಿಶೇಷ ಸಭೆ ಮಾಡಬೇಕು. ಅದನ್ನು ಯಾವ ನಿಯಾಮಾನುಸಾರ ಮಾಡಬೇಕೆಂಬುವುದರ ಬಗ್ಗೆ ಮಾರ್ಗಸೂಚಿಯನ್ನು ಜಿಲ್ಲಾಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಪಂಚಾಯತ್ ರಾಜ್ ಇಲಾಖೆ, ಆಯುಕ್ತಾಲಯ ಬೆಂಗಳೂರು ಇವರು ತಿಳಿಸಿದ್ದಾರೆ.

ಅಂಬೇಡ್ಕರ್ ಜಯಂತಿಗೆ ಗೈರಾಗುವ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ

ಕೆ.ಆರ್.ಪೇಟೆ, ಏ.12– ಸಾಲು ಸಾಲು ರಜೆ ಇದೆ ಎಂದು ಸರ್ಕಾರಿ ನೌಕರರು ಏ.14ರಂದು ಅಂಬೇಡ್ಕರ್ ಜಯಂತಿಗೆ ಗೈರು ಹಾಜರಾದರೆ ಅಂತಹ ಇಲಾಖೆಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ದಲಿತ ಸಂಘಟನೆಗಳ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆಯ ಹಿನ್ನೆಲೆಯಲ್ಲಿ ನಡೆದ ದಲಿತ ಪರ ಸಂಘಟನೆಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ತಾಲೂಕು ಛಲವಾದಿ ಮಹಾಸಭಾ ಅಧ್ಯಕ್ಷ ಊಚನಹಳ್ಳಿ ನಟರಾಜ್ ಮತ್ತಿತರರು ಏ.12 ಎರಡನೇ ಶನಿವಾರ, ಏ.13 ಭಾನುವಾರ, ಏ.14 ಅಂಬೇಡ್ಕರ್ ಜಯಂತಿ ರಜೆ ಇದೆ ಎಂದು ರಜೆ ಹಾಕಿ ಅಂಬೇಡ್ಕರ್ ಜಯಂತಿಗೆ ಗೈರು ಹಾಜರಾದರೆ ಅಂತಹ ಇಲಾಖೆಯ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ದಲಿತ ಮುಖಂಡ ಬಸ್ತಿ ರಂಗಪ್ಪ ಮಾತನಾಡಿ ಪಟ್ಟಣದ ಪ್ರವಾಸಿ ಮಂದಿರದ ಆವರಣದಿಂದ ಅಂಬೇಡ್ಕರ್ ಭಾವಚಿತ್ರವನ್ನು ವೇದಿಕೆಯ ವರೆಗೆ ಬೆಳ್ಳಿ ಸಾರೋಟಿನಲ್ಲಿ ಜಾನಪದ ಕಲಾಮೇಳಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಸನ್ಮಾನವನ್ನು ಹಮ್ಮಿಕೊಳ್ಳಲಾಗಿದೆ ಹಾಗಾಗಿ ಎಲ್ಲರೂ ಕಡ್ಡಾಯವಾಗಿ ಆಗಮಿಸಿ ಕಾರ್ಯಕ್ರಮ ವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.



ದಲಿತಪರ ಸಂಘಟನೆಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್ ಮಾತನಾಡಿದರು.

ಪೂರ್ವಭಾವಿ ಸಭೆಯಲ್ಲಿ ಪುರಸಭಾ ಸದಸ್ಯ ಪ್ರೇಮ್‌ಕುಮಾರ್, ದಲಿತ ಮುಖಂಡ ಬಸ್ತಿ ರಂಗಪ್ಪ, ನಿವೃತ್ತ ಪ್ರಾಂಶುಪಾಲ ರಾಜಯ್ಯ, ತಾಲೂಕು ಛಲವಾದಿ ಮಹಾಸಭಾ ಅಧ್ಯಕ್ಷ ಊಚನಹಳ್ಳಿ ನಟರಾಜು, ಸಿಂಧುಘಟ್ಟ ಸೋಮಸುಂದರ್, ಪ್ರಧಾನ ಕಾರ್ಯದರ್ಶಿ ಜೈನ್ನಹಳ್ಳಿ ಹರೀಶ್, ಹಾಸನ–ಮಂಡ್ಯ ಜಿಲ್ಲಾ ಛಲವಾದಿ ಮಹಾಸಭಾ ಉಸ್ತುವಾರಿ ಮಾಯಿಬಳ್ಳಿ ಜಯರಾಂ, ಛಲವಾದಿ ಮಹಾಸಭಾ ಮಾಜಿ ಅಧ್ಯಕ್ಷ ಮುದುಗೆರೆ ಮಹೇಂದ್ರ, ಚೌಡೇನಹಳ್ಳಿ ದೇವರಾಜು, ಕಟ್ಟಹಳ್ಳಿ ಶಂಕರ್, ಗಂಗಾಧರ್, ಬಂಡಿಹೊಳೆ ರಮೇಶ್, ಎನ್.ಜೆ.ಮಂಜು, ಬಂಡಿಹೊಳೆ ಕೃಷ್ಣಮೂರ್ತಿ, ಯೋಗೇಶ್, ರಾಮು, ಹರಿಹರಪುರ ನರಸಿಂಹ, ಬೂಕನಕೆರೆ ತಮ್ಮಯ್ಯ, ನಿಂಗಯ್ಯ ಉಪಸ್ಥಿತರಿದ್ದರು.

ಮೊಬೈಲ್ ಬಂದ ಬಳಿಕ ಪುಸ್ತಕಗಳು ನಿದ್ರಿಸುತ್ತಿವೆ : ದೊ.ಚಿ.ಗೌಡ

ಪಾಂಡವಪುರ: ಮೊಬೈಲ್ ಬಂದ ಬಳಿಕ ಪುಸ್ತಕಗಳು ನಿದ್ರಿಸುತ್ತಿವೆ. ಮಕ್ಕಳಿಗೆ ಸಂಸ್ಕೃತ ಹಾಗೂ ಸಮಾಜದಲ್ಲಿ ಆರೋಗ್ಯಕರ ಮನಸ್ಸುಗಳು ಬೆಳೆಯಬೇಕಾದರೆ ಪುಸ್ತಕಗಳನ್ನು ಓದಬೇಕು ಎಂದು ರೈತಕವಿ ದೊಡ್ಡರಸಿನಕೆರೆ ದೊ.ಚಿ.ಗೌಡ ಹೇಳಿದರು.

ತಾಲೂಕಿನ ಹರಳಹಳ್ಳಿಯ ಅಂಕೇಗೌಡರ ಪುಸ್ತಕ ಮನೆಯಲ್ಲಿ ಶ್ರೀಶಂಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ನಮ್ಮ ನಡೆ ಗ್ರಂಥಾಲಯದ ಕಡೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲರು ಹೆಚ್ಚಾಗಿ ಮೊಬೈಲ್ ಬಳಕೆ ಮಾಡುತ್ತಿರುವುದರಿಂದ ಪುಸ್ತಕಗಳನ್ನು ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ವಿದ್ಯಾರ್ಥಿಗಳು ತಮ್ಮ ಪ್ರಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬಿಟ್ಟರೆ ಅದರಿಂದಾಚೆಗೆ ಯಾವ ಪುಸ್ತಕಗಳನ್ನು ಓದುತ್ತಿಲ್ಲ. ಇದರಿಂದಾಗಿ ಮಕ್ಕಳಲ್ಲಿ ಪ್ರಾಪಂಚಿಕ ಜ್ಞಾನ ಕಡಿಮೆಯಾಗುತ್ತಿದೆ. ಪ್ರಾಪಂಚಿಕ ಜ್ಞಾನ ತಿಳಿಯಬೇಕಾದರೆ ಪುಸ್ತಕ ಓದಬೇಕು ಎಂಬುದಾಗಿ ಅಂಬೇಡ್ಕರ್ ಅವರೇ ಹೇಳಿದ್ದಾರೆ. ಹೆಚ್ಚಾಗಿ ಪುಸ್ತಕ ಓದುವುದರಿಂದ ಜ್ಞಾನದ ಜತೆಗೆ ಸಂಸ್ಕಾರ, ಸಂಸ್ಕೃತಿ, ಸಂಬಂಧಗಳು ಸಹ ವೃದ್ಧಿಸತ್ತವೆ ಎಂದು ತಿಳಿಸಿದರು.

ಪುಸ್ತಕಗಳಿಗೂ ನಮಗೂ ತಾಯಿ–ಮಗುವಿನ ಸಂಬಂಧದಂತೆ ಇರಬೇಕು, ಮಕ್ಕಳು ಅತ್ತರೆ ತಾಯಿ ಹಾಲು ಕುಡಿಸುತ್ತಾಳೆ, ಮನಸ್ಸಿಗೆ ನೋವಾದರೆ ನಾವು ಪುಸ್ತಕಗಳನ್ನು ಓದುತ್ತೇವೆ. ನಮ್ಮ ಹುಟ್ಟಿನಿಂದ ಕೊನೆಯ ತನಕ್ಕೂ ಪುಸ್ತಕಗಳು ನಮ್ಮೊಡನೆ ಇರುತ್ತವೆ ಎಂದರು.



ಕಾರ್ಯಕ್ರಮದಲ್ಲಿ ಪುಸ್ತಕ ಪ್ರೇಮಿ ಅಂಕೇಗೌಡ ಅವರನ್ನು ಅಭಿನಂಧಿಸಲಾಯಿತು.

ಮೈಸೂರು ವಿವಿ ಗ್ರಂಥಾಲಯದ ಹಿರಿಯ ಪ್ರಾಧ್ಯಾಪಕ ಡಾ.ಚಂದ್ರಶೇಖರ್ ಮಾತನಾಡಿದರು. ಸನ್ಮಾನ ಸ್ವೀಕರಿಸಿ ಪುಸ್ತಕ ಪ್ರೇಮಿ ಅಂಕೇಗೌಡ ಮಾತನಾಡಿ, ವ್ಯಕ್ತಿತ್ವವನ್ನು ವಿಕಾಸಗೊಳಿಸುವಂತಹ ಪ್ರಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದುವ ಹವ್ಯಾಸ ರೂಡಿಸಿಕೊಳ್ಳಬೇಕು ಎಂದು ತಿಳಿಸಿದರು. ಇದೇ ವೇಳೆ ಲಿಮ್ಕಾ ಪ್ರಶಸ್ತಿಗೆ ಸೇರಿರುವ ಪುಸ್ತಕ ಪ್ರೇಮಿ ಅಂಕೇಗೌಡ ಅವರನ್ನು ಅಭಿನಂಧಿಸಲಾಯಿತು.

ಶಂಭುಲಿಂಗೇಗೌಡ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೊ.ಎಂ. ಪಂಚಲಿಂಗೇಗೌಡ ನಿವೃತ್ತ ಗ್ರಂಥಪಾಲಕ ಜೆ.ಸ್ವಾಮಿ, ಪ್ರಾಂಶುಪಾಲ ಡಾ.ಶ್ರೀಕಾಂತ್, ಸಂಯೋಜಕ ಗಿರೀಶ್, ಕಾಳೇಗೌಡ, ಡಾಮಡಹಳ್ಳಿ ಸ್ವಾಮೀಗೌಡ ಇದ್ದರು.



ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯದ 14ನೇ ಘಟಿಕೋತ್ಸವದಲ್ಲಿ ಪ್ರಸ್ತ ಸಾಲಿನ ಸ್ನಾತಕೋತ್ತರ ಪದವಿಯಲ್ಲಿ ಮಂಡ್ಯ ತಾಲೂಕಿನ ಕೊಮ್ಮೇರಹಳ್ಳಿ ಡಾ.ಸಚಿನ್‌ಗೌಡ ಚಿನ್ನದ ಪದಕ್ಕೆ ಭಾಜನರಾಗಿದ್ದಾರೆ. ಈ ಸಂದರ್ಭದಲ್ಲಿ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಕುಲಪತಿಗಳಾದ ಪ್ರೊವೀರಣ್ಣ, ನವೀನ್‌ಕುಮಾರ್ ಇತರರಿದ್ದಾರೆ.


ವರದಕ್ಷಿಣೆ ಕಿರುಕುಳ; ದೂರು ದಾಖಲು

ಯಳಂದೂರು: ವರದಕ್ಷಿಣೆ ತರುವಂತೆ ಒತ್ತಾಯಿಸಿ ಮಹಿಳೆಯ ಮೇಲೆ ದೈಹಿಕ ಹಲ್ಲೆ ನಡೆಸಿರುವ ಘಟನೆ ಪಟ್ಟಣದಲ್ಲಿ ಜರುಗಿದೆ.



ಪಟ್ಟಣದ ಮುಸ್ಲಿಂ ಬಡಾವಣೆಯ ನಿವಾಸಿ ಸಾನಿಯಾ ಎಂಬುವರೇ ದೈಹಿಕ ಹಲ್ಲೆಗೀಡಾಗಿ ನೊಂದ ಮಹಿಳೆಯಾಗಿದ್ದಾರೆ. ಈಕೆಂಯನ್ನು ಪಟ್ಟಣದ ನಿವಾಸಿ ಶಾತಾಪ್ ಪಾಷ ಎಂಬುವರೊಂದಿಗೆ ಫೆ.15 ರಂದು ಮದುವೆ ಯಾಗಿತ್ತು. ಮೈಸೂರಿನಲ್ಲಿ ನಡೆದ ಮದುವೆ ಸಂದರ್ಭದಲ್ಲಿ ಚಿನ್ನದ ಓಲೆ, ನಕ್ಲೇಸ್, ಬಳೆ, 6 ಉಂಗುರ ಸೇರಿದಂತೆ ಒಟ್ಟು 80 ಗ್ರಾಂ ಚಿನ್ನದ ಆಭರಣಗಳನ್ನು ನೀಡಿ ಜೊತೆಗೆ ಇತರ ಸಾಮಾನುಗಳನ್ನು ನೀಡಲಾಗಿತ್ತು. ಈಗ ಇವರಿಗೆ ಒಂದೂವರೆ ವರ್ಷದ ಗಂಡು ಮಗುವೂ ಇದೆ. ಈಕೆಯ ಪತಿ ಕೊಳ್ಳೇಗಾಲದಲ್ಲಿ ಪಂಚರ್ ಶಾಪ್ ಅಂಗಡಿ ಇಟ್ಟುಕೊಂಡಿದ್ದು, ಕೆಲ ಒಡವೆಗಳನ್ನು ಮಾರಿಕೊಂಡಿದ್ದನಲ್ಲದೆ ಮತ್ತೆ ತವರಿನಿಂದ ಹಣ ತರುವಂತೆ ಪೀಡಿಸುತ್ತಿದ್ದ ನೆನ್ನಲಾಗಿದೆ. ಈ ವಿಷಯ ತಾರಕಕ್ಕೆ ಏರಿ ಏ.8 ರಂದು ಈಕೆಯ ಗಂಡ, ಆತನ ಚಿಕ್ಕಪ್ಪ, ಅವರ ಮಗ ನಾದಿನಿಯರಿಬ್ಬರು ಸೇರಿಕೊಂಡು ಕಣ್ಣು ಹಾಗೂ ದೇಹದ ಇತರೆ ಭಾಗಗಳಿಗೆ ತೀವ್ರ ಹಲ್ಲೆ ಮಾಡಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ಪರಾರಿಯಾಗಿರುವ ಆರೋಪಿಗಳ ಶೋಧನೆಯಲ್ಲಿ ತೊಡಗಿದ್ದಾರೆ.

ಕರಡಿ ಹತ್ಯೆ ಮಾಡಿದ್ದ ಆರೋಪಿ ಬಂಧನ



ಕೊಳ್ಳೇಗಾಲ,ಏ.12– ಸಿಡಿಮದ್ದು ಇಟ್ಟು ಕರಡಿಯನ್ನು ಹತ್ಯೆ ಮಾಡಿದ್ದ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ದೊಡ್ಡಿಂದುವಾಡಿ ಗ್ರಾಮದ ನಿವಾಸಿ ಬಸವರಾಜು ಶೆಟ್ಟಿ ಮಗನಾದ ಸುಂದರ್(30) ಎಂಬುವನೇ ಬಂಧಿತ ಆರೋಪಿ. ಈತ ರಾತ್ರಿ ಸಿಡಿಮದ್ದು ಹಾಕಿ ಪ್ರಾಣಿಗಳನ್ನು ಸಾಯಿಸಿ ಬೆಳಿಗ್ಗೆ ಸಮಯದಲ್ಲಿ ಅದರ ಮಾಂಸಗಳನ್ನು ಮಾರಾಟ ಮಾಡುತ್ತಿದ್ದನು. ಕೆಲವು ದಿನಗಳ ಹಿಂದೆಯಷ್ಟೆ ಕೊತ್ತನೂರು ಅರಣ್ಯ ಪ್ರದೇಶದ ಬಳಿ ಸಿಡಿಮದ್ದುನಿಂದ ಕರಡಿ ಹತ್ಯೆ ಮಾಡಿ ಪರಾರಿಯಾಗಿದ್ದನು. ಇಂದು ಈತನನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.

ಈತ ತನ್ನ ಸಹಚರರೊಂದಿಗೆ ಈ ಹಿಂದೆ ಮೊಲದ ಮರಿಯನ್ನು ಬೇಟೆಯಾಡಿದ ಆರೋಪದ ಮೇರೆಗೆ ಸೆರೆವಾಸ ಶಿಕ್ಷೆ ಅನುಭವಿಸಿದ್ದಂತಹ ವ್ಯಕ್ತಿ.

ಹೊನ್ನೂರು ಬಿ.ನಂಜಯ್ಯ ನಿಧನ



ಯಳಂದೂರು: ತಾಲೂಕಿನ ಹೊನ್ನೂರು ಗ್ರಾಮದ ಚೆಸ್ಕಾಂ ಇಲಾಖೆ ನಿವೃತ್ತ ಅಧಿಕಾರಿ ಬಿ.ನಂಜಯ್ಯ(80) ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಮಧ್ಯಾಹ್ನ ಪುತ್ರಿಯರನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ಅಂತ್ಯ ಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬದುಕಿನುದ್ದಕ್ಕೂ ಅಂಬೇಡ್ಕರ್ ನೆನಪು ಅಗತ್ಯ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಶ್ರೀಕಾಂತ್ ಅಭಿಮತ

ಕೊಳ್ಳೇಗಾಲ, ಏ.12–ಅಂಬೇಡ್ಕರ್ ಜಯಂತಿ ದಿನದಂದು ಮಾತ್ರ ನೆನಪಿಸಿಕೊಳ್ಳದೆ, ಅವರ ತತ್ವ ಹಾಗೂ ಆದರ್ಶಗಳನ್ನು ಬದುಕಿನುದ್ದಕ್ಕೂ ಪಾಲನೆ ಮಾಡಬೇಕಿದೆ ಎಂದು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಸಿ ಶ್ರೀಕಾಂತ್ ಹೇಳಿದ್ದಾರೆ.

ಪಟ್ಟಣದ ಭೀಮನಗರದ ಮಾತೆ ಸಾವಿತ್ರಿ ಬಾಯಿ ಪುಲೆ ವೇದಿಕೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣಾ ಸಮಿತಿ, ವಕೀಲರ ಸಂಘ, ತಾಲೂಕು ಕಾನೂನು ಸೇವಾ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಸಂವಿಧಾನ ಮತ್ತು ಮಹಿಳಾ ಹಾಗೂ ಮಕ್ಕಳ ಹಕ್ಕುಗಳ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ನಾವೆಲ್ಲರೂ ಪಾಲಿಸಬೇಕಾದ ಮೂಲಭೂತ ಕರ್ತವ್ಯಗಳನ್ನು ಮರೆತಿದ್ದೇವೆ. ಆದ್ದರಿಂದ ನಾಗರಿಕರಾಗಿ ಪ್ರಾಮಾಣಿಕವಾಗಿ ಕಾನೂನುಗಳನ್ನು ಗೌರವಿಸಿ ಸಂವಿಧಾನ ಆಶಯಗಳು ಹಾಗೂ ಸಾರ್ವಭೌಮತ್ವಕ್ಕೆ ಧಕ್ಕೆ ಆಗದಂತೆ ನಡೆದು ಕೊಳ್ಳಬೇಕಾಗಿದೆ ಎಂದರು.



ಕಾನೂನು ಅರಿವು ಕಾರ್ಯಕ್ರಮವನ್ನು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಸಿ ಶ್ರೀಕಾಂತ್ ಉದ್ಘಾಟಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಸುನೀತ, ಪ್ರಧಾನ ಸಿವಿಲ್ ನ್ಯಾಯಾಧೀಶೆ ನಂದಿನಿ, ಅಪರ ಸಿವಿಲ್ ನ್ಯಾಯಾಧೀಶ ಎಂ.ರಂಜಿತ್ ಕುಮಾರ್ ಇನ್ನಿತರರು ಮಾತನಾಡಿದರು ಅಪರ ಸಿವಿಲ್ ನ್ಯಾಯಾಧೀಶ ಎಂ.ರಂಜಿತ್ ಕುಮಾರ್, ವಕೀಲ ಸಂಘದ ಅಧ್ಯಕ್ಷ ಸಿ.ರವಿ, ಕಾರ್ಯದರ್ಶಿ ಬಿ.ಆರ್. ಮಹೇಶ್, ಸಿಪಿಐ ಶ್ರೀಕಾಂತ್, ಹಿರಿಯ ವಕೀಲ ಮಲ್ಲಿಕಾರ್ಜುನ್, ಎಸ್.ಚಿನ್ನರಾಜು ಹಾಗೂ ಭೀಮನಗರ ಯಜಮಾನರು ಇನ್ನಿತರಿದ್ದರು

ಇಂದು ಶ್ರೀ ಭಗವಾನ್ ಮಹಾವೀರ ಜಯಂತಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಏ.13ರಂದು ನಗರದಲ್ಲಿ ಆಯೋಜಿಸಲಾಗಿದೆ. ಬೆಳಿಗ್ಗೆ 9.30 ಗಂಟೆಗೆ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಡಲಿದೆ. ಬೆಳಿಗ್ಗೆ 10.30ಕ್ಕೆ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು. ಕಸಾಪ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮುಖ್ಯ ಭಾಷಣ ಮಾಡುವರು.

ಬೇಗೂರು ಫ್ಯಾಕ್ಸ್ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸನ್ಮಾನ



ನೂತನ ಅಧ್ಯಕ್ಷ ಕೆ.ನಂದೀಶ್, ಉಪಾಧ್ಯಕ್ಷ ಸದಾರನ್ನು ದಲಿತ ಮುಖಂಡರು ಸನ್ಮಾನಿಸಿದರು.

ಬೇಗೂರು,ಏ.12– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ ಕೆ.ನಂದೀಶ್, ಉಪಾಧ್ಯಕ್ಷ ಸದಾಶಿವಮೂರ್ತಿ(ಸದಾ)ಗೆ ದಲಿತರ ಮುಖಂಡರು ಸನ್ಮಾನಿಸಿ ಅಭಿನಂದಿಸಿದರು.

ಫ್ಯಾಕ್ಸ್ ಕಚೇರಿಯಲ್ಲಿ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಜಿಪಂ ಮಾಜಿ ಸದಸ್ಯ ಬಿ.ಕೆ.ಬೊಮ್ಮಯ್ಯ, ಪುರಸಭೆ ಮಾಜಿ ಸದಸ್ಯ ಮಲ್ಲರಾಜು, ದಲಿತ ಮುಖಂಡರಾದ ಕಬ್ಬಹಳ್ಳಿ ನಂಜುಂಡಸ್ವಾಮಿ, ಆರ್. ಸೋಮಣ್ಣ, ಭೋಗೇಶ್, ನಾರಾಯಣ ವಡ್ಡಗೆರೆ, ರಾಜು ಸನ್ಮಾನಿಸಿದರು. ಈ ಸಮಯದಲ್ಲಿ ರೈತಸಂಘದ ಮಾದಪ್ಪ, ಸಂಘದ ಸಿಇಓ ಶ್ರೀನಿವಾಸ್ ಶೆಟ್ಟಿ ಇದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ

ಚಾಮರಾಜನಗರ: ರೋಟರಿ ಸಂಸ್ಥೆ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಬಹಳ ಯಶಸ್ವಿಯಾಗಿ ನಡೆಸಿತು.

ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 275 ಮಂದಿ ತಪಾಸಣೆ ಮಾಡಿಸಿಕೊಂಡರು. 165 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು. 120 ಜನ ಹಳೆಯ ರೋಗಿಗಳನ್ನು ಪರೀಕ್ಷೆ ಮಾಡಲಾಯಿತು. ಶಿಬಿರದ ಪ್ರಾಯೋಜಕತ್ವವನ್ನು ಹಿರಿಯ ಸದಸ್ಯ ರೊ.ಜಿಆರ್ ಅಶ್ವತ್ ನಾರಾಯಣ್ ವಹಿಸಿಕೊಂಡಿದ್ದರು, ಸಂಸ್ಥೆ ಅಧ್ಯಕ್ಷ ರಾಮಸಮುದ್ರ ನಾಗರಾಜು, ರೋಟರಿ ಪದಾಧಿಕಾರಿಗಳು ಇದ್ದರು.

ಗೋಪುರದ ಮೇಲೆ ಏರಿ ಆತ್ಮಹತ್ಯೆಗೆ ವಿಫಲ ಯತ್ನ

ಹನೂರು, ಏ.12– ತಾಲೂಕಿನ ಪ್ರಸಿದ್ಧ ಧಾರ್ಮಿಕ ಸ್ಥಳವಾದ ಮಲೆಮಹದೇಶ್ವರಬೆಟ್ಟದ ಮಲೆಮಹದೇಶ್ವರಸ್ವಾಮಿ ದೇವಾಲಯದ ಗೋಪುರದ ಮೇಲೆ ಏರಿ ವ್ಯಕ್ತಿಯೋರ್ವ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ನಡೆದಿದೆ.



ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ಮೂಲದ ಮೃತ್ಯುಂಜಯ ಎಂಬಾತನೇ ಆತ್ಮಹತ್ಯೆಗೆ ಯತ್ನಿಸಿದ ಮಾನಸಿಕ ಅಸ್ವಸ್ಥ ಎಂದು ಹೇಳಲಾಗಿದೆ. ಶ್ರೀ ಕ್ಷೇತ್ರದ ಮಾದಪ್ಪ ದೇವಾಲಯದ ಗೋಪುರ ಏರಿದ ಆತನನ್ನು ನೆರೆದಿದ್ದ ಭಕ್ತ ಸಮೂಹ ಕೆಳಗಿಳಿಯುವಂತೆ ಕೇಳಿ ಕೊಂಡರು ಯಾವುದಕ್ಕೂ ಕಿವಿಗೊಡದೆ ಗೋಪುರದ ಮೇಲೆ ಮೇಲೆ ಏರುತಿದ್ದ. ಈ ಬಗ್ಗೆ ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ಆಗಮಿಸಿ ಆತನನ್ನು ಮನವೊಲಿಸಿ ಕೆಳಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈತ ಪಂಚೆ ಬಿಟ್ಟರೆ ಮೈಮೇಲೆ ಮತ್ಯಾವ ಬಟ್ಟೆ ಇಲ್ಲದೆ ಮಾನಸಿಕ ಅಸ್ವಸ್ಥನಂತೆ ವರ್ತಿಸಿದ್ದ ಎನ್ನಲಾಗಿದೆ. ನಂತರ ಪೊಲೀಸರೇ ಬಟ್ಟೆ ಕೊಡಿಸಿ, ಬಸ್ ಚಾರ್ಜ್ ಗೆ ಹಣ ನೀಡಿ ಗ್ರಾಮಕ್ಕೆ ವಾಪಸ್ ಕಳಿಸಿಕೊಟ್ಟಿದ್ದಾರೆ.

ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 13-04-2025

ಜನರ ಮನಸ್ಸಲ್ಲಿ ಸ್ಥಾನ ಪಡೆದೆ; ಆದರೆ, ಅವರ ಮತ ಪಡೆಯಲಾಗಲಿಲ್ಲ...!



● ಎಂ.ಬಿ.ಪವನ್‌ಮೂರ್ತಿ

ಡಿ.ಮಾದೇಗೌಡ

ಮೈಸೂರು ನಗರ ವಿಶ್ವಸ್ಥ ಮಂಡಳಿ (ಸಿಐಟಿಬಿ) ಮಾಜಿ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ 'ಮನೆ' ಡಿ.ಮಾದೇಗೌಡರು, ಮೈಸೂರಿನ ಕುಂಬಾರಕೊಪ್ಪಲಿನ ಹಿರಿಯ ಮುಖಂಡರು. ಇವರಿಗೆ ಈಗ ಎಂಭತ್ತ ಮೂರು ವಯಸ್ಸು. ಇವರು ಸಿಐಟಿಬಿ ಅಧ್ಯಕ್ಷರಾಗಿದ್ದಾಗ ರೂಪಿಸಿದ ಆಶಾಮಂದಿರ ಯೋಜನೆ ಅತ್ಯಂತ ಮಹತ್ವದ್ದು. ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಪಕ್ಷ ಸರ್ಕಾರದ ಅವಧಿಯಲ್ಲಿ ಸಿಐಟಿಬಿ ಅಧ್ಯಕ್ಷರಾಗಿ ನೇಮಕಗೊಂಡ ಇವರು, ಸೂರಿಲ್ಲದವರಿಗೆ ಸೂರು ಕಲ್ಪಿಸಲು ಆಶಾಮಂದಿರ ಯೋಜನೆ ಅನುಷ್ಠಾನಗೊಳಿಸಿ, 'ಮನೆ ಮನೆ ಮಾದೇಗೌಡ್ರು' ಹೆಸರಿನಿಂದ ಖ್ಯಾತನಾಮರಾದರು.

ಮಲೆ ಮಹದೇಶ್ವರಸ್ವಾಮಿಯ ಮಹಾ ಭಕ್ತರಾದ ಇವರು, ರಾಮಕೃಷ್ಣ ಪರಮಹಂಸ, ಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಹಾಗೂ ಜನಪರ ಕಾಳಜಿಯೊಂದಿಗೆ ಸದಾ ಸಮಾಜಕ್ಕೆ ಸ್ಪಂದಿಸುತ್ತಾ ಬಂದಿದ್ದಾರೆ. ಸಮಾಜಕ್ಕೆ ನೀಡಿದ ಅನನ್ಯ ಸೇವೆಗಾಗಿ ಇವರಿಗೆ 2022ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯೂ ಸಂದಿದೆ. ಜೊತೆಗೆ ಹತ್ತಾರು ಪ್ರಶಸ್ತಿ-ಪುರಸ್ಕಾರಗಳೂ ಲಭಿಸಿವೆ.

ಇದೀಗ ಮಾದೇಗೌಡರ ಯಶೋಗಾಥೆ, ಸಮಾಜ ಸೇವೆಯ ಸ್ಮರಿಸುತ್ತಾ, 'ಉಘೇ ಮಾದೇಗೌಡ್ರುಗೆ' ಶೀರ್ಷಿಕೆಯಡಿ ಏ.13ರಂದು ಸಂಜೆ 4 ಗಂಟೆಗೆ ಮೈಸೂರಿನ ಕಲಾಮಂದಿರದಲ್ಲಿ ಅಭಿನಂದನೆ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ ಏರ್ಪಡಿಸಿದ್ದು, ತನ್ನಿಮಿತ್ತ 'ಮೈಸೂರು ಮಿತ್ರ' ಅವರೊಂದಿಗೆ ನಡೆಸಿದ ಕಿರು ಸಂದರ್ಶನ ನಮ್ಮ ಓದುಗರು ಹಾಗೂ ಮಾದೇಗೌಡರ ಅಭಿಮಾನಿಗಳಿಗಾಗಿ...

ಮೈಸೂರು ಮಿತ್ರ: ತಾವು ಆಶಾಮಂದಿರ ಯೋಜನೆ ಅನುಷ್ಠಾನದಲ್ಲಿ ಯಶಸ್ವಿಯಾದವರು. ಸಮಾಜ ಸೇವಾ ಮನೋಭಾವದಿಂದ ಸಮಾಜಕ್ಕೆ ಸ್ಪಂದಿಸಿದವರು. ಇಷ್ಟೆಲ್ಲಾ ಇದ್ದೂ ರಾಜಕಾರಣದಲ್ಲಿ ನಿರೀಕ್ಷಿತ ಯಶಸ್ಸು ಸಿಗಲಿಲ್ಲ ಎಂದು ನಿಮಗೆ ಅನ್ನಿಸುವುದಿಲ್ಲವೇ?

ಡಿ.ಮಾದೇಗೌಡರು: ಇತಿಹಾಸ ಗಮನಿಸಿ, ಈ ರೀತಿ ಸೇವೆ ಮಾಡಿದವರು ಉನ್ನತ ಸ್ಥಾನ ಅಲಂಕರಿಸಿರುವುದು ವಿರಳ. ನನ್ನ ಸೇವೆ ಸಂದಿದ್ದು ದುರ್ಬಲ ವರ್ಗಕ್ಕೆ. ಈ ವರ್ಗ ಆರ್ಥಿಕವಾಗಿ ಮಾತ್ರವಲ್ಲದೆ, ವ್ಯವಸ್ಥೆ ರೂಪಿಸುವಲ್ಲಿಯೂ ದುರ್ಬಲರು. ಜನರ ಮನಸ್ಸು ಗೆದ್ದೆ. ಆದರೆ ಅವರ ಮತ (ಓಟ್) ಗೆಲ್ಲಲು ಸಾಧ್ಯವಾಗಲಿಲ್ಲ. ಅವರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿದ್ದೇನೆ ಎಂಬ ತೃಪ್ತಿ ಇದೆ. ಮತದ ಮೌಲ್ಯ ಪ್ರಸ್ತುತ ಏನಾಗಿದೆ ಎಂಬುದನ್ನು ನೀವೇ ಹೇಳಬೇಕು.

ಮೈಸೂರು ಮಿತ್ರ: ನಿಮ್ಮ ರಾಜಕೀಯ ಗುರುಗಳು ಯಾರು? ನಿಮ್ಮ ಆರಂಭದ ರಾಜಕೀಯ ಜೀವನ ಹೇಗಿತ್ತು?

ಡಿ.ಮಾದೇಗೌಡರು: ಮಾಜಿ ಸಚಿವ ಕೆ.ಪುಟ್ಟಸ್ವಾಮಿ ಅವರು ನನ್ನ ರಾಜಕೀಯ ಗುರುಗಳು. ನನ್ನ ತಂದೆ ದೊಡ್ಡತಮ್ಮಯ್ಯನವರು ಅವರ ಒಡನಾಡಿಗಳು. ಜನತಾ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ಚುನಾವಣಾ ಪ್ರಚಾರಕ್ಕಾಗಿ ಮೈಸೂರು ನಗರದ ಗಲ್ಲಿ ಗಲ್ಲಿ ಸುತ್ತಿದ್ದೆ. ಆಗ ಜನರ ಬವಣೆಗಳನ್ನು ಹತ್ತಿರದಿಂದ ನೋಡಿದ್ದೆ. ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಮೊದಲಾದ ಕಡೆಗಳಲ್ಲಿ ಸಣ್ಣ ಸಣ್ಣ ಮನೆಗಳಲ್ಲಿ ಜನ ಜೀವನ ಸಾಗಿಸುತ್ತಿರುವುದನ್ನು ನೋಡಿದ್ದೆ. ಎಷ್ಟೋ ಜನ ಮನೆಯ ಒಳಗೆ ಮಲಗಲು ಸ್ಥಳವಿಲ್ಲದೆ ಹೊರಾವರಣದಲ್ಲಿ ಮಲಗುತ್ತಿದ್ದರು. ಈ ವೇಳೆಯಲ್ಲೇ ಇಂತಹವರಿಗೆ ಸೂರು ಕಲ್ಪಿಸಲು ಆಶಾಮಂದಿರದ ರೂಪುರೇಷೆಗಳು ನನ್ನ ಮನದಲ್ಲಿ ಚಿಗುರೊಡೆದವು.

ಮೈಸೂರು ಮಿತ್ರ: ಅಭಿನಂದನೆ ಸಮಾರಂಭ ಹಾಗೂ ಅಭಿನಂದನಾ ಗ್ರಂಥದ ಬಗ್ಗೆ ಏನು ಹೇಳುವಿರಿ?

ಡಿ.ಮಾದೇಗೌಡರು: ಕರ್ನಾಟಕ ಸಂಘ ಮಂಡ್ಯ ದಿಂದ ಅಭಿನಂದನಾ ಗ್ರಂಥ ಪ್ರಕಟವಾಗುತ್ತಿದೆ. ಹೆಬ್ಬಾಳಿನ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಉದ್ಘಾಟನೆ ವೇಳೆ ಅಭಿನಂದನಾ ಗ್ರಂಥ ರಚನೆ ಪ್ರಸ್ತಾಪವಾಗಿತ್ತು. ಆಶಾಮಂದಿರ ಯೋಜನೆ ಸೇರಿದಂತೆ ನನ್ನ ಯಶೋಗಾಥೆಗಳನ್ನು ಬರವಣಿಗೆಯಲ್ಲಿ ದಾಖಲಿಸಬೇಕೆಂಬ ಅಭಿಪ್ರಾಯವು ಹಿತೈಷಿಗಳಿಂದ ವ್ಯಕ್ತವಾಗಿ, ಇದೀಗ ಅಭಿನಂದನಾ ಸಮಾರಂಭದ ಹಂತಕ್ಕೆ ಬಂದಿದೆ.

ಮೈಸೂರು ಮಿತ್ರ ನೀವು ಬಿಎ, ಬಿಎಲ್ ಪದವೀಧರರು. ರಾಜಕಾರಣಕ್ಕೆ ಬರುವ ಮೊದಲಿನ ವೃತ್ತಿಜೀವನ ಹೇಗಿತ್ತು?

ಡಿ.ಮಾದೇಗೌಡರು: ಆರಂಭದಲ್ಲಿ ವಕೀಲ ವೃತ್ತಿ, ಅದಕ್ಕೂ ಮೊದಲು ನಾನು ಹೆಚ್‌ಡಿ ಕೋಟೆ ತಾಲೂಕಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದ್ದೆ. ನಂತರ ಮೂರು ವರ್ಷಗಳ ಕಾಲ ಕಾರ್ಮಿಕ ಕಲ್ಯಾಣ ಅಧಿಕಾರಿಯಾಗಿ ಕೆಆರ್ ಮಿಲ್‌ನಲ್ಲಿ ಕಾರ್ಯನಿರ್ವಹಿಸಿದೆ. ಬಳಿಕ ಸರ್ಕಾರಿ ಗೆಜೆಟೆಡ್ ಅಧಿಕಾರಿಯಾದೆ. ಡಿಸ್ಟ್ರಿಕ್ ಎಂಪ್ಲಾಂಯ್‌ಮೆಂಟ್ ಆಫೀಸರ್ ಆಗಿ ಚಿಕ್ಕಮಗಳೂರಿನಲ್ಲಿ ಮೂರು ವರ್ಷ, ಮಂಡ್ಯದಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದೆ ನಂತರ ರಾಜೀನಾಮೆ ಕೊಟ್ಟು ರಾಜಕಾರಣಕ್ಕೆ ಬಂದೆ.

ಮೈಸೂರು ಮಿತ್ರ: ಮೈಸೂರಿನ ಅಂದಿನ ಸಿಐಟಿಬಿ (ಇಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಅಧ್ಯಕ್ಷರಾಗಿ 9 ಬಡಾವಣೆ ನಿರ್ಮಿಸಿ ಸೂರಿಲ್ಲದವರಿಗೆ ಸೂರು ಕಲ್ಪಿಸಿದ ಕೀರ್ತಿ ನಿಮ್ಮದು. ಆಶಾಮಂದಿರ ಯೋಜನೆ ಅನುಷ್ಠಾನ ಯಶಸ್ವಿಯಾಗಿದ್ದರ ಬಗ್ಗೆ ಹೇಳುವಿರಾ?

ಡಿ.ಮಾದೇಗೌಡರು: ಆಶಾಮಂದಿರ ಯೋಜನೆ ಪ್ರಮುಖವಾದುದು. ಬಹಳ ಯಶಸ್ವಿಯಾಗಿ ಅನುಷ್ಠಾನ ಮಾಡಿದ ಯೋಜನೆ. ಅಂದು ವಿಶ್ವ ಸಂಸ್ಥೆಯು ಅಂತಾರಾಷ್ಟ್ರೀಯ ವಸತಿ ವರ್ಷವೆಂದು ಘೋಷಣೆ ಮಾಡಿತು. ನನಗೆ ಇದೇ ನೆಪವಾಯಿತು. ಆಶಾಮಂದಿರ ಕುರಿತು ಅಷ್ಟರಲ್ಲಾಗಲೇ ರೂಪುರೇಷೆ ಸಿದ್ಧಪಡಿಸಿಕೊಂಡಿದ್ದೆ. 1986ರಲ್ಲಿ ಸಿಐಟಿಬಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗಲೇ, ನನ್ನ ಮೂರು ವರ್ಷಗಳ ಅವಧಿಯಲ್ಲಿ ಸೂರಿಲ್ಲದ ಸಾವಿರಾರು ಜನರಿಗೆ ಸೂರು ಕಲ್ಪಿಸುತ್ತೇನೆಂದು ಘೋಷಣೆ ಮಾಡಿದೆ.

ನಾನು ಮೈಸೂರು ನಗರದಲ್ಲಿ ಹುಟ್ಟಿ ಬೆಳೆದವನು. ಆದ್ದರಿಂದ ಮೈಸೂರಿನ ಪರಿಚಯ ನನಗೆ ಚೆನ್ನಾಗಿತ್ತು. ಜೊತೆಗೆ ಅದಾಗಲೇ 2 ದಶಕಗಳ ಕಾಲ ರಾಜಕಾರಣ ಮಾಡಿದ್ದೆ. ಅಲ್ಲದೆ, ನಮ್ಮ ತಂದೆ 20 ವರ್ಷಗಳಿಗೂ ಅಧಿಕ ಕಾಲ ಪುರಸಭೆ ಸದಸ್ಯರಾಗಿದ್ದರು. ಒಂದು ಅವಧಿಗೆ ಉಪಾಧ್ಯಕ್ಷರೂ ಆಗಿದ್ದರು. ಮೂರು ವರ್ಷಗಳು ಅವರು ಸಿಐಟಿಬಿ ಸದಸ್ಯರೂ ಆಗಿದ್ದರು.

ಮೈಸೂರು ಮಿತ್ರ: ಅಂದು ಆಶಾಮಂದಿರ ಯೋಜನೆ ಅನುಷ್ಠಾನದಲ್ಲಿ ನಿಮಗೆ ಎದುರಾದ ಸವಾಲುಗಳೇನು? ಆಗಿನ ಮೈಸೂರು ಹೇಗಿತ್ತು?

ಡಿ.ಮಾದೇಗೌಡರು: ಸೂರಿಲ್ಲದವರಿಗೆ ಸೂರು ಕಲ್ಪಿಸುವಲ್ಲಿ ಬಹುಮುಖ್ಯವಾಗಿ ಅವರ ಕೈಗೆಟಕುವ ದರ ಇರಬೇಕೆಂದು ನಿರ್ಧಾರ ಮಾಡಿದೆ. ಆಗ ಮೈಸೂರು ನಗರದಲ್ಲಿ 57 ವಾರ್ಡ್‌ಗಳಿದ್ದವು. ಬ್ಯಾಂಕ್ ಶಾಖೆಗಳಲ್ಲಿ ಎರಡು ಮೂರು ವಾರ್ಡ್‌ನಲ್ಲಿರುವ ಜನರು ಅರ್ಜಿ ಪಡೆದು ಸಲ್ಲಿಸುವಂತೆ ವ್ಯವಸ್ಥೆ ಮಾಡಲಾಯಿತು. ಜೊತೆಗೆ ಹುಡ್ಕೋ ಸಂಸ್ಥೆ ಸಂಪರ್ಕ ಮಾಡಿ, ಸುಮಾರು 6,500 ಮನೆ ನಿರ್ಮಾಣಕ್ಕೆ ಅಗತ್ಯವಿದ್ದ 15 ಕೋಟಿ ರೂ. ನೆರವು ಪಡೆಯಲಾಯಿತು.

45 ಸಾವಿರ ಅರ್ಜಿ ಬಂದವು. ಅಷ್ಟೂ ಅರ್ಜಿಗಳಲ್ಲಿ ನಿಜಕ್ಕೂ ಯಾರಿಗೆ ಸೂರು ಅಗತ್ಯವಿದೆ ಎಂದು ಪರಿಶೀಲನೆಗಾಗಿ ಸಾರ್ಟ್‌ಔಟ್ ಪ್ರಕ್ರಿಯೆ ಪ್ರಾರಂಭ ಮಾಡಿದೆ. ವಾರ್ಡ್‌ವಾರು ಸಭೆಗಳನ್ನು ನಡೆಸಿ ಮುಂದುವರೆಯಲಾಯಿತು. ಸೂರು ಇದ್ದೂ ಅರ್ಜಿ ಹಾಕಿದ್ದರೆ, ಅದನ್ನು ವಾಪಸ್ಸು ಪಡೆಯುವಂತೆ ಮನವಿ ಮಾಡಿದ್ದೆ.

ಆಶಾಮಂದಿರ ಯೋಜನೆಯನ್ನು ಮೂರು ವಿಧದಲ್ಲಿ ವಿಂಗಡಿಸಿದೆ. ನಿವೇಶನ ಕಲ್ಪಿಸಿ ಅವರೇ ಮನೆ ಕಟ್ಟಲು ಅನುವು ಮಾಡುವುದು, ಜೊತೆಗೆ ಬ್ಯಾಂಕ್ ಸಾಲದ ವ್ಯವಸ್ಥೆ ಮಾಡುವುದು ಹಾಗೂ ನಾಲ್ಕು ಕಂತಿನಲ್ಲಿ ಹಣ ಪಾವತಿಸಿದರೆ ಅವರು ಬಯಸಿದ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಡುವುದು ಹಾಗೂ ಹುಡ್ಕೋ ಅಡಿ ಮನೆ ಹೊಂದುವುದು ಹೀಗೆ ಯೋಜನೆ ವಿಂಗಡಿಸಲಾಯಿತು.

ಮೈಸೂರು ಮಿತ್ರ: ಯೋಜನೆಗೆ ಅಗತ್ಯವಿದ್ದ ಭೂಮಿ ಸ್ವಾಧೀನ ಹಾಗೂ ಪರಿಹಾರದ ಕ್ರಮಗಳು ಹೇಗಿತ್ತು?


ಡಿ.ಮಾದೇಗೌಡರು: ಅಂದು ಮೂರು ಸಾವಿರ ಎಕರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಯಿತು. ರೈತರಿಗೆ ಸೂಕ್ತ ಪರಿಹಾರ ಹಾಗೂ ಅವರು ಭೂಮಿ ನೀಡಿದ್ದಕ್ಕೆ ಪರಿಹಾರ ನಿವೇಶನ ಕೊಡುವ ವ್ಯವಸ್ಥೆ ಸಹ ಮಾಡಲಾಯಿತು. ಅವರ ಹೆಸರಿಗೆ ಖಾತೆ ಸಹ ಮಾಡಿಸಿದೆ. ಏಕೆಂದರೆ ಬಹುತೇಕರಲ್ಲಿ ಅವರ ಜಮೀನು ಅವರ ತಾತನ ಹೆಸರಿನಲ್ಲೇ ಖಾತೆ ಇರುತ್ತಿತ್ತು. ಖಾತೆ ಅವರ ಹೆಸರಿನಲ್ಲಿ ಇಲ್ಲದೇ ಪರಿಹಾರ ನೀಡಲು ಬಾರದ ಹಿನ್ನೆಲೆಯಲ್ಲಿ ಅಂದು ಸರ್ಕಾರದ ಕಂದಾಯ ಇಲಾಖೆ ವತಿಯಿಂದ ಹಳ್ಳಿಗಳಲ್ಲಿ ಶಿಬಿರ ಏರ್ಪಡಿಸಿ ಅಭಿಯಾನ ದೋಪಾದಿ ಖಾತೆ ಮಾಡಿಸಿಕೊಡಲಾಯಿತು. ಹೀಗೆ ಮೈಸೂರಿನಲ್ಲಿ 9 ಬಡಾವಣೆಗಳನ್ನು ನಿರ್ಮಿಸಲು ಸಾಧ್ಯವಾಯಿತು.

ನೀರು, ರಸ್ತೆ ಒಳಚರಂಡಿ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸುವ ಜೊತೆಗೆ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೂ ಚಾಲನೆ ನೀಡಲಾಯಿತು. ಇದಕ್ಕಾಗಿ 5 ಲಕ್ಷ ರೂ. ಅನ್ನು ಅರಣ್ಯ ಇಲಾಖೆಗೆ ಪಾವತಿ ಮಾಡಲಾಗಿತ್ತು. ನಾವು ಸೂಚಿಸುವ ಸ್ಥಳದಲ್ಲಿ ಗಿಡಗಳನ್ನು ನೆಡಲಾಯಿತು.

ಮೈಸೂರು ಮಿತ್ರ: ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಗಾಗಿ ನಡೆದ ಹೋರಾಟದಲ್ಲಿ ತಾವು ಮುಂಚೂಣಿಯಲ್ಲಿದ್ದವರು. ಈ ಹೋರಾಟದ ಬಗ್ಗೆ ಹೇಳುವಿರಾ?

ಡಿ.ಮಾದೇಗೌಡರು: ಪ್ರಾಧಿಕಾರ ರಚನೆಯ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟೆವು. ಹೋರಾಟಕ್ಕೂ ಸಜ್ಜಾಗಿದ್ದೆವು. 2012ರಲ್ಲಿ ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಸಮಾವೇಶ ನಡೆಸಿ, ಮಹದೇಶ್ವರಸ್ವಾಮಿಯ 10 ಸಾವಿರಕ್ಕೂ ಹೆಚ್ಚು ಭಕ್ತರನ್ನು ಸೇರಿಸಲಾಯಿತು. ಎಲ್ಲಾ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವಂತೆ ನೋಡಿಕೊಳ್ಳಲಾಯಿತು. ತಿರುಪತಿ ಮಾದರಿಯಲ್ಲಿ ಸ್ವತಂತ್ರವಾದ ಪ್ರಾಧಿಕಾರ ಆಗಬೇಕೆಂಬ ಬೇಡಿಕೆ ಮುಂದಿಟ್ಟೆವು. ಸರ್ಕಾರ ಸಮ್ಮತಿಸಿ ಪ್ರಾಧಿಕಾರ ರಚಿಸಿತು. ಇದರಿಂದ ಈಗ ಮಲೈ ಮಹದೇಶ್ವರ ಬೆಟ್ಟದಲ್ಲಿದ್ದ ಅನೇಕ ಸಮಸ್ಯೆಗಳು ನಿವಾರಣೆಯಾಗಿವೆ ಬೆಟ್ಟದಲ್ಲಿ ಆದಾಯ ಕೂಡ ಹೆಚ್ಚಾಗಿದೆ

ವಾರಭವಿಷ್ಯ



13.04.2025 ರಿಂದ 19.04.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೀನ, ಮೇಷ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಕುಜ-ಕಟಕ, ಬುಧ - ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.

ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನೀವು ಸರಿದಾರಿಯಲ್ಲಿ ನಡೆದರೂ ಎಡವಟ್ಟುಗಳು ಸಂಭವಿಸಲು ವ್ಯಯಸ್ಥಾನದಲ್ಲಿ ಉಂಟಾಗಿರುವ 'ಪಂಚಗ್ರಹ' ಯೋಗವು ಕಾರಣವಾಗಿದೆ. ಹಲವು ಮೂಲಗಳಿಂದ ಧನ ಸಂಪಾದನೆಯಾದರೂ ಸುಖವನ್ನು ಅನುಭವಿಸಲಾರಿರಿ. ವಾರ ಮಧ್ಯೆ ಉದ್ಯೋಗ ಅರಸುವವರಿಗೆ ಶುಭ ಸುದ್ದಿ ಬಂದೀತು. ರಫ್ತು ವ್ಯಾಪಾರಿಗಳಿಗೆ ಹೆಚ್ಚಿನ ಧನ ಗಳಿಕೆ. ವಾರಾಂತ್ಯಕ್ಕೆ ಮನೆದೇವರ ದರ್ಶನ.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ದೇಹ ಸೌಖ್ಯ, ಮಿತ್ರರ ಮಿಲನ, ಸಂತೋಷ ಕೂಟಗಳು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡಬೇಕು, ಆಲಸ್ಯದಿಂದ ನಿರೀಕ್ಷಿತ ಫಲ ದೊರೆಯದು. ವಾರ ಮಧ್ಯೆ ಬೇಡದ ವಿಚಾರಗಳಿಗೆ ಖರ್ಚುಗಳು ಎದುರಾಗುವುದು. 'ದುರ್ಭಿಕ್ಷದಲ್ಲಿ ಅಧಿಕ ಮಾಸ' ಎಂಬಂತೆ ಸಾಲಕೊಟ್ಟು ಕೈ ಸುಟ್ಟುಕೊಳ್ಳದಿರಿ. ತೆರಿಗೆ ಅಧಿಕಾರಿಗಳ ಕಿರುಕುಳ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಇಷ್ಟಾರ್ಥ ಸಿದ್ಧಿ. ಪುಣ್ಯ ಕಾರ್ಯಗಳನ್ನು ಮಾಡುವುದರಿಂದ ಪ್ರಸಿದ್ಧಿಗೆ ಬರುವಿರಿ. ರೇಷ್ಮೆ ಬೆಳೆಗಾರರಿಗೆ ಉತ್ತಮ ಬೆಲೆ ದೊರಕುವುದು. ಸರ್ಕಾರಿ ಕಚೇರಿಗಳಿಗೂ, ನ್ಯಾಯಾಲಯಗಳಿಗೂ ವ್ಯಥಾ ತಿರುಗಾಟ. ದುಡುಕಿನ ನಿರ್ಧಾರಗಳಿಗೆ ಬೆಲೆ ತೆರಬೇಕಾಗುತ್ತದೆ. ಪ್ರೇಮ ಪ್ರಸಂಗಗಳಲ್ಲಿ ನಿರಾಸೆ ಉಂಟಾಗುವುದು. ಸಟ್ಟಾ, ಜೂಜುಗಳು ಲಾಭ ತರದು.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಸಣ್ಣ ಪುಟ್ಟ ಅನಾರೋಗ್ಯ ಕಾಡಬಹುದು. ಶತ್ರುಗಳು ಮಿತ್ರರಾಗಲು ಬಯಸಿದರೆ ತಿರಸ್ಕರಿಸಬೇಡಿ. ವಾರ ಮಧ್ಯೆ ನಿಮ್ಮ ಹಿತ ಚಿಂತಕರೊಂದಿಗೆ ಸಮಾಗಮ. 'ಹಂಗಿನ ಹಾಲಿಗಿಂತ ಸ್ವಂತದ ಅಂಬಲಿ ಲೇಸು' ಎಂಬಂತೆ ಇರಲು ಪ್ರಯತ್ನಿಸಿ. ಶುಕ್ರ-ಬುಧರ ಸಂಯೋಗ ನೀವು ಹೊಸ ಮಜಲನ್ನು ಏರಲು ಅನುಕೂಲಕರವಾಗಿದೆ. ನಿಮ್ಮ ನಿರಂತರ ಪ್ರಯತ್ನ ಫಲಿಸುವುದು. ಅಕಾಲ ಭೋಜನದಿಂದ ವಾಯು ಪ್ರಕೋಪ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಜಗದಲ್ಲಿ ನಡೆಯುವುದೆಲ್ಲ ಜಗದೀಶನ ಇಚ್ಛೆ'. ವನಿತಾಮಣಿಯರು ಅಲಂಕಾರಿಕ ವಸ್ತುಗಳಿಗೆ ಹೇರಳ ಧನ ವ್ಯಯಿಸುವರು. ವಾರ ಮಧ್ಯೆ ಅಧಿಕಾರಿಗಳ ಅನುಗ್ರಹ, ಪ್ರಭುಗಳಿಂದ ಸನ್ಮಾನ, ವ್ಯಾಪಾರಸ್ಥರಿಗೆ ಎದುರಾಳಿಗಳ ಉಪಟಳದಿಂದ ಹಿನ್ನಡೆ ಉಂಟಾಗುವುದು. ರಿಯಲ್ ಎಸ್ಟೇಟ್ ಹೂಡಿಕೆದಾರರು ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಮುಂದುವರೆಯಿರಿ. ಕುಟುಂಬ ಸಮಸ್ಯೆಗಳನ್ನು ಮನೆಯಲ್ಲಿ ಪರಿಹರಿಸಿಕೊಳ್ಳಿ.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಮಾನಸಿಕ ಒತ್ತಡಗಳು ನಿವಾರಣೆ ಆಗುವುದು. ಅಂದುಕೊಂಡ ವಿಚಾರಗಳು ನಿಮ್ಮ ಮನಸ್ಸಿನಂತೆ ನಡೆಯುವುದು. ದೇಹಾರೋಗ್ಯ ಸುಧಾರಿಸುವುದು. ಹೊಸ ಒಡಂಬಡಿಕೆಗಳಿಗೆ ಸಹಿ ಮಾಡಬಹುದು. ಜಲಜನ್ಯ ವಸ್ತು ಮಾರಾಟಗಾರರಿಗೆ ಕೈತುಂಬಾ ಸಂಪಾದನೆ ಆಗುವುದು. ರಾತ್ರಿ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ಘಟಿಸಲಿವೆ. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಕಂಪನಿ ಬದಲಾವಣೆಯಿಂದ ಆದಾಯದಲ್ಲಿ ಹೆಚ್ಚಳ. ವ್ಯಾಪಾರ, ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡು ಬರುವುದು. ಕೈಗೆತ್ತಿಕೊಂಡ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುತ್ತದೆ. ಮನೆಯಲ್ಲಿ ಧಾರ್ಮಿಕ ಆಚರಣೆಗಳು ನಡೆಯುತ್ತವೆ.

ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಯುವಕ, ಯುವತಿಯರಿಗೆ ಉನ್ನತ ವ್ಯಾಸಂಗದಿಂದ ಕೀರ್ತಿ. ಮಾತೃಶ್ರೀಯವರ ಆಶೀರ್ವಾದದಿಂದ ಗೃಹ, ನಿವೇಶನ ಖರೀದಿಗೆ ಪ್ರೇರಣೆ. ಐಷಾರಾಮಿ ವಸ್ತುಗಳು ಮನೆಗೆ ಬರುವುದು. ಕ್ಷೀರಜನ್ಯ ವಸ್ತು, ಈ ವ್ಯಾಪಾರಿಗಳಿಗೆ ಕೈ ತುಂಬಾ ಸಂಪಾದನೆ ಆಗುವುದು. ಕೇಟರಿಂಗ್ ವ್ಯವಹಾರಿಗಳಿಗೆ ಹೆಚ್ಚಿನ ಬೇಡಿಕೆ ಹಾಗೂ ಧನ ಸಂಚಯವಾಗುವುದು. ಸಾರ್ವಜನಿಕರಲ್ಲಿ ತಾಳ್ಮೆಯಿಂದ ವರ್ತಿಸಿ. ಆತುರದ ವಾಹನ ಡ್ರೈವಿಂಗ್ ತೊಂದರೆಗೆ ಆಹ್ವಾನ.

ಶ್ರೀ ನೃಸಿಂಹಸ್ವಾಮಿ ಉಪಾಸನೆ, ಶುಭ ಸಂಖ್ಯೆ-9

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆರಂಭಕ್ಕೆ ಸ್ನೇಹಿತರೊಡನೆ ವ್ಯವಹಾರದ ಮಾತುಕತೆ. ವಿದ್ಯಾ ಸಂಸ್ಥೆಗಳಿಗೆ ಬಿರುಸಿನ ಚಟುವಟಿಕೆಗಳು ಅನಿರೀಕ್ಷಿತ ಧನಲಾಭವಾದೀತು. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ದೊರೆಯುವ ಸಾಧ್ಯತೆ. ಸಾರಿಗೆ ವ್ಯವಸ್ಥೆ ನಡೆಸುವವರಿಗೆ ಉತ್ತಮ ವರಮಾನವಾಗುವುದು. ಉದ್ಯೋಗ ಸಂಬಂಧಿ ಸಂದರ್ಶನಗಳು ಸಫಲವಾಗಲಿದೆ. ಕೇಳಿಸಿಕೊಂಡಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. ದೇಹದಲ್ಲಿ ನಿರ್ಬಲತೆ ಕಾಡಿಸುವುದು.

ಶ್ರೀ ದತ್ತಾತ್ರೇಯ ದರ್ಶನ. ಶುಭ ಸಂಖ್ಯೆ-7

ಮಕರ (ಬೊ.ಜ.ಜಿ.ಶಿ.ಖು.ಖೆ.ಖೊ.ಗ.ಗಿ.)

ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಕುಟುಂಬದಲ್ಲಿ ಉಂಟಾಗಿದ್ದ ಗೊಂದಲಗಳು ನಿವಾರಣೆ ಆಗುವುದು. ಮಹತ್ವದ ಕಾರ್ಯಗಳಿಗೆ ಕಾನೂನು ತಜ್ಞರ ಸಲಹೆ ಅಗತ್ಯವಿದೆ. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು ಹಾಗೂ ಚತುರತೆಗಿಂತ ವಿಧಿಯಾಟವೇ ಮೇಲು ಎಂಬುದು ಅರ್ಥವಾಗಲಿದೆ. ನೆರೆಹೊರೆಯಲ್ಲಿ ತಂಟೆ-ತಕರಾರುಗಳಿಗೆ ಅವಕಾಶ ಕೊಡಬೇಡಿ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಜ್ಜನರ ಭೇಟಿಯಿಂದ ಮಾರ್ಗದರ್ಶನ ದೊರೆಯುವುದು. ಸಮಾಜ ಸೇವಾ ಕಾರ್ಯದಲ್ಲಿ ತೊಡಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ವಾರಮಧ್ಯೆ ಸಂಪಾದನೆ ಹೆಚ್ಚುವುದು, ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ. ಮನೋರಂಜನೆಗಾಗಿ ಹೆಚ್ಚಿನ ಹಣ ವ್ಯಯವಾಗುವುದು. ವನಿತಾಮಣಿಯರು ಮಾಂಗಲ್ಯ ಸರ ಪ್ರದರ್ಶನ ಮಾಡದಿರಿ. ವಾರಾಂತ್ಯಕ್ಕೆ ವಾಯು ಪ್ರಕೋಪ ಕಾಡಿಸಬಹುದು.

ಶ್ರೀ ಆಂಜನೇಯ ದರ್ಶನ. ಶುಭ ಸಂಖ್ಯೆ-1

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವ್ಯಾಪಾರದಲ್ಲಿ ಪ್ರಗತಿ. ಬೃಹತ್ ಉದ್ಯಮಿಗಳಿಗೆ ಬಂಪರ್ ಆರ್ಡರ್, ಬ್ಯಾಂಕ್ ಸಾಲದ ಪ್ರಯತ್ನದಲ್ಲಿ ಯಶಸ್ಸು ಯಂತ್ರೋಪಕರಣ ಖರೀದಿ. ಜಾತ್ರಾ ಉತ್ಸವಾದಿಗಳಲ್ಲಿ ಭಾಗಿಯಾಗಿ ಭಕ್ತಿಭಾವ ಸಮರ್ಪಣೆ. ಉತ್ತಮ ಭೋಜನ, ಶಯನ ಸುಖಗಳೂ ಉಂಟು. ನಿಮ್ಮ ರಾಶಿಯಲ್ಲಿ ಐದು ಗ್ರಹಗಳ ಸಮಾವೇಶದಿಂದ ದೇಹದಲ್ಲಿ ಅಸಮತೋಲನ. ಫಾಸ್ಟ್ ಫುಡ್ ಎಂಬ ವೇಸ್ಟ್ ಫುಡ್ ಬೇಡವೇ ಬೇಡಿ.


ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-5

ಮಕ್ಕಳ ಚಿತ್ರಕಥೆ


1965ರ ಕಾಲಮಾನದಲ್ಲಿ...!

■ ಹೆಚ್.ಜಿ.ಎನ್.ಪ್ರಸಾದ್


ಮೊ. 98453 76199




1965 ರ ಕಾಲಮಾನದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ನಮ್ಮ ದೇಶದ ಪ್ರಧಾನಿಯಾಗಿದ್ದರು. ಆ ಸಂದರ್ಭದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಘನ ಘೋರ ಯುದ್ಧ ನಡೆಯುತಿತ್ತು. ಆ ಸಮಯದಲ್ಲಿ ನಮ್ಮ ಸೈನ್ಯದಲ್ಲಿದ್ದ ಹಲವಾರು ಯೋಧರು ವೀರ ಮರಣವನ್ನಪ್ಪಿದ್ದರು. ಹಾಗೆಯೇ ಬಹಳಷ್ಟು ಮಂದಿ ಯೋಧರು ತೀವ್ರವಾಗಿ ಗಾಯಗೊಂಡಿದ್ದರು.




ಗಾಯಗೊಂಡ ಸೈನಿಕರನ್ನು ಹತ್ತಿರದಲ್ಲಿದ್ದ ಮಿಲಿಟರಿ ಆಸ್ಪತ್ರೆಗಳಿಗೆ ಹೆಚ್ಚಿನ ಚಿಕಿತ್ಸೆಗಾಗಿ ಸೇರಿಸಲಾಗುತಿತ್ತು.




ಆ ಸಮಯದಲ್ಲಿ ಶಾಸ್ತ್ರೀಜಿಯವರು ಆಸ್ಪತ್ರೆಗೆ ಭೇಟಿ ನೀಡಿ ಪ್ರತಿಯೊಬ್ಬ ಸೈನಿಕರ ಯೋಗಕ್ಷೇಮ ವಿಚಾರಿಸುತ್ತಾ, ಅವರಿಗೆ ಮನೋಸ್ಥೈರ್ಯ ತುಂಬುತ್ತಾ ಹಾಗೆಯೇ ಮುಂದೆ ಸಾಗುತ್ತಿದ್ದರು.



ತೀವ್ರವಾಗಿ ಗಾಯಗೊಂಡಿದ್ದ ಸೈನಿಕನನ್ನು ಮಂಚದಲ್ಲಿ ಮಲಗಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆತನನ್ನು ಮಾತನಾಡಿಸಲು ಶಾಸ್ತ್ರೀಜಿಯವರು ಬರುತ್ತಿದ್ದಂತೆ ಅವರನ್ನು ಕಂಡ ಆ ಯೋಧ ಜೋರಾಗಿ ಅಳಲಾರಂಭಿಸಿಬಿಟ್ಟ.



ಈ ಅನಿರೀಕ್ಷಿತ ಘಟನೆಯಿಂದ ಕ್ಷಣಕಾಲ ವಿಚಲಿತರಾದ ಶಾಸ್ತ್ರೀಜಿಯವರು ಆ ಸೈನಿಕನಿಗೆ "ಏನಪ್ಪಾ...ನೀನು ನಮ್ಮ ದೇಶದ ಹೆಮ್ಮೆಯ ಸೈನಿಕನಾಗಿದ್ದುಕೊಂಡು ಯಕಶ್ಚಿತ್ ಈ ಗಾಯಗಳ ನೋವಿನಿಂದ ಹೀಗೆ ಅಳುತ್ತಿದ್ದೀಯಾ..?" ಎಂದು ಪ್ರಶ್ನಿಸಿದರು.



ಆಗ ಆ ಯೋಧ ಆ ನೋವಿನಲ್ಲೂ ನಸುನಗುತ್ತಾ "ನಾನು ಅಳುತ್ತಿರುವುದು ನನಗಾಗಿರುವ ಗಾಯದ ನೋವಿನಿಂದಲ್ಲಾ. ನಮ್ಮ ದೇಶದ ಹೆಮ್ಮೆಯ ಪ್ರಧಾನಿಯೊಬ್ಬರು ಎದುರು ಬಂದಾಗ ನನಗೆ ಎದ್ದು ನಿಂತು ಒಂದು ಸೆಲ್ಯೂಟ್ ಮಾಡಲಾಗುತ್ತಿಲ್ಲವಲ್ಲಾ ಅದಕ್ಕಾಗಿ ಸಾರ್...! ಎಂದ.

ವೈಭವದ ಶ್ರೀ ಗುಂಜಾನರಸಿಂಹ ಸ್ವಾಮಿ ಮಹಾ ಬ್ರಹ್ಮ ರಥೋತ್ಸವ

ಮಹಾಲಕ್ಷ್ಮಿ ಸಮೇತ ಗುಂಜಾ ನರಸಿಂಹ ಸ್ವಾಮಿಯನ್ನು ಕಣ್ತುಂಬಿಕೊಂಡ ಸಾವಿರಾರು ಭಕ್ತರು



ತ್ರಿವೇಣಿ ಸಂಗಮ ಕ್ಷೇತ್ರ ತಿ.ನರಸೀಪುರದ ಪ್ರಸಿದ್ಧ ಶ್ರೀ ಗುಂಜಾನರಸಿಂಹ ಸ್ವಾಮಿಯವರ ಮಹಾ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತಾದಿಗಳ ಹರ್ಷೋದ್ಗಾರದ ನಡುವೆ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ತಿ.ನರಸೀಪುರ,ಏ.12– ತ್ರಿವೇಣಿ ಸಂಗಮ ಕ್ಷೇತ್ರ ಹಾಗೂ ದಕ್ಷಿಣ ಕಾಶಿ ಖ್ಯಾತಿಯ ತಿರುಮಕೂಡಲು ನರಸೀಪುರದ ಪ್ರಸಿದ್ಧ ಶ್ರೀ ಗುಂಜಾನರಸಿಂಹ ಸ್ವಾಮಿಯವರ ಮಹಾ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತಾಧಿಗಳ ಹರ್ಷೋದ್ಗಾರದ ನಡುವೆ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ದೇವಸ್ಥಾನದ ಮುಂಭಾಗ ಅಲಂಕೃತಗೊಂಡು ಕಂಗೊಳಿಸುತ್ತಿದ್ದ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ದಿವ್ಯೋತ್ಸವಕ್ಕೆ ಚಾಲನೆ ನೀಡಿದರು.

ಆನಂತರ ದೇವಸ್ಥಾನದ ಮುಂಭಾಗ ವಿವಿಧ ಜಿಲ್ಲೆ ಮತ್ತು ತಾಲೂಕಿನಿಂದ ಆಗಮಿಸಿ ಜಮಾವಣೆಗೊಂಡಿದ್ದ ಸಹಸ್ರಾರು ಭಕ್ತಾಧಿಗಳು ಭಕ್ತಿ ಭಾವದಿಂದ ರಥವನ್ನು ಎಳೆದರು. ದೇವಾಲಯದ ಮುಂಭಾಗದಿಂದ ಆರಂಭಗೊಂಡ ರಥೋತ್ಸವ ವಿಶ್ವ ಕರ್ಮ ರಸ್ತೆ ಪ್ರಾಥಮಿಕ ಶಾಲೆ ರಸ್ತೆ ಮೂಲಕ ಸಂಚರಿಸಿದ ನಂತರ ತೇರಿನ ಬೀದಿಗೆ ಆಗಮಿಸಿ ಯಾವುದೇ ಅಡೆತಡೆ ಇಲ್ಲದೇ ಸ್ವಸ್ಥಾನ ತಲುಪಿತು.

ಅಲಂಕೃತಗೊಂಡಿದ್ದ ರಥದಲ್ಲಿ ವಿರಾಜಮಾನರಾಗಿದ್ದ ಮಹಾಲಕ್ಷ್ಮಿ ಸಮೇತ ಶ್ರೀ ಗುಂಜಾ ನರಸಿಂಹಸ್ವಾಮಿ ಉತ್ಸವ ಮೂರ್ತಿಗಳನ್ನು ಕಂಡು ಪುಳಕಿತರಾದ ಭಕ್ತರು ರಥೋತ್ಸವದ ವೈಭವವನ್ನು ಕಣ್ತುಂಬಿಕೊಂಡರು. ಚಲಿಸುತ್ತಿದ್ದ ರಥಕ್ಕೆ ಹಣ್ಣು ಜವನ ಎಸೆದು ಧನ್ಯತೆ ಮೆರೆದರು. ರಥೋತ್ಸವದ ಹಿನ್ನೆಲೆಯಲ್ಲಿ ಪಟ್ಟಣ ಸೇರಿದಂತೆ ಗುಂಜಾನರಸಿಂಹಸ್ವಾಮಿ ದೇವಸ್ಥಾನ ಜನ ಸಾಗರದಿಂದ ತುಂಬಿಹೋಗಿತ್ತು. ಈ ಬಾರಿ ಯವಕರ ಬಣ್ಣದೋಕುಳಿಗೆ ನಿಷೇಧ ಹೇರಲಾಗಿತ್ತು. ನೆತ್ತಿ ಸುಡುವ ಸುಡು ಬಿಸಿಲಿನ ನಡುವೆಯೂ ಸಹಸ್ರಾರು ಮಂದಿ ಭಕ್ತಾದಿಗಳು ಉತ್ಸವದಲ್ಲಿ ಪಾಲ್ಗೊಂಡು ಭಕ್ತಿ ಭಾವ ಮೆರೆದರು.

ರಥೋತ್ಸವದ ಅಂಗವಾಗಿ ದೇವಾಲಯಗಳಲ್ಲಿ ಬೆಳಿಗ್ಗೆಯಿಂದಲೇ ಪ್ರಧಾನ ಅರ್ಚಕ ಸಂಪತ್ ಕುಮಾರ್, ಆಗಮಿಕ ಡಾ.ರಾಜೀವ್ ನೇತೃತ್ವದಲ್ಲಿ ಧಾರ್ಮಿಕ ಕೈಂಕರ್ಯಗಳು, ಅಭಿಷೇಕ ಉತ್ಸವಗಳು ಸಾಂಗವಾಗಿ ನೆರವೇರಿದವು.

ಸಂಪ್ರದಾಯ ಪಾಲನೆ....!

ಅನೇಕ ವರ್ಷಗಳಿಂದಲೂ ನಡೆದು ಬಂದ ಸಂಪ್ರದಾಯದಂತೆ ವ್ಯಾಸರಾಜಪುರ ಗ್ರಾಮದ ಯಜಮಾನರು ಆಲಗೂಡು ಗ್ರಾಮಕ್ಕೆ ತೆರಳಿ ಅಲ್ಲಿನ ಯಜಮಾನರನ್ನು ರಥೋತ್ಸವದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿ ಅವರನ್ನು ಕರೆತಂದು ಪಟ್ಟಣದ ಯಜಮಾನರ ಜೊತೆಗೂಡಿ ಮಹಾ ಮಂಗಳಾರತಿ ನೆರವೇರಿಸಿ ಪ್ರದಕ್ಷಿಣೆ ಹಾಕಿದರು. ಉತ್ಸವ ಮೂರ್ತಿಗಳಿಗೆ ಮಹಾಮಂಗಳಾರತಿ ನೆರವೇರಿದ ನಂತರ ಬ್ರಹ್ಮ ರಥೋತ್ಸವ ವಿದ್ಯುಕ್ತವಾಗಿ ಆರಂಭವಾಯಿತು.

ಪಟ್ಟಣದೆಲ್ಲೆಡೆ ಪ್ರಸಾದ, ನೀರು ಮಜ್ಜಿಗೆ ಪಾನಕ.....!

ರಥೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ಬೀದಿ ಬೀದಿಗಳಲ್ಲಿ ವಿವಿಧ ಸಂಘಟನೆಯ ಮುಖ್ಯಸ್ಥರು ಪ್ರಸಾದದ ವ್ಯವಸ್ಥೆ ಮಾಡಿದ್ದರು. ಬಾತು, ಮೊಸರನ್ನ,ನೀರು ಮಜ್ಜಿಗೆ ಪಾನಕ ವಿತರಿಸುವ ಮೂಲಕ ಬಿಸಿಲಿನ ಬೇಗೆಯಲ್ಲಿ ಬಳಲಿದ್ದ ಭಕ್ತಾಧಿಗಳ ದಾಹ ನೀಗಿಸಲು ನೆರವಾದರು.



ತಿ.ನರಸೀಪುರದ ಪ್ರಸಿದ್ಧ ಶ್ರೀ ಗುಂಜಾನರಸಿಂಹ ಸ್ವಾಮಿಯವರ ಮಹಾ ಬ್ರಹ್ಮರಥೋತ್ಸವದಲ್ಲಿ ತಹಸೀಲ್ದಾರ್ ಸುರೇಶ ಆಚಾರ್ ರವರು ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್ ಪುರಸಭಾ ಅಧ್ಯಕ್ಷ ವಸಂತ ಶ್ರೀಕಂಠ, ಸಾಮಾಜಿಕ ಸ್ಥಾಯಿಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ ಅವರುಗಳನ್ನು ಸನ್ಮಾನಿಸಿದರು.

ಶ್ರೀ ಗುಂಜಾ ನರಸಿಂಹಸ್ವಾಮಿ ಉತ್ಸವ ಮೂರ್ತಿಯನ್ನು ಪಟ್ಟಣದ ವಿವಿಧ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ರಥದ ಸುತ್ತ ನಾಲ್ಕಾರು ಪ್ರದಕ್ಷಿಣೆ ಹಾಕಿ ನಂತರ ರಥದ ಮೇಲೆ ಕೂರಿಸಿದ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಪಾರುಪತ್ತೆದಾರ್ ತಿರುಮ ಕೊಡಲು ದಿಲೀಪ್ (ದೀಪು), ಪುರಸಭಾ ಅಧ್ಯಕ್ಷೆ ವಸಂತ ಬಿ.ಶ್ರೀಕಂಠ, ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಸಿ. ಪ್ರಕಾಶ್, ಅಧ್ಯಕ್ಷ ಟಿ.ಎಂ.ನಂಜುಂಡ ಸ್ವಾಮಿ, ಎನ್.ಸೋಮು, ಬಸವಣ್ಣ ಎನ್.ಮಹದೇವಸ್ವಾಮಿ, ಸದಸ್ಯ ಬಾದಾಮಿ ಮಂಜು, ಎಸ್.ಕೆ ಕಿರಣ್, ಸ್ವಾಮಿ, ದೇವಸ್ಥಾನದ ಸಮಿತಿಯ ಪುಳ್ಳಾರಿಗೌಡ, ಪುರಸಭೆ ಮುಖ್ಯಾ ಧಿಕಾರಿ ಬಿ.ಕೆವಸಂತಕುಮಾರಿ, ರಾಮಲಿಂಗು, ಆಡಿಟರ್ ಮಂಜು, ಸಿ.ಮಹದೇವ್ವ, ಸ್ವಾಮಿ, ಕರಿಯಪ್ಪ, ರಾಜ್ಯಸ್ವ ನಿರೀಕ್ಷಕ ಮಹೇಂದ್ರ. ಎಸ್.ಎಸ್, ಪೇಂಟ್ಸ್ ಗುರುದತ್, ಆಲಗೂಡು ಘಟಕ ಮಹದೇವು, ನಾಗರಾಜು, ತಿರುಮಕೂಡಲು ಲಕ್ಷ್ಮಣ, ಚೌಹಳ್ಳಿ ಮಲ್ಲೇಶ್, ಮಾದೇಶ್, ಗ್ಯಾಸ್ ಉಮೇಶ್, ದೇವಸ್ಥಾನ ಯಜಮಾನರು ಮುಖಂಡರು ಸೇರಿದಂತೆ ಗ್ರಾಮಸ್ಥರು ರಥೋತ್ಸವದಲ್ಲಿ ಭಾಗವಹಿಸಿದ್ದರು.

ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸುವಂತೆ ಮನವಿ ಸಲ್ಲಿಕೆ



ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ ಅವರಿಗೆ ಮನವಿ ಸಲ್ಲಿಸುತ್ತಿರುವುದು.

ಕೆ.ಆರ್.ನಗರ: ಸರ್ಕಾರದ ಆದೇಶದಂತೆ ಎಲ್ಲಾ ಕಚೇರಿಗಳಲ್ಲಿ ಕಡ್ಡಾಯವಾಗಿ ಡಾ.ಬಿ. ಆರ್.ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸುವುದು ಸೇರಿದಂತೆ ಇತರೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆದಿ ಕರ್ನಾಟಕ ಯುವ ಜನಜಾಗೃತಿ ಮಹಾ ಸಭಾದ ಸಂಸ್ಥಾಪಕ ಅಧ್ಯಕ್ಷ ಡಿ.ರಾಮಯ್ಯ ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು–ಹಾಸನ ರಸ್ತೆ ಬಳಿ ಇರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರ ಭಾವ ಚಿತ್ರವನ್ನು ಕುತ್ತಿಗೆಗೆ ತೂಗು ಹಾಕಿಕೊಂಡು ತಾಲೂಕು ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದು ಮನವಿ ಸಲ್ಲಿಸಿ ಮಾತನಾಡಿದ ಡಿ.ರಾಮಯ್ಯ ಕಂದಾಯ ಇಲಾಖೆಯಲ್ಲಿ ಹತ್ತಾರು ವರ್ಷಗಳಿಂದ ಗ್ರಾಮ ಸಹಾಯಕರಾಗಿ ಕೆಲಸ ಮಾಡುತ್ತಿರುವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಹುದ್ದೆಯನ್ನು ಖಾಯಂಗೊಳಿಸುವ ಮೂಲಕ ಬಡ ಕುಟುಂಬಗಳಿಗೆ ಅನುಕೂಲ ಕಲ್ಪಿಸಬೇಕೆಂದು ಆಗ್ರಹಿಸಿದರು.

ಒಂದು ದಿನ ಮಾತ್ರವಲ್ಲ, ವರ್ಷವಿಡೀ ಅಂಬೇಡ್ಕರ್ ಜಯಂತಿ ಆಚರಿಸಬೇಕು

ಹೆಚ್.ಡಿಕೋಟೆ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿಯನ್ನು ಒಂದು ದಿನ ಆಚರಿಸಿದರೆ ಸಾಲದು, ವರ್ಷ ಪೂರ್ತಿ ಆಚರಿಸುವ ಮೂಲಕ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಶಾಸಕ ಅನಿಲ್ ಕುಮಾರ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಮತ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮ ಹಾಗೂ ಸಮತ ಟ್ರಸ್ಟ್‌ನ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಪಂಚದಲ್ಲಿ ಅತಿ ಹೆಚ್ಚು ಭಾವಚಿತ್ರಗಳು ಇರುವುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಬಾವಚಿತ್ರ ಮಾತ್ರ ಪ್ರಪಂಚದ ಎಲ್ಲಾ ದೇಶಗಳನ್ನು ಸುತ್ತಿ ಭಾರತಕ್ಕೆ ಶ್ರೇಷ್ಠ ಸಂವಿಧಾನವನ್ನು ನೀಡಿದವರು ಅಂಬೇಡ್ಕರ್ ಎಂದರು.

ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸಮುದಾಯಕ್ಕೆ ಮೀಸಲಾತಿ ನೀಡದೆ ಇದ್ದಿದ್ದರೆ ನಾನು ಶಾಸಕನಾಗಿ ಆಯ್ಕೆ ಆಗಲು ಸಾಧ್ಯವಾಗುತ್ತಿರಲಿಲ್ಲ ಇದೇ ತಿಂಗಳು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಂಬೇಡ್ಕರ್ ಜಯಂತಿ ಹಾಗೂ ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದು ಈ ಸಂದರ್ಭದಲ್ಲಿ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿಗಳನ್ನು ಕೋರಲಾಗುತ್ತದೆ ಎಂದರು.

ತಾಲೂಕಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಎಸ್ಸಿ–ಎಸ್ಟಿ ಸಮುದಾಯದವರು. ಇದ್ದು ಉದ್ಯೋಗ ಮೇಳ ನಡೆಸಲಾಗಿದೆ. ತಾಲೂಕಿನ ಜಲ್ವಂತ ಸಮಸ್ಯೆಗಳ ಬಗ್ಗೆ ಈಗಾಗಲೇ ಸದನದಲ್ಲಿ ಮಾತನಾಡಿದ್ದೇನೆ. ಇನ್ನೂ ಒಂದು ವರ್ಷದೊಳಗೆ ಜಲ್ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಎರಡು ತಾಲೂಕಿನಲ್ಲಿ ಪ್ರತಿ ಮನೆಗೂ ಕುಡಿಯುವ ನೀರು ಒದಗಿಸಲಾಗುತ್ತದೆ ಎಂದು ತಿಳಿಸಿದರು.



ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಮತ ಟ್ರಸ್ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಹಾಗೂ ಸಮತ ಟ್ರಸ್ಟ್‌ನ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಶಾಸಕ ಅನಿಲ್ ಕುಮಾರ್ ಉದ್ಘಾಟಿಸಿದರು.

ಜಿಲ್ಲಾ ಎಸ್ಸಿ/ಎಸ್ಟಿ ಉದ್ಯಮಿಗಳ ಸಂಘದ ಜಿಲ್ಲಾ ಅಧ್ಯಕ್ಷ ಮಂಜುನಾಥ್ ಮಾತನಾಡಿ ಆರ್ಥಿಕವಾಗಿ ನಾವು ಚೆನ್ನಾಗಿದ್ದರೆ ಎಲ್ಲರೂ ನಮ್ಮನ್ನು ಗೌರವಿಸುತ್ತಾರೆ. ಪ್ರತಿಯೊಬ್ಬರೂ ಉದ್ಯಮಿಗಳು ಆಗಬೇಕು, ಸ್ವಯಂ ಉದ್ಯೋಗ ಮಾಡಬೇಕು. ವಿದ್ಯಾವಂತರಾಗಿ ನಿರುದ್ಯೋಗಿಗಳಾಗಿ ಮನೆಯಲ್ಲಿ ಕೆಲಸ ಇಲ್ಲದೆ ಕೂರಬೇಡಿ.

ಕಾರ್ಯಕ್ರಮದಲ್ಲಿ ಸಮತ ಟ್ರಸ್ಟ್‌ನ ಗೌರವ ಅಧ್ಯಕ್ಷ ಭೀಮನಹಳ್ಳಿ ಸೋಮೇಶ್, ಅಧ್ಯಕ್ಷ ರವೀಂದ್ರ ಮಲಾರ, ಕುಮಾರ ಸ್ವಾಮಿ, ಪದ್ಮಶ್ರೀ ಪುರಸ್ಕೃತ ಮೊತ್ತ ಸೋಮಣ್ಣ, ಹಿರಿಯ ಹೋರಾಟಗಾರ ಭೀಮನಹಳ್ಳಿ ಮಹಾದೇವ್, ಪುರಸಭಾ ಸದಸ್ಯ ಎಚ್.ಸಿ.ನರಸಿಂಹ ಮೂರ್ತಿ, ಮಿಲ್ ನಾಗರಾಜು, ಜಿಪಂ ಮಾಜಿ ಸದಸ್ಯರುಗಳಾದ ಎಚ್.ಸಿ.ಮಂಜುನಾಥ್, ಚಿಕ್ಕವೀರ ನಾಯಕ, ಮೈಮುಲ್ ನಿರ್ದೇಶಕ ಈರೇಗೌಡ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಮುಖಂಡರುಗಳಾದ ಬಿ.ಟಿ. ವೆಂಕಟೇಶ್, ಎಂ.ಡಿ.ಮಂಚಯ್ಯ, ಜಿವಿಕುಮೇಶ್, ಕಾಡುಮನೆ ಪ್ರಸನ್ನ, ಚಂದ್ರಶೇಖರ ಮೂರ್ತಿ, ಶಿವುಜನ್ಯ, ಶಿವರಾಜು, ಲತಾನಂದ ಕುಮಾರ್, ಮಹೇಶ್, ರಾಘವೇಂದ್ರ, ನಾಗೇಶ್, ಬಸವರಾಜು, ಮಹದೇವ್, ಸಮತ ಟ್ರಸ್ಟ್‌ನ ಕಾರ್ಯದರ್ಶಿ ಮಹೇಶ್, ಖಜಾಂಚಿ ಎಂ.ರಾಘವೇಂದ್ರ ನಿರ್ದೇಶಕರುಗಳಾದ ಮಾದೇವ್ ಕುಮಾರ್, ನಾಗೇಶ್, ಮರಿಲಿಂಗಯ್ಯ, ಬಸವರಾಜು, ಸೋಮ ಇದ್ದರು.

ವಿಜೃಂಭಣೆಯ ಗ್ರಾಮದೇವತೆ ಹುಣಸಮ್ಮ ರಥೋತ್ಸವ

ಕೆ.ಆರ್.ನಗರ: ತಾಲೂಕಿನ ಗಂಧನಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಹುಣಸಮ್ಮ ದೇವರ ರಥೋತ್ಸವ ಶುಕ್ರವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ವಿವಿಧ ಬಗೆಯ ಹೂಗಳಿಂದ, ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟಿ ಶೃಂಗರಿಸಿದ ರಥಕ್ಕೆ ಉತ್ಸವ ಮೂರ್ತಿ ಹುಣಸಮ್ಮ ದೇವರನ್ನು ಕೂರಿಸಿ ರಥ ಎಳೆಯಲಾಯಿತು. ಈ ವೇಳೆ ಗ್ರಾಮಸ್ಥರು ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ್ದ ಸಹಸ್ರಾರು ಮಂದಿ ಭಕ್ತರು ದೇವರಿಗೆ ಜಯಕಾರ ಕೂಗಿದರು.

ಇದಕ್ಕೂ ಮೊದಲು ಕಪ್ಪಡಿ ಕ್ಷೇತ್ರದ ಬಳಿ ಕಾವೇರಿ ನದಿಯಿಂದ ಹುಣಸಮ್ಮ ದೇವರ ಉತ್ಸವ ಮೂರ್ತಿಗೆ ಗಂಗಾ ಪೂಜೆ ನಡೆಸಿ, ವಿವಿಧ ಕಲಾತಂಡಗಳೊಂದಿಗೆ ಗ್ರಾಮಕ್ಕೆ ಮೆರವಣಿಗೆಯಲ್ಲಿ ತರಲಾಯಿತು. ನಂತರ ಹೂವಿನ ಪಲ್ಲಕ್ಕಿಯಲ್ಲಿ ದೇವರನ್ನು ಕೂರಿಸಿ ಸಾಂಪ್ರಾದಾಯಿಕ ಪೂಜೆ ನಡೆಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕೊಂಬು, ಕಹಳೆ, ಮಂಗಳ ವಾದ್ಯ, ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.



ಹುಣಸಮ್ಮ ದೇವರ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಆನಂತರ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ತಂಬಿಟ್ಟು ಆರತಿ ನೈವೇದ್ಯವನ್ನು ದೇವರಿಗೆ ಸಲ್ಲಿಸಿದರು. ರಥೋತ್ಸವದ ಅಂಗ ವಾಗಿ ಜಾತ್ರೆ ಕಟ್ಟಲಾಗಿದ್ದು ಮಕ್ಕಳು ಆಟಿಕೆ ಸಾಮಾನುಗಳು ಮತ್ತು ಸಿಹಿ ತಿಂಡಿಗಳ ವ್ಯಾಪಾರ ಜೋರಾಗಿತ್ತು. ಗ್ರಾಮದ ಬೀದಿಗಳನ್ನು ತರಳಿ ತೋರಣ ಮತ್ತು ವಿದ್ಯುತ್ ದೀಪಾಂಲಕಾರದಿಂದ ಶೃಂಗರಿಸಲಾಗಿತ್ತು.

ರಥದ ಸುತ್ತ ಪ್ರದಕ್ಷಿಣೆ ಹಾಕಿದ ಭಕ್ತರು ಹಣ್ಣು ದನವ ಎಸೆದು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥಿಸಿದರು.

ರಥೋತ್ಸವದಲ್ಲಿ ಶಾಸಕ ಡಿ.ರವಿಶಂಕರ್, ಗ್ರಾ.ಪಂ. ಅಧ್ಯಕ್ಷೆ ಮಾದೇವಿಬಲರಾಂ, ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಎಸ್.ವೆಂಕಟೇಶ್, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಜಿ.ಎಂ.ಹೇಮಂತ್, ಸಮಾಜ ಸೇವಕಿ ಪ್ರೇಮಶಿವಣ್ಣ ಯಜಮಾನ್ ಜಿ.ಎನ್.ರಘು, ಮುಖಂಡರಾದ ಜಿ.ಆರ್.ಕೃಷ್ಣೇಗೌಡ, ಜಿ.ಕೆ. ಮಹಾದೇವ್, ಜಿ.ಆರ್.ಸತೀಶ್, ಬಾರ್ ಹರೀಶ್, ಮಂಜುನಾಥ್, ಕೆಂಪರಾಜು, ಜಿ.ಡಿ.ಅರುಣ್‌ಕುಮಾರ್ ಪಾಲ್ಗೊಂಡಿದ್ದರು.

ಪಿಯುಸಿಯಲ್ಲಿ ಆದಿವಾಸಿ ಹೆಣ್ಣು ಮಕ್ಕಳ ಸಾಧನೆ





ಹುಣಸೂರು.ಏ.12– ತಾಲೂಕಿನ ತೆಕ್ಕಲು ಹಾಡಿಯ ಜೇನುಕುರುಬ ಆದಿವಾಸಿ ಹೆಣ್ಣು ಮಕ್ಕಳು ಪಿಯುಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶಿವಣ್ಣ ಜಾಜಿ ದಂಪತಿ ಮಗಳು ಲಕ್ಷ್ಮಿ ವಾಣಿಜ್ಯ ವಿಷಯದಲ್ಲಿ ಶೇ. 68.5ರಷ್ಟು ಅಂಕಗಳಿಸಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ಇನ್ನೊರ್ವ ವಿದ್ಯಾರ್ಥಿನಿ ಹುಣಸೂರಿನ ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನಲ್ಲಿ ಕಲಾ ವಿಷಯದಲ್ಲಿ ವ್ಯಾಸಂಗ ಮಾಡಿ ಶಿವಣ್ಣ ರಾಜಮ್ಮ ದಂಪತಿ ಮಗಳು ಸಿಂಚನ ಶೇ. 64 ರಷ್ಟು ಅಂಕಗಳಿಸಿ ಪ್ರಥಮದರ್ಜೆಯಲ್ಲಿ ಉತ್ತೀರ್ಣ ಆಗಿ ಹಾಡಿಯಲ್ಲಿ ಓದುವ ಮಕ್ಕಳಿಗೆ ಪ್ರೇರಣೆ ಆಗಿದ್ದಾರೆ.

ಶ್ರೀರಾಮ ನವಮಿ ಅಂಗವಾಗಿ ಮಕ್ಕಳಿಂದ ವಿವಿಧ ಸಾಂಸ್ಕೃತಿಕ, ಸಂಗೀತ ಕಾರ್ಯಕ್ರಮ

ಸರಗೂರು: ಪಟ್ಟಣದ ಆರ್ಯ ಈಡಿಗರ ಶ್ರೀ ಕೋದಂಡರಾಮ ಮಂದಿರದಲ್ಲಿ ರಾಮನವಮಿ ಅಂಗವಾಗಿ ಮಕ್ಕಳು ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮುಖಂಡರಾದ ಬುಲೆಟ್ ಮಂಜಣ್ಣ ಮಾತನಾಡಿ ಶ್ರೀರಾಮ ಭಕ್ತಿ ಮತ್ತು ಏಕತೆಯ ವಾತಾವರಣವನ್ನು ಸೃಷ್ಟಿಸುವ ದೇವರು. ಇದರಿಂದ ಎಲ್ಲಾ ಕಡೆಯಲ್ಲೂ ಶ್ರೀರಾಮನಿಗೆ ಪ್ರಿಯವಾದ ಸಾಂಸ್ಕೃ ತಿಕ ಮತ್ತು ಸಂಗೀತ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುತ್ತವೆ ಎಂದರು



ಮಕ್ಕಳಿಗೆ ಬುಲೇಟ್ ಮಂಜಣ್ಣ ಸಹಾಯಧನ ನೀಡಿದರು.

ಇದೇ ವೇಳೆ ವಿವಿಧ ವೇಷ ತೊಟ್ಟು ಗಮನ ಸೆಳೆದ ಎಲ್ಲಾ ಮಕ್ಕಳಿಗೂ ಬುಲೆಟ್ ಮಂಜಣ್ಣ ಸಹಾಯಧನ ನೀಡಿದರು. ಮಹಿಳೆಯರು ಶ್ರೀರಾಮನ ಕುರಿತು ಭಕ್ತಿ ಹಾಡುಗಳನ್ನು ಹಾಡಿದರು, ಇದಕ್ಕೂ ಮುನ್ನ ಶ್ರೀ ಕೋದಂಡರಾಮನಿಗೆ ವಿಶೇಷ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ಮಾಡಿ ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು, ಪೂಜಾ ಸೇವೆಯನ್ನು ಪುರೋಹಿತ್ ಹರೀಶ್ ಹಾಗೂ ಸುಕೃತ್ ನೆರವೇರಿಸಿದರು.

ಆರ್ಯ ಈಡಿಗರ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಸದಸ್ಯ ನೂರಾಳಸ್ವಾಮಿ, ಮುಖಂಡರಾದ ವೆಂಕಟೇಶ್, ರವಿಗೌಡ್ರು, ರಾಜಣ್ಣ, ವರ್ತಕರ ಸಂಘದ ಮಾಜಿ ಅಧ್ಯಕ್ಷ ಶ್ರೀನಿವಾಸ್, ಲೋಕನಾಥ್, ಫೈನಾನ್ಸ್ ಕೃಷ್ಣ, ಅಂಗಡಿ ಗೋವಿಂದರಾಜು, ನಾಗೇಶ್, ಅಪ್ಪು ಹೋಟೇಲ್ ಅಶ್ವತ್, ಮಹಿಳಾ ಸಂಘದವರು ಸಮಾಜದ ಮುಖಂಡರು ಯುವಕ ಸಂಘದವರು ಭಾಗವಹಿಸಿದ್ದರು.

ಬದನವಾಳುವಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ

ಇದು ಪ್ರತಿಮೆಯಲ್ಲ ಅಂಬೇಡ್ಕರ್ ಆದರ್ಶಗಳನ್ನು ಜೀವಂತವಾಗಿರಿಸುವ ಆರದ ದೀಪ

ನಂಜನಗೂಡು, ಏ.12– ಬಾಬಾ ಸಾಹೇಬರ ತತ್ವ ಸಿದ್ಧಾಂತಗಳು, ಅವರು ಸಮಾಜ ಪರಿವರ್ತನೆಗಾಗಿ ನಡೆಸಿದ ಹೋರಾಟದ ಬದುಕು, ನಮ್ಮೆಲ್ಲರಿಗೂ ದಾರಿದೀಪವಾಗಿದೆ. ಬದನವಾಳು ಗ್ರಾಮದಲ್ಲಿ ಉದ್ಘಾಟನೆ ಆಗಿರುವುದು ಕೇವಲ ಪ್ರತಿಮೆಯಲ್ಲ, ಬಾಬಾ ಸಾಹೇಬರ ಅವರ ಆದರ್ಶಗಳನ್ನು ಸದಾ ಜೀವಂತವಾಗಿರಿಸುವ ಆರದ ದೀಪವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ಬದನವಾಳು ಗ್ರಾಮದಲ್ಲಿ ಗ್ರಾಮಸ್ಥರು 35 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬರ ಪ್ರತಿಮೆಯ ಅನಾವರಣದೊಂದಿಗೆ ಬಾಬಾ ಸಾಹೇಬರ ತತ್ವ, ಸಿದ್ಧಾಂತ, ಅವರು ಜೀವನದುದ್ದಕ್ಕೂ ಕಷ್ಟಪಟ್ಟು ನಡೆಸಿದ ಹೋರಾಟದ ಬದುಕನ್ನು ನಾವೆಲ್ಲರೂ ಮೈಗೂಡಿಸಿಕೊಂಡು ನ್ಯಾಯ, ಸಮಾನತೆ ಮತ್ತು ಭ್ರಾತೃತ್ವದ ಮಾರ್ಗದಲ್ಲಿ ಸಾಗುವ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಒಳ್ಳೆಯ ವಾತಾವರಣ ನಿರ್ಮಿಸುವುದು ದೊಡ್ಡಜವಾಬ್ದಾರಿಯಾಗಿದೆ ಈ ಪ್ರತಿಮೆ ಎಲ್ಲರಿಗೂ ಸ್ಫೂರ್ತಿ ನೀಡಲಿದೆ ಎಂದರು.

ಬದನವಾಳು ಗ್ರಾಮ ಐತಿಹಾಸಿಕ ಹಿನ್ನೆಲೆಯುಳ್ಳ ಗ್ರಾಮವಾಗಿದ್ದು, ಸ್ವಾತಂತ್ರ್ಯ ಹೋರಾಟಕ್ಕೂ ಈ ಗ್ರಾಮಕ್ಕೂ ಉತ್ತಮ ನಂಟಿದೆ. ರಾಹುಲ್ ಗಾಂಧಿಯವರು ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಿ ಇತಿಹಾಸ ಸೃಷ್ಟಿಸಿದ್ದರು, ಗಾಂಧೀಜಿಯವರು ಸ್ಥಾಪಿಸಿರುವ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಅಭಿವೃದ್ಧಿಪಡಿಸಿ ಯುವಕ ಯುವತಿಯರಿಗೆ ಉದ್ಯೋಗ ಸೃಷ್ಟಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ, ಪ್ರಮುಖವಾಗಿ ನೀರಾವರಿ ಸೌಲಭ್ಯ ಕಲ್ಪಿಸಿ ಈ ಭಾಗವನ್ನು ಹಸಿರೀಕರಣ ಮಾಡಲು 90 ಕೋಟಿ ವೆಚ್ಚದಲ್ಲಿ ದೇವನೂರು ಏತ ನೀರಾವರಿ ಯೋಜನೆಗೆ ಬಜೆಟ್‌ನಲ್ಲಿ ಘೋಷಣೆ ಮಾಡಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದರು.



ಬದನವಾಳುವಿನಲ್ಲಿ ಶನಿವಾರ ಶಾಸಕ ದರ್ಶನ್ ಧ್ರುವನಾರಾಯಣ್ ಅಂಬೇಡ್ಕರ್ ಪ್ರತಿಮೆಯನ್ನು ಅನಾವರಣಗೊಳಿಸಿದರು.

ಸಂಸದ ಸುನಿಲ್ ಬೋಸ್ ಮಾತನಾಡಿ, ಶ್ರೀ ರಾಮನ ಪಾದ ಸ್ಪರ್ಶದಿಂದ ಅಹಲ್ಯಾ ಶಾಪ ವಿಮೋಚನೆಯಾದಂತೆ, ಬಾಬಾ ಸಾಹೇಬರ ಸಂವಿಧಾನದ ಮೂಲಕ ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದ ಶೋಷಿತ ಸಮುದಾಯಗಳು ಶಾಪ ವಿಮೋಚನೆಯಾಗಿದೆ, ಸಮಾನತೆಯಿಂದ ಬದುಕಲು ಅವಕಾಶ ಕಲ್ಪಿಸಿದ್ದಾರೆ. ದುರಂತವೆಂದರೆ ಸಂವಿಧಾನ ಬಂದು 78 ವರ್ಷ ಕಳೆದರೂ ಸಹ ಅಸ್ಪೃಶ್ಯತೆ ದೂರವಾಗಿಲ್ಲ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ದಲಿತ ಮುಖಂಡ ರಾಮಸ್ವಾಮಿ, ವಾಣಿ ಕೆ.ಶಿವರಾಂ, ಡಾ.ಪುಷ್ಪಲತಾ ಅಪ್ಪಾಜಿ, ನಗರಸಭಾ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಹಾಡ್ಯ ರಂಗಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ತಾಪಂ ಮಾಜಿ ಸದಸ್ಯ ಬಿ.ಎಸ್. ರಾಮು, ಮುಖಂಡರಾದ ಸೋಮು, ಗುರುಸ್ವಾಮಿ, ವಿಜಯ್ ಕುಮಾರ್, ಕುಂಬ್ರಹಳ್ಳಿ ಸುಬ್ಬಣ್ಣ, ಎನ್.ಎಂ.ಮಂಜುನಾಥ್, ಶ್ರೀನಿವಾಸಮೂರ್ತಿ, ಕಳಲೆ ರಾಜೇಶ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಗ್ರಾಪಂ ಸದಸ್ಯರಾದ ಮಹದೇವು, ಮುದ್ದುಮಾದಶೆಟ್ಟಿ, ಮಾಜಿ ಗ್ರಾಪಂ ಸದಸ್ಯ ಮಂಡ್ಯ ಮಹದೇವು, ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹೆಮ್ಮರಗಾಲ ಸೋಮಣ್ಣ, ತಾಪಂ ಮಾಜಿ ಸದಸ್ಯ ಶಿವಣ್ಣ, ಜಿಪಂ ಮಾಜಿ ಸದಸ್ಯ ಲತಾಸಿದ್ದಶೆಟ್ಟಿ, ಸೇರಿದಂತೆ ಗ್ರಾಮದ ಯಜಮಾನರು, ಗ್ರಾಮಸ್ಥರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾದರೆ ದಲಿತರಿಗೆ ಅವಕಾಶ ಕಲ್ಪಿಸಿ

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ. ಮಾಧ್ಯಮಗಳಲ್ಲಿ ಪ್ರತಿದಿನ ಮುಖ್ಯಮಂತ್ರಿಗಳು ಬದಲಾವಣೆಯ ವಿಚಾರ ಮುನ್ನೆಲೆಗೆ ಬರುತ್ತಿದೆ. ಮುಖ್ಯಮಂತ್ರಿ ಬದಲಾಗುವುದು ಬಿಡುವುದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ, ಒಂದು ವೇಳೆ ಮುಖ್ಯಮಂತ್ರಿ ಬದಲಾದಲ್ಲಿ ದಲಿತರಿಗೆ ಏಕೆ ಅವಕಾಶ ಕಲ್ಪಿಸಬಾರದು? ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಂತರ ದಲಿತರಿಗೆ ಮುಖ್ಯಮಂತ್ರಿಯಾಗುವ ಅವಕಾಶ ನೀಡಬೇಕು ಎಂದರು.

ಒಳ ಮೀಸಲಾತಿ ಸಂಬಂಧ ಅವಹೇಳನಕಾರಿ ಹೇಳಿಕೆ

ಸಿಎಂ ಸಿದ್ದು, ಸಚಿವರ ಕ್ಷಮೆಗೆ ಆಗ್ರಹ



ತಿ.ನರಸೀಪುರ ಏ.12– ಒಳ ಮೀಸಲಾತಿ ಸಂಬಂಧ ಮುಖಂಡ ಭಾಸ್ಕರ್ ಪ್ರಸಾದ್ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್. ಸಿ.ಮಹದೇವಪ್ಪನವರ ಬಗ್ಗೆ ಹಗುರವಾಗಿ ಮಾತನಾಡಿದ್ದು, ಅವರು ಈ ಕೂಡಲೇ ಈ ಇಬ್ಬರು ನಾಯಕರ ಕ್ಷಮೆಯಾಚಿಸಬೇಕು ಎಂದು ಸುನಿಲ್ ಬೋಸ್ ಯುವ ಬ್ರಿಗೇಡ್ ಹಾಗೂ ರಾಜ್ಯ ಅಹಿಂದ ಬ್ರಿಗೇಡ್ ತಿ.ನರಸೀಪುರ ಕ್ಷೇತ್ರದ ಅಧ್ಯಕ್ಷ ಕನ್ನಾಯಕನಹಳ್ಳಿ ಕುಮಾರ ರಾಮೇಗೌಡ ಅಗ್ರಹಿಸಿದ್ದಾರೆ.

ಬಲಗೈ ಮತ್ತು ಎಡಗೈ ದಲಿತ ಸಮುದಾಯದ ಎರಡೂ ಕಣ್ಣುಗಳು ಇದ್ದ ಹಾಗೆ, ಎರಡೂ ಸಮುದಾಯಗಳಿಗೂ ಸಂವಿಧಾನದಲ್ಲಿ ತನ್ನದೇ ಆದ ಮಹತ್ವ ಇದೆ. ಪ್ರತಿ ತಳ ಮಟ್ಟದ ಸಮುದಾಯಗಳಿಗೂ ಸಮುದಾಯದ ಜನಸಂಖ್ಯೆವಾರು ಮೀಸಲಾತಿ ಸಿಗಬೇಕು ಎಂಬುದು ನನ್ನ ಉದ್ದೇಶ, ನಾನು ಒಳ ಮೀಸಲಾತಿ ಪರವಾಗಿ ಇದ್ದೇನೆ ಎಂದಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಳಮೀಸಲಾತಿ ಪರ ಇದೆ ಎಂದು ಅವರು ತಿಳಿಸಿದ್ದು, ಅದನ್ನು ಜಾರಿಗೊಳಿಸುವ ಸಂಬಂಧ ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಂಡಿದ್ದಾರೆ. ಆದರೂ ಭಾಸ್ಕರ್ ಪ್ರಸಾದ್ ಎಂಬ ವ್ಯಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಹಿರಿಯ ದಲಿತ ನಾಯಕ, ದಲಿತರ ಶ್ರೇಯೋ ಭಿವೃದ್ಧಿಗೆ ಶ್ರಮಿಸುತ್ತಿರುವ, ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಮಹದೇವಪ್ಪ, ಬಗ್ಗೆ ಹಗುರ ವಾಗಿ ಮಾತನಾಡಿದ್ದಾರೆ ಎಂದರು. ಅವರು ಬಳಸಿರುವ ಪದ ಬಳಕೆ ಶೋಭೆ ತರುವುದಲ್ಲ, ಅವರು ದಲಿತರ ಇಬ್ಭಾಗ ಮಾಡಿ ದಲಿತರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಸಚಿವರ ತವರು ಕ್ಷೇತ್ರದಲ್ಲಿಯೇ ಬಂದು ಸಚಿವರ ಬಗ್ಗೆ ಹದ್ದು ಮೀರಿ ಮಾತಾಡಿರುವುದು ಬಹಳ ನೋವು ತರಿಸಿದೆ, ಇವರು ಬಹಿರಂಗವಾಗಿ ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕ್ಷಮೆ ಕೇಳಬೇಕು. ಇಲ್ಲವಾದಲ್ಲಿ ಅವರ ವಿರುದ್ಧ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಪುಟ್ಟಮ್ಮ ನಿಧನ



ಹುಣಸೂರು: ತಾಲೂಕಿನ ಬೋಳನಹಳ್ಳಿ ಗ್ರಾಮದ ಪುಟ್ಟಮ್ಮ (88) ಶನಿವಾರ ಸಂಜೆ ನಿಧನರಾದರು. ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಶಿಕ್ಷಕ ಮಹೇಶ್ ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೈಸೂರು ಮಿತ್ರ ಭಾನುವಾರ 13 ಏಪ್ರಿಲ್ 2025

ಐಪಿಎಲ್ ಹಂಗಾಮ

ಗುಜರಾತ್ ವಿರುದ್ಧ ಲಖನೌ ಸೂಪರ್ ಜೈಂಟ್ಸ್ ಭರ್ಜರಿ ಜಯ



ಲಖನೌ, ಏ.12– ನಿಕೋಲಸ್ ಪೂರನ್ (61) ಹಾಗೂ ಏಡೆನ್ ಮಾರ್ಕರಮ್ (58) ಅವರ ಸಿಡಿಲಬ್ಬರದ ಅರ್ಧಶತಕಗಳ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್, ಗುಜರಾತ್ ಟೈಟನ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯಗಳಿಸಿದೆ.


ಇಲ್ಲಿನ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ನಾಯಕ ಶುಭಮನ್ ಗಿಲ್ 38 ಎಸೆತಗಳಲ್ಲಿ 1 ಸಿಕ್ಸ್, 6 ಬೌಂಡರಿ ಸಹಿತ 60 ರನ್ ಗಳಿಸಿದರೆ, ಸಾಯಿ ಸುದರ್ಶನ್ 37 ಎಸೆತಗಳಲ್ಲಿ 1 ಸಿಕ್ಸ್, 7 ಬೌಂಡರಿ ಸಹಿತ 56 ಗಳಿಸಿ ತಂಡಕ್ಕೆ ನೆರವಾದರು. ಲಖನೌ ಪರ ಶಾರ್ದೂಲ್ ಠಾಕೂರ್, ರವಿ ಬಿಷ್ಣೋಯ್ ತಲಾ 2 ವಿಕೆಟ್ ಪಡೆದರು.

181 ರನ್ ಗುರಿ ಬೆನ್ನಟ್ಟಿದ ಲಖನೌ ಸೂಪರ್ ಜೈಂಟ್ಸ್ ಇನ್ನೂ ಮೂರು ಎಸೆತಗಳು ಬಾಕಿ ಉಳಿದಿರುವಂತೆಯೇ 19.3 ಓವರ್‌ಗಳಲ್ಲಿ ನಾಲ್ಕು ವಿಕೆಟ್ ನಷ್ಟಕ್ಕೆ ಜಯಗಳಿಸಿತು. ಮತ್ತೆ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದ ನಿಕೋಲಸ್ ಪೂರನ್ 34 ಎಸೆತಗಳಲ್ಲಿ 7 ಭರ್ಜರಿ ಸಿಕ್ಸ್, 1 ಬೌಂಡರಿ ಸಹಿತ 61 ರನ್ ಚಚ್ಚಿದರು. ಹಾಗೆಯೇ ಉತ್ತಮ ಆರಂಭ ನೀಡಿದ ಏಡೆನ್ ಮಾರ್ಕರಮ್ 31 ಎಸೆತಗಳಲ್ಲಿ 1 ಸಿಕ್ಸ್, 9 ಬೌಂಡರಿ ಸಹಿತ 58 ರನ್ ಗಳಿಸಿ ತಂಡದ ಗೆಲುವಿಗೆ ಕಾರಣರಾದರು.

ನಾಯಕ ರಿಷಬ್ ಪಂತ್ 21 ರನ್, ಆಯುಷ್ ಬಡೋನಿ ಅಜೇಯ 28 ರನ್ ಗಳಿಸಿ ನೆರವಾದರು. ಗುಜರಾತ್ ಪರ ಪ್ರಸಿದ್ಧ ಕೃಷ್ಣ (26ಕ್ಕೆ 2) ಹೊರತುಪಡಿಸಿ ಎಲ್ಲ ಬೌಲರ್‌ಗಳು ದುಬಾರಿಯೆನಿಸಿದರು. ಮೊಹಮ್ಮದ್ ಸಿರಾಜ್ ನಾಲ್ಕು ಓವರ್‌ಗಳಲ್ಲಿ 50 ರನ್ ಬಿಟ್ಟುಕೊಟ್ಟು ದುಬಾರಿಯೆನಿಸಿದರು. ಏಡೆನ್ ಮಾರ್ಕರಮ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಭಿಷೇಕ್ ಶರ್ಮಾ ಶತಕ; ಪಂಜಾಬ್ ಕಿಂಗ್ಸ್ ವಿರುದ್ಧ ಸನ್ ರೈಸರ್ಸ್ ಹೈದರಾಬಾದ್‌ಗೆ ರೋಚಕ ಜಯ

ಹೈದರಾಬಾದ್, ಏ.12– ಅಭಿಷೇಕ್ ಶರ್ಮಾ(141), ಟ್ರಾವಿಸ್ ಹೆಡ್ (66) ಅವರ ಅಮೋಘ ಬ್ಯಾಟಿಂಗ್ ಪ್ರದರ್ಶನ, ದಾಖಲೆ 171 ರನ್ ಜೊತೆಯಾಟದೊಂದಿಗೆ ಪಂಜಾಬ್ ಕಿಂಗ್ಸ್ ವಿರುದ್ಧ ಸನ್ ರೈಸರ್ಸ್ ಹೈದರಾಬಾದ್ 8 ವಿಕೆಟ್‌ಗಳ ರೋಚಕ ಜಯಗಳಿಸಿತು. ಈ ಮೂಲಕ ಸತತ ಸೋಲಿನಿಂದ ಕಂಗೆಟ್ಟಿದ್ದ ಸನ್ ರೈಸರ್ಸ್ ಜಯದ ಹಾದಿಗೆ ಮರಳಿತು.



ಇಲ್ಲಿನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ಸ್ಟೇಡಿಯಂನಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 245 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಆರಂಭಿಕರಾದ ಪ್ರಿಯಾಂಶ್ ಆರ್ಯ 36 ರನ್, ಪ್ರಬ್‌ಸಿಮ್ರಾನ್ 43 ರನ್ ಗಳಿಸಿ ಉತ್ತಮ ಆರಂಭ ನೀಡಿದರೆ, ಶ್ರೇಯಸ್ ಅಯ್ಯರ್ ಕೇವಲ 36 ಎಸೆತಗಳಲ್ಲಿ 6 ಸಿಕ್ಸ್, 6 ಬೌಂಡರಿ ಸಹಿತ 82 ರನ್‌ಗಳಿಸಿ ತಂಡ ಬೃಹತ್ ಮೊತ್ತ ಗಳಿಸಲು ನೆರವಾದರು. ಸನ್ ರೈಸರ್ಸ್ ಪರ ಹರ್ಷಲ್ ಪಟೇಲ್ 4, ಈಶಾನ್ ಮಾಲಿಂಗ 2 ವಿಕೆಟ್ ಪಡೆದರು.

ದಾಖಲೆ ಜೊತೆಯಾಟ: 246 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಸನ್ ರೈಸರ್ಸ್ ಹೈದರಾಬಾದ್ 18.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 247 ರನ್‌ಗಳಿಸುವ ಮೂಲಕ ಸನ್ ರೈಸರ್ಸ್ ಹೈದರಾಬಾದ್ 8 ವಿಕೆಟ್‌ಗಳ ರೋಚಕ ಜಯಗಳಿಸಿತು. ಟ್ರಾವಿಸ್ ಹೆಡ್ 66 ರನ್ ಗಳಿಸಿದರೆ, ಅಭಿಷೇಕ್ ಶರ್ಮಾ ಕೇವಲ 55 ಎಸೆತಗಳಲ್ಲಿ 14 ಬೌಂಡರಿ, 10 ಭರ್ಜರಿ ಸಿಕ್ಸರ್‌ಗಳ ಸಹಿತ 141 ರನ್‌ಗಳ ಶತಕದೊಂದಿಗೆ ಐಪಿಎಲ್ ಇತಿಹಾಸದಲ್ಲಿ ಅತ್ಯಧಿಕ ರನ್ ಗಳಿಸಿದ ಭಾರತದ ಮೊದಲ ಬ್ಯಾಟರ್ ಎಂಬ ದಾಖಲೆಯನ್ನು ಬರೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	4	4	0	0	8
ಗುಜರಾತ್	6	4	2	0	8
ಲಕ್ನೋ	6	4	2	0	8
ಕೋಲ್ಕತ್ತಾ	6	3	3	0	6
ಬೆಂಗಳೂರು	5	3	2	0	6
ಪಂಜಾಬ್	5	3	2	0	6
ರಾಜಸ್ತಾನ್	5	2	3	0	4
ಹೈದರಾಬಾದ್	6	2	4	0	4
ಮುಂಬೈ	5	1	4	0	2
ಚೆನ್ನೈ	6	1	5	0	2

ಇಂದಿನ ಪಂದ್ಯಗಳು

ರಾಜಸ್ಥಾನ್ ರಾಯಲ್ಸ್
V/S
ರಾಯಲ್ ಚಾಲೆಂಜರ್ಸ್ ಬೆಂಗಳೂರು
ಸಮಯ: ಮಧ್ಯಾಹ್ನ 3.30
ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

ಡೆಲ್ಲಿ ಕ್ಯಾಪಿಟಲ್ಸ್
V/S
ಮುಂಬೈ ಇಂಡಿಯನ್ಸ್
ಸಮಯ: ಸಂಜೆ 7.30
ಸ್ಥಳ : ಅರುಣ್ ಜೆಟ್ಲಿ ಕ್ರೀಡಾಂಗಣ, ದೆಹಲಿ

ವಿದ್ಯಾವಂತರೇ ನಕ್ಸಲಿಸಂ ಚಟುವಟಿಕೆಯಲ್ಲಿ ತೊಡಗಿದ್ದಾರೆ

ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಆತಂಕ

ಮೈಸೂರು, ಏ.12(ಆರ್‌ಕೆ)–ವಿದ್ಯಾವಂತ ನಿರುದ್ಯೋಗಿಗಳೇ ಇಂದು ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಇಂದಿಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಹಾಜನ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ 'ಸಮಕಾಲೀನ ಯುಗದಲ್ಲಿ ಮಾನವ ಹಕ್ಕುಗಳ ಪ್ರಸ್ತುತತೆ–ಹೊಸ ಸವಾಲು ಗಳು' ವಿಷಯ ಕುರಿತ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ, ಮಾತನಾಡುತ್ತಿದ್ದರು.

ವಿದ್ಯಾರ್ಹತೆಗೆ ತಕ್ಕಂತಹ ಉದ್ಯೋಗ, ಜೀವನ ಕಟ್ಟಿಕೊಳ್ಳಲು ಸೌಲಭ್ಯ, ಅವಕಾಶಗಳು ಸಿಗದಿರುವುದರಿಂದ ಹಾಗೂ ಸಮಾಜದಲ್ಲಿ ನಡೆಯುವ ಅನ್ಯಾಯ, ದೌರ್ಜನ್ಯ, ಅಸಮಾನತೆಯನ್ನು ಸಹಿಸಲಾಗದೇ ವಿದ್ಯಾವಂತರು ನಕ್ಸಲ್ ಚಟುವಟಿಕೆ ಹಾದಿ ಹಿಡಿಯುತ್ತಿದ್ದಾರೆ ಎಂದು ತಿಳಿಸಿದರು.

ಭಯೋತ್ಪಾದನೆ ಮತ್ತು ನಕ್ಸಲಿಸಂ ಸಮಾಜಕ್ಕೆ ಕಂಟಕವಾಗುತ್ತಿದ್ದು, ಮಾನವ ಹಕ್ಕುಗಳ ರಕ್ಷಣೆಯೂ ಇಂದು ದೊಡ್ಡ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ನಕ್ಸಲಿಸಂ ಬೆಳವಣಿಗೆ, ಅದರಿಂದ ಉಂಟಾಗಿರುವ ಸಮಸ್ಯೆಗಳ ಇತ್ಯರ್ಥಕ್ಕೂ ಗಮನಹರಿಸಬೇಕಿದೆ ಎಂದು ಪಾಟೀಲ್ ಅಭಿಪ್ರಾಯಪಟ್ಟರು.

ಮಾನವ ಹಕ್ಕುಗಳ ಸಂರಕ್ಷಣೆ ಕುರಿತಂತೆ ಚರ್ಚೆ ನಡೆದ ಬಳಿಕ ವಿಶ್ವಸಂಸ್ಥೆಯು ಮಾನವ ಹಕ್ಕುಗಳ ರಕ್ಷಣೆಗೆ ನಿರ್ಧಾರ ಕೈಗೊಂಡಿತು. ಸಂವಿಧಾನವು ಹಲವು ಮೂಲ ಭೂತ ಹಕ್ಕುಗಳನ್ನು ನಮಗೆ ನೀಡಿದೆ ಅವುಗಳನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂದಿಗೂ ಹಲ ವರು ಬಡತನದ ಬೇಗೆಯಲ್ಲಿ ನೊಂದಿದ್ದಾರೆ. ಶಿಕ್ಷಣ ಮತ್ತು ಕಾನೂನಿನ ಅರಿವಿನ ಕೊರತೆ ಅದಕ್ಕೆ ಕಾರಣ ಎಂದ ನ್ಯಾಯಾಧೀಶರು, ಮಾನವ ಹಕ್ಕುಗಳ ರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕೆಂದು ತಿಳಿಸಿದರು.



ಮೈಸೂರಿನ ಮಹಾಜನ ಕಾನೂನು ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಮಾನವ ಹಕ್ಕುಗಳ ಅಗತ್ಯ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳ ಅಧ್ಯಕ್ಷ ಬಿ.ಎ. ಪಾಟೀಲ್ ಉದ್ಘಾಟಿಸಿದರು. (ಎಡಚಿತ್ರ) ಕಾಲೇಜಿನ ಪ್ರಾಂಶಪಾಲೆ ಕೆ.ಸೌಮ್ಯ, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಹಾಗೂ ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಮಾತನಾಡಿ, ಪೊಲೀಸ್ ಠಾಣೆ ಮತ್ತು ಕಾರಾಗೃಹಗಳಲ್ಲೇ ಹೆಚ್ಚು ಮಾನವ ಹಕ್ಕುಗಳ ಉಲ್ಲಂಘನೆ ಯಾಗುತ್ತಿದೆ. ರಕ್ಷಣೆ ನೀಡುವ ಜಾಗದಲ್ಲೇ ಈ ರೀತಿಯ ವರ್ತನೆ ಮಾಡಿದರೆ ಜನಸಾಮಾನ್ಯರು ಎಲ್ಲಿಂದ ಸಮಾನತೆ, ರಕ್ಷಣೆ ನಿರೀಕ್ಷಿಸಬೇಕು ಎಂದು ಪ್ರಶ್ನಿಸಿದರು. ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ ಹಾಗೂ ಕಾಲೇಜು ಪ್ರಾಂಶುಪಾಲರಾದ ಕೆ.ಸೌಮ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಜೆಡಿಎಸ್ ಸಾಂಸ್ಥಿಕ ಚುನಾವಣಾಧಿಕಾರಿಯಾಗಿ ರವಿಚಂದ್ರೇಗೌಡ ನೇಮಕ

ಮೈಸೂರು, ಏ.12– ಜಾತ್ಯಾತೀತ ಜನತಾ ದಳದ ಸಾಂಸ್ಥಿಕ ಚುನಾವಣೆಗಳ ಸಂಬಂಧ ಮೈಸೂರು ನಗರ ಜೆಡಿಎಸ್ ಸಾಂಸ್ಥಿಕ ಚುನಾವಣೆಗಳಿಗಾಗಿ ನಗರ ಚುನಾವಣಾಧಿಕಾರಿಯಾಗಿ ಜೆಡಿಎಸ್ ರಾಜ್ಯ ವಕ್ತಾರರೂ ಆದ ಎನ್.ಆರ್. ರವಿಚಂದ್ರೇಗೌಡ ಅವರನ್ನು ಪ್ರದೇಶ ಜಾತ್ಯಾತೀತ ಜನತಾದಳದ ರಾಜ್ಯ ಚುನಾವಣಾಧಿಕಾರಿ ಕೆ.ಎ. ತಿಪ್ಪೇಸ್ವಾಮಿ ನೇಮಕ ಮಾಡಿದ್ದಾರೆ.



ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಏ.12(ಜಿಎ)– ಮೈಸೂರಿನ ವಿದ್ಯಾರಣ್ಯಪುರಂ ದಲಿತ ಅಭಿವೃದ್ಧಿ ಸಂಘದ ವತಿಯಿಂದ ಏ. 14 ರಂದು ಬಡಾವಣೆಯ ಸಾರ್ವಜನಿಕ ಹಾಸ್ಟೆಲ್ ಹಿಂಭಾಗದ ಸಮುದಾಯ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಕಾನೂನು ಸಲಹೆಗಾರ ಆರ್.ಲಕ್ಷ್ಮಣ್ ಈ ವಿಷಯ ತಿಳಿಸಿ, ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ನಾರಾಯಣ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ತಪಾಸಣೆ ನಡೆಯಲಿದ್ದು, ಈ ವೇಳೆ ಬಿಪಿ, ಶುಗರ್, ಇಸಿಜಿ, ಎಕೋ, ಹಲ್ಲಿನ ತಪಾಸಣೆ, ಕಣ್ಣಿನ ತಪಾಸಣೆ ಮೊದಲಾದವು ನಡೆಯಲಿದೆ. ನಂತರ ತಮ್ಮ ತಂಡದಿಂದ ಅಂಬೇಡ್ಕರ್, ಬುದ್ಧ, ಬಸವ ಕುರಿತ ಜಾಗೃತಿ ಗೀತೆಗಳ ಗಾಯನವಿವೆ. ಹೀಗಾಗಿ ಸಾರ್ವಜನಿಕರು ಪ್ರಯೋಜನ ಪಡೆದುಕೊಳ್ಳಿ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ಅಶೋಕ್, ನೇತ್ರಾವತಿ, ಲತಾ, ಶಿಲ್ಪಾ, ರೇಣುಕಾ, ಗುರುವಯ್ಯ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾಕೂ ಮಹಾರಾಜ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕ್ (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ) +ಜಾತ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
- ಸ್ಕ್ರೀನ್ 2 ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
- ಸ್ಕ್ರೀನ್ 3 ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ. ಜಾಟ್ (ಹಿಂ): ಸಂ.4.10ಕ್ಕೆ.
- ಸ್ಕ್ರೀನ್ 4 ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
- ಸ್ಕ್ರೀನ್ 2 ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 3 ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 4 ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಮತಿ ಮಂಜುಳಾ ನಿಧನ



ಮೈಸೂರು, ಏ.12– ಮೈಸೂರಿನ ಆಲನಹಳ್ಳಿ ಬಡಾವಣೆಯ ನಿವಾಸಿ ಕೆಆರ್ ಆಸ್ಪತ್ರೆಯ ನಿವೃತ್ತ ಪ್ರಾಧ್ಯಾಪಕ ಡಾ.ರಂಗಸ್ವಾಮಿ ಅವರ ಧರ್ಮಪತ್ನಿ ಶ್ರೀಮತಿ ಮಂಜುಳಾ (54) ನಿಧನರಾದರು.

ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ನಾಳೆ (ಏ.13) ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಉಪಾಧ್ಯಕ್ಷರಾದ ಎಚ್.ಎಸ್. ಪುಟ್ಟಸ್ವಾಮಿ ಸಂತಾಪ ಸೂಚಿಸಿದ್ದಾರೆ.

11ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯಜಮಾನ್ ಎಂ. ರಾಮೇಗೌಡರು
(ದೊಡ್ಡ ದಪ್ಪನವರ ಮಗ)
ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು. ನಿಧನ: 13-4-2014

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ನೀವು ನಮ್ಮ ಮನದಲ್ಲಿ ಹಾಗೂ ಜೀವನದಲ್ಲಿ ಎಂದೆಂದಿಗೂ ಅಮರ.
ನಿಮ್ಮ ನೆನಪಿನಲ್ಲಿರುವ: ತಾಯಿ: ಶ್ರೀಮತಿ ಲಕ್ಷ್ಮಮ್ಮ ಪತ್ನಿ: ಶ್ರೀಮತಿ ಸುಶೀಲಮ್ಮ, ಶ್ರೀಮತಿ ಸೌಮ್ಯ, ಶ್ರೀಮತಿ ಎನ್.ಪಿ. ಭವ್ಯರಾಣಿ ಹಾಗೂ ಬಂಡೇ ಮಾದೇಗೌಡರ ಕುಟುಂಬ ವರ್ಗ, ಕೆ.ಜಿ. ಕೊಪ್ಪಲು, ಮೈಸೂರು.


PUBLIC NOTICE

Notice is hereby given that (1) SRI N. AMARNATH, son of Sri. R. Narayana Rao and (2) SRI ABHINAND. A, son of Sri N. Amarnath, are desirous to sell the under mentioned property to my clients and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE-570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Property bearing Site No.163, measuring East to West:12 Meters and North to South:18 Meters, totally measuring 216 Square Meters, situated at 'D' Block, 3rd Stage, Vijayanagar, Devaraja Mohalla, Mysore and bounded on East: Property bearing No.164, West: Property bearing No.162, North:30 Feet Road and South: Property bearing No.149 and 150.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 12.04.2025
Place: Mysore


ಮೈಸೂರು ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ
ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾದ
ಸಹಕಾರಿ ಧುರೀಣರು ಹಾಗೂ ಚಾಮುಂಡೇಶ್ವರಿ ವಿಧಾನ
ಸಭಾ ಕ್ಷೇತ್ರದ ಶಾಸಕರಾದ
ಶ್ರೀ ಜಿ.ಟಿ. ದೇವೇಗೌಡರ ಬೆಂಬಲಿಗರಾದ
ಶ್ರೀ ಎನ್.ಬಿ. ಮಂಜು ರವರಿಗೆ ಹಾಗೂ
ಉಪಾಧ್ಯಕ್ಷರಾದ ಶ್ರೀ ಶಿವಣ್ಣ ರವರಿಗೆ
ಅಭಿನಂದನೆಗಳು
VISMAYA
8050302424